ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ರಾಮಜಾಧವ

ಡಾ. ರಾಮಕೃಷ್ಣ ಮರಾಠೆ

ಕನ್ನಡ ಪುಸ್ತಕ ಪ್ರಾಧಿಕಾರ

# ರಾಮು ಜಾಧವ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ರಾಮ ಜಾಧವ

ಡಾ. ರಾಮಕೃಷ್ಣ ಮರಾಠೆ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**RAMAJADHAVA** A Monograph on Rama Jadhava in kannada Written by: Dr. Ramakrishna Marathe Published By **B.H Mallikarjun**, Administrative Officer, Kannada Pustaka Pradhikara, Kannada Bhavana, J.C.Road, Bengaluru -560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - **ಕನ್ನಡ ಪುಸ್ತಕ ಪ್ರಾಧಿಕಾರ**, ಬೆಂಗಳೂರು

First Print : 2012
Pages : Xvi +78
Copies : 1000
Price : ₹ 50.00

ಮೊದಲ ಮುದ್ರಣ : ೨೦೧೨
ಪುಟಗಳು : Xvi +೭೮
ಪ್ರತಿಗಳು : ೧೦೦೦
ಬೆಲೆ : ₹ ೫೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:

**ಮೆ|| ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# <u>ಕನ್ನಡ ಕಟ್ಟಿದವರು ಮಾಲೆ</u>

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**


ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ.ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ದಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ' ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ-ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩ ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು

ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ದಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್.ಚೆಲುವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ.ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ

## ಲೇಖಕರ ಮಾತು

ರಾಮು ಜಾಧವ, ಮರಾಠಿ ಮನೆಯಲ್ಲಿ ಹುಟ್ಟಿದರು. ಕನ್ನಡ ಓಣಿಯಲ್ಲಿ ಬೆಳೆದರು. ಏಕೀಕರಣದ ಗಾಳಿ ಉಸಿರಾಡಿಸುತ್ತ ಆಟ ಆಡಿದರು. ಅಪ್ಪಟ ಕನ್ನಡಿಗನಾಗಿ ಕನ್ನಡ ಕಟ್ಟುವ ಕಾರ್ಯದಲ್ಲಿ 'ಕೂಲಿ'ಯಾಗಿ ಕೆಲಸ ಮಾಡಿದರು. ಇತಿಹಾಸಕ್ಕಿಂತ ಭೂಗೋಳದ ಬಗೆಗೆ ಅವರಿಗೆ ಅಪಾರವಾದ ಪ್ರೀತಿ. 'ಅದು ನಮ್ಮ ಮೈ ಮನಸು, ಚರ್ಮ ಚಕ್ಷು, ಸರ್ವಸ್ವ' ಎಂದು ವಾದಿಸುತ್ತಿದ್ದರು. 'ನಿಂತ ನೆಲ ನಮ್ಮನ್ನು ರೂಪಿಸುತ್ತದೆ. ಅಲ್ಲಿಯ ನೀರು ಗಾಳಿ ಬೆಳಕು ಅನ್ನ ಆಹಾರ ನಮ್ಮ ವ್ಯಕ್ತಿತ್ವದ ಭಾಗವಾಗುತ್ತವೆ. ಅವುಗಳನ್ನು ಅಲ್ಲಗಳೆಯುವುದು ಎಂದರೆ ನಮ್ಮನ್ನು ಕಳೆದುಕೊಂಡಂತೆ' ಎಂಬುದು ಜಾಧವರ ಅಭಿಪ್ರಾಯವಾಗಿತ್ತು. ಮರಾಠಿ ಮನೆಮಾತಿನ ಜಾಧವರ ಈ ನಿಲುವೆ ಅವರನ್ನು 'ಕನ್ನಡ ಕೂಲಿ'ಯನ್ನಾಗಿ ರೂಪಿಸಿತು. ಅವರ ಹೋರಾಟದ ಬದುಕು ನಿಜಕ್ಕೂ ಸ್ಮರಣೀಯ.

ಚೆಂಚಣಿ ಅಲ್ಲಮಪ್ರಭು ಸಿದ್ಧ ಸಂಸ್ಥಾನ ಮಠದ ಪರಮ ಪೂಜ್ಯ ಅಲ್ಲಮಪ್ರಭು ಸ್ವಾಮಿಗಳು ಜಾಧವರ ಕರ್ತೃತ್ವದ ಬಗೆಗೆ ತುಂಬ ಅಭಿಮಾನವಿಟ್ಟುಕೊಂಡವರು. ತಮ್ಮ 'ಕನ್ನಡ ಜಾಗೃತಿ ಪುಸ್ತಕ ಮಾಲೆ'ಯಲ್ಲಿ ಜಾಧವರ ಜೀವನ ಸಾಧನೆಯ ಕಿರುಹೊತ್ತಿಗೆಯನ್ನು ಪ್ರಕಟಿಸಿದರು. ಪ್ರೊ. ವಿಜಯಲಕ್ಷ್ಮಿ ರಮೇಶ ಭೋಸಲೆ ಅವರು ಕ್ಷೇತ್ರಕಾರ್ಯ ಮಾಡಿ ಆ ಪುಸ್ತಕವನ್ನು ರಚಿಸಿದರು. ಅದಕ್ಕೆ ಅನೇಕ ವಿಷಯಗಳನ್ನು ಸೇರಿಸಿ ನಾನು ಪ್ರಸ್ತುತ ಕೃತಿಯನ್ನು ರೂಪಿಸಿದ್ದೇನೆ.

ನಿಪ್ಪಾಣಿ, ಚಿಕ್ಕೋಡಿ, ಕುಂದರ ನಾಡಿನ ಪರಿಸರದಲ್ಲಿ ಜಾಧವರು ಮಾಡಿದ ಕೆಲಸಗಳ ಬಗೆಗೆ ಕತೆ ಮಾಡಿ ಹೇಳುವ ಹಿರಿಯರಿದ್ದಾರೆ. ಅವರನ್ನು ಸಂದರ್ಶಿಸಿ ಅನೇಕ ಮಹತ್ವದ ಸಂಗತಿಗಳನ್ನು ಈ ಕೃತಿಯಲ್ಲಿ ನಿರೂಪಿಸಿದ್ದೇನೆ. ನಾಡೋಜ ಡಾ. ಪಾಟೀಲ ಪುಟ್ಟಪ್ಪ, ಡಾ. ಸರಜೂ ಕಾಟ್ಕರ್, ರಾಯನಗೌಡ ಪಾಟೀಲ ಅವರನ್ನು ಈ ಸಂದರ್ಭದಲ್ಲಿ ನೆನೆಯಲೇಬೇಕು. ಅವರು ತೋರಿಸಿದ ಹಾದಿ ಹಿಡಿದಾಗ ನನಗೆ ಅನೇಕ ಮುತ್ತುಗಳು ಸಿಕ್ಕವು. ಅವನ್ನು ಇಲ್ಲಿ ಪೋಣಿಸಿದ್ದೇನೆ.

ನಾನು ವಿದ್ಯಾರ್ಥಿಯಾಗಿದ್ದಾಗ ರಾಮು ಜಾಧವರು ಅನೇಕ ರೀತಿಯಿಂದ ಸಹಾಯ ಮಾಡಿದ್ದರು. ಆ ಋಣವನ್ನು ಈ ನುಡಿಚಿತ್ರದ ಮೂಲಕ ಸ್ಮರಿಸಲು 'ಕನ್ನಡ ಪುಸ್ತಕ ಪ್ರಾಧಿಕಾರ'ವು ಇಂಥದೊಂದು ಅವಕಾಶ ಒದಗಿಸಿತೆಂದು ಭಾವಿಸುತ್ತೇನೆ. ಪ್ರಾಧಿಕಾರದ ಅಧ್ಯಕ್ಷ ಡಾ. ಸಿದ್ಧಲಿಂಗಯ್ಯ, ರಿಜಿಸ್ಟ್ರಾರ್ ಬಿ.ಹೆಚ್. ಮಲ್ಲಿಕಾರ್ಜುನ ಮತ್ತು ಪುಸ್ತಕ ಪ್ರಾಧಿಕಾರದ ಎಲ್ಲ ಸದಸ್ಯರಿಗೆ, ಸಿಬ್ಬಂದಿ ವರ್ಗಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುವೆ.

ಈ ಕೃತಿ ನನ್ನಿಂದ ಬರೆಸಲು ಕಾರಣರಾದವರು ಡಾ. ಸರಜೂ ಕಾಟ್ಕರ್, ಅವರಿಗೂ ಧನ್ಯವಾದಗಳು. ಅಕ್ಷರ ಸಂಯೋಜನೆ ಮಾಡಿದ ಗಿರಿಮಲ್ಲನವರ ಅಂದವಾಗಿ ಮುದ್ರಿಸಿದ ಪ್ರಿಂಟ್ ಪಾರ್ಕ್ ಹಾಗೂ ಬರವಣಿಗೆಗೆ ನೆರವಾದ ಕುಟುಂಬದ ಸದಸ್ಯರಿಗೆ ನನ್ನ ನೆನಕೆಗಳು.

**ಡಾ. ರಾಮಕೃಷ್ಣ ಮರಾಠೆ**

# ಪರಿವಿಡಿ


| | |
|---|---|
| ೧. ಪ್ರವೇಶ | ೧ |
| ೨. ಜನನ  -  ಬಾಲ್ಯ - ವಿದ್ಯಾಭ್ಯಾಸ | ೫ |
| ೩. ಕನ್ನಡಕ್ಕಾಗಿ ದುಡಿ ಕನ್ನಡದಿಂದಲೇ ಪಡಿ | ೧೧ |
| ೪. ಕೌಟುಂಬಿಕ ಜೀವನ | ೧೬ |
| ೫. ಕನ್ನಡದ ಕೆಲಸಗಳು | ೨೦ |
| ೬ ಸಾಹಿತ್ಯ ರಚನೆ ಬಸವ ಚಿಂತನೆ | ೩೮ |
| ೭ ಕಣ್ಮರೆಯಾದ ಕನ್ನಡದ ಕೂಲಿ | ೪೬ |
| ೮. ಅನುಬಂಧ | ೬೩ |

## ಪ್ರವೇಶ

ರಾಮ ಜಾಧವ ಹೆಸರು ಕೇಳಿದ ಕೂಡಲೇ ಇವರು ಅಪ್ಪಟ ಮರಾಠಿಗರೆಂದು ಯಾರು ಬೇಕಾದವರು ಊಹಿಸಬಹುದು. ಈ ನಮ್ಮ ಚರಿತ್ರನಾಯಕ ರಾಮ ಜಾಧವರ ವಿಷಯದಲ್ಲಿ ಕೂಡ ಈ ಊಹೆ ನಿಜವಾದುದೆ; ಇವರೂ ಮರಾಠಿ ಮನುಷ್ಯರೇ, ಮರಾಠಿ ಮನೆತನದ ಹಿನ್ನೆಲೆಯಿಂದಲೇ ಬಂದವರು. ಆದರೇನು ಇವರು ನೆಲೆಸಿದ್ದು ಕರ್ನಾಟಕದಲ್ಲಿ ದುಡಿದದ್ದು ಕನ್ನಡಕ್ಕಾಗಿ, ತಮ್ಮನ್ನು 'ಕನ್ನಡದ ಕೂಲಿ' ಎಂದು ಕರೆದುಕೊಂಡವರು. ಇವರ ಕನ್ನಡ ಪ್ರೇಮ ಹೋಲಿಕೆಗೆ ನಿಲುಕುವಂಥದ್ದಲ್ಲ. ಕನ್ನಡ ನಾಡು ನುಡಿಯ ಬಗ್ಗೆ ಇವರಿಗೆ ಅಪಾರ ಅಭಿಮಾನವಿತ್ತು. ಕನ್ನಡ ಕೇವಲ ಅಭಿಮಾನದ ವಿಷಯವಾಗಿರಲಿಲ್ಲ, ಅದು ಪ್ರಾಣಪ್ರಿಯವಾಗಿತ್ತು. 'ನನ್ನ ದೇಹದ ಸಂಪ್ರದಾಯ' ಕವನದಲ್ಲಿ ಅದನ್ನು ಮನದುಂಬಿ ಹೇಳಿಕೊಂಡಿದ್ದಾರೆ:

ಡಿಂಡಿಮ ಬಾರಿಸುವ
ಕನ್ನಡದ ಹಲಿಗೆ
ನನ್ನ ನಾಲಿಗೆ

ಸದಾ ಚಿಮ್ಮುವ
ಕನ್ನಡದ ಸೆಲೆ
ನನ್ನದೇ ತಲೆ

ಕನ್ನಡಿಸುವ ಟಿ.ವಿ.
ನನ್ನ ಕಣ್ಣು ಕಿವಿ

ಕನ್ನಡದ ಕಡಲು
ನನ್ನ ಅನ್ನದ ಒಡಲು

ಆಸರೆಗೆ ಹಿಡಿಯುವ
ಕನ್ನಡದ ಕೋಲು
ಸರಿಯಾಗಿ ದುಡಿಯುವ
ನನ್ನ ಕೈಕಾಲು

ಕೊನೆಗೆ ಕನ್ನಡಕ್ಕೆ ಕಂದಾಯ
ಕಟ್ಟುತದೆ ನನ್ನ ಹೃದಯ
ಇದು ನನ್ನ ದೇಹದ ಸಂಪ್ರದಾಯ
ನೋಡಿ ಇದ್ದರೆ ಸಮಯ

ಮರಾಠಿ ಮೂಲದ ಈ ಮನುಷ್ಯನ ಕನ್ನಡ ಪ್ರೀತಿ ಅಗಾಧವಾಗಿತ್ತು. ಕುಂತಲ್ಲಿ ನಿಂತಲ್ಲಿ ಕನ್ನಡ ಮಂತ್ರ ಜಪಿಸುತ್ತಿದ್ದರು. ವರಕವಿ ಬೇಂದ್ರೆಯವರ ಕವನ ಸಾಲುಗಳು ಇವರ ನಾಲಿಗೆ ಮೇಲೆ ಕುಣಿದಾಡುತ್ತಿದ್ದವು. ಬರ್ಟ್ರಾಂಡ್ ರಸೆಲ್, ವಿಲ್ ಡುರ್ರ್ಯಾಂಟ್, ಕೋಪರನಿಕಸ್, ಬರ್ನಾಡ್ ಷಾ, ಕಾಂಟ್, ಹೆಗಲ್ ಈ ಜ್ಞಾನಿ ವಿಜ್ಞಾನಿಗಳ ತತ್ವಜ್ಞಾನ ಮಾತಿನಲ್ಲಿ ಮಿಂಚುತ್ತಿತ್ತು. ಬಸವಣ್ಣನವರಂತೂ ಮೈಯಲ್ಲಿ ತುಂಬಿ, ಮನದಲ್ಲಿ ತುಂಬಿ ಸೂಳ್ನುಡಿಯಲ್ಲಿ ಹರಿದು ಬರುತ್ತಿದ್ದ. ಸಂದರ್ಭಾನುಸಾರ ಮಾತಿನಲ್ಲಿ ನುಗ್ಗಿ ಬರುತ್ತಿದ್ದ. ಇವರ ದೇಸಿ ನುಡಿಗಟ್ಟುಗಳು ಕೇಳುವವರ ಕಿವಿ ತುಂಬುತ್ತಿದ್ದವು. ಹಾಗೆಂದು ಕನ್ನಡವು ಅವರ ವಾಗಾಡಂಬರದ ವ್ಯವಹಾರವಾಗಿತ್ತೆಂದು. ವಾಗ್ವಿಲಾಸದ ಹವ್ಯಾಸವಾಗಿತ್ತೆಂದು ಭಾವಿಸಬೇಕಾಗಿಲ್ಲ. ಕನ್ನಡ ಸಮಸ್ಯೆ ಕಿವಿಗೆ ಬಿದ್ದರೆ ಸಾಕು. ಊರುಗೋಲು ಎತ್ತಿಕೊಂಡು ಎದ್ದು ಬಿಡುತ್ತಿದ್ದರು. ಪಾಪು, ಚಂಪಾ, ಚೆನ್ನವೀರ ಕಣವಿ, ಎಂ.ಎಂ. ಕಲಬುರ್ಗಿ, ಸಂ.ಶಿ. ಭೂಸನೂರಮಠ, ಬಿ.ವಿ. ಗುಂಜೆಟ್ಟಿ, ಈಶ್ವರ ಕಮ್ಮಾರ ಮೊದಲಾದ ಕನ್ನಡ ಕಟ್ಟಾಳುಗಳ ಕೂಡ ಚರ್ಚಿಸುತ್ತಿದ್ದರು. ಅವಶ್ಯವೆನಿಸಿದರೆ ಚಳುವಳಿಗೆ ನುಗ್ಗುತ್ತಿದ್ದರು. ಉಪವಾಸ ಸತ್ಯಾಗ್ರಹ ಕೂಡ್ರುತ್ತಿದ್ದರು. 'ಕನ್ನಡದ ಕೂಲಿ'ಗೆ ಇವರು ಸದಾ ಸೈ. ಕೆಲಸವಿರದಿದ್ದರೆ ಮಾತ್ರ ಬೇಸರ.

ಬೆಳಗಾವಿ ಗಡಿನಾಡ ಪ್ರಶ್ನೆ, ಗೋಕಾಕ ಚಳುವಳಿ, ಆಡಳಿತದಲ್ಲಿ ಕನ್ನಡ ಮುಂತಾದ ಹಲವಾರು ಸಂದರ್ಭಗಳಲ್ಲಿ ಜಾಧವರು ಹುಮ್ಮನಸ್ಸಿನಿಂದ ಕನ್ನಡ ಕಟ್ಟುವ ಕೈಂಕರ್ಯದಲ್ಲಿ ತೊಡಗುತ್ತಿದ್ದರು. ಬೆಳಗಾವಿ ಸಲುವಾಗಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಗದ್ದಲ ಎಬ್ಬಿಸಿದಾಗಲೆಲ್ಲ 'ಬೆಳಗಾವಿ ನಮ್ಮ ಭೂಗೋಳ ಅದು ನಮ್ಮ ಮೈಗೆ ಅಂಟಿಕೊಂಡ ಚರ್ಮ, ಅದನ್ನು ನಮ್ಮಿಂದ ಕಿತ್ತಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಅವರು ಆವೇಶಭರಿತರಾಗಿ ಗುಡುಗುತ್ತಿದ್ದರು. ಮಹಾಜನ ಆಯೋಗಕ್ಕೆ ಮತ್ತು ಆಯೋಗದ ವರದಿಯ ಅನುಷ್ಠಾನಕ್ಕಾಗಿ ಅವರು ಮೇಲಿಂದ ಮೇಲೆ ಅರ್ಜಿಗಳನ್ನು ಗುಜರಾಯಿಸುತ್ತಲೇ ಇದ್ದರು. ಗೋಕಾಕ ಚಳುವಳಿಯ ಸಂದರ್ಭಕ್ಕಾಗಲೇ (೧೯೮೧) ಅವರು 'ಅಜ್ಜ'ರಾಗಿದ್ದರು. ಕನ್ನಡದ ಬಗೆಗಿನ ಕಳಕಳಿಯಿಂದಾಗಿ ಚಳುವಳಿಯ ಕೇಂದ್ರಬಿಂದುವಾಗಿ ನಿಂತರು. 'ವರದಿ'ಯ ಅನುಷ್ಠಾನಕ್ಕಾಗಿ ಊರೂರು ತಿರುಗಿದರು. ಹರೆಯದ ಹುಡುಗನ ಉತ್ಸಾಹದಿಂದ ಭಾಷಣ ಮಾಡಿದರು. ಚಳುವಳಿಗಾಗಿ ಹುಡುಗರನ್ನು ಹುರಿದುಂಬಿಸಿದರು. ಹೀಗೆ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಸಮಿತಿಯ ಅಧ್ಯಕ್ಷರಾಗಿ ರಾ.ಬಾ. (ರಾಮ ಬಾಬಾಜಿ ಜಾಧವ) ಹಗಲಿರುಳು ದುಡಿದರು. ಇದರ ಜೊತೆಗೆ ಹುಬ್ಬಳ್ಳಿ ರೇಲ್ವೆ ಕಾರ್ಯಾಗಾರ ಹೋರಾಟ, ಧಾರವಾಡದ ಮಕ್ಕಳ ಮನೆ, ಕಲ್ಯಾಣ ಕೂಟ, ಬಂಗಾರ ಬಳಗ, ಜಾಗೃತ ನಾಗರಿಕ ಮಂಡಳ, ಹಿಂದುಳಿದವರ, ಅಲಸಂಖ್ಯಾತರ-ದಲಿತರ ಜಂಟಿ ಕ್ರಿಯಾವೇದಿಕೆ, ಕೋಮು ಸೌಹಾರ್ದತಾ ಸಮಿತಿ ಕರ್ನಾಟಕ ರಾಜ್ಯ ರಸ್ತೆ ಸಂಸ್ಥೆಯ 'ಕನ್ನಡ ಕ್ರಿಯಾ ಸಮಿತಿ'-ಮುಂತಾದ ಅನೇಕ ಸಂಘ ಸಂಸ್ಥೆಗಳಲ್ಲಿ ಕಾರ್ಯಕರ್ತರಾಗಿ, ಅಧ್ಯಕ್ಷರಾಗಿ ಜಾಧವರು ಸೇವೆ ಸಲ್ಲಿಸಿದ್ದಾರೆ. ಕನ್ನಡ ಸಮಸ್ಯೆಗಳಿಗೆ ಇವರು ವಿಶಿಷ್ಟ ರಿತಿಯಲ್ಲಿ ಸ್ಪಂದಿಸಿದರು. ಕನ್ನಡಕ್ಕಾಗಿ ವೈಯಕ್ತಿಕ - ಸಾಮೂಹಿಕ ಎರಡೂ ನೆಲೆಗಳಲ್ಲಿ ಕೈಗೊಂಡಿದ್ದ ಕಾರ್ಯ ವೈಖರಿ ಅನನ್ಯವಾಗಿತ್ತು. ಅನುಕರಣೀಯವಾಗಿತ್ತು.

೧೯೮೮ ರಲ್ಲಿ 'ಬಸವ ಭೂಮಿಯ ಐದನೆಯ ಶರಣ ಸಮ್ಮೇಳನ' ಬಸವನ ಬಾಗೇವಾಡಿಯಲ್ಲಿ ಜರುಗಿತು. ಅದರಲ್ಲಿ ಪಾಲ್ಗೊಂಡಿದ್ದ ಜಾಧವ ಸಮಕಾಲೀನ ಲಿಂಗಾಯತ ಸಮಾಜವು ಬಸವಣ್ಣನಿಂದ ದೂರಾಗಿದೆ ಎಂಬ ನೋವನ್ನು ತೋಡಿಕೊಂಡರು.

**ಎಲ್ಲಿ ವೀರಶೈವ**
**ಅಲ್ಲಿ ಗೊಂದಲದ ವೈಭವ**
**ಅದು ಅವರ ಸ್ವಭಾವ**
**ಕಾರಣ ಬಸವಣ್ಣನ ಅಭಾವ**

ಎಂದು ದಿಟ್ಟತನದಿಂದ ಹೇಳಿದರು. 'ಬಸವಣ್ಣನ ಬಾಗಿಲಲ್ಲಿ ಹಮಾಲಿ ಇಲ್ಲದೆ ದಿನಗೂಲಿ ಮಾಡುವಾಗ ಕೂಲಿ ಕೊಡಬೇಕಾದೀತೆಂದು ಹೃದಯದ ಬಾಗಿಲಿಗೆ ಕೀಲಿ ಹಾಕಿ ತಾವೇ ಚವಲಿ ಪಾವಲಿಯಾಗಿದ್ದಾರೆ' ಎಂದು ಅವತ್ತಿನ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಸವಣ್ಣನ ವಿಷಯ ಬಂದಾಗಲೆಲ್ಲ ಎಪ್ಪತ್ತರ ಜಾಧವರು ಇಪ್ಪತ್ತರ ತರುಣರಾಗುತ್ತಿದ್ದರು. ದೊಡ್ಡ ಮೂಗು, ದುಂಡು ಮುಖ-ಗುಂಡುಗುಂಡು ಮೈಕಟ್ಟಿನ ರಾಮ ಜಾಧವರು ಕೈಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ನಡೆದಾಡುತ್ತಿದ್ದ ಭಂಗಿ, ನುಡಿದಾಡುತ್ತಿದ್ದ ಶಬ್ದಗಳು ನೊಡುವವರನ್ನು ಕೇಳುವವರನ್ನು ಹಿಡಿದು ನಿಲ್ಲಿಸುತ್ತಿದ್ದವು. ಅವರ ಧ್ವನಿ ಮುಂಗಾರಿನ ಗುಡುಗಾದರೆ ಮಾತು ಮುಂಗಾರು ಮಳೆ, ಇವರ ಕವಿತೆಗೆ ಬೇಂದ್ರೆಯವರೇ ಸ್ಫೂರ್ತಿ, ವಿಚಾರಕ್ಕೆ ಬಸವಣ್ಣನೇ ಆಸ್ತಿ, ಬಿಜಾಪುರದ ಕರಿಮಣ್ಣಿನಲ್ಲಿ ಬೆಳದ ಕನ್ನಡವೇ ಇವರ ಮಾತಿನೊಳಗಿನ ಶಕ್ತಿಯಾಗಿತ್ತು. 'ಇತಿಹಾಸಕ್ಕಾದರೆ ವಯಸ್ಸು- ಮಣ್ಣಿಗಿದೆ ಮನಸ್ಸು' ಎಂದು ಹೇಳುತ್ತಾ ಧಾರವಾಡ ತುಂಬ ತಿರುಗುತ್ತಿದ್ದರು. ಜಾಧವರನ್ನು ಕಂಡವರು 'ನೆಲಹಿಡಿದೇ ಮಾತನಾಡುವ ಮುದುಕ' ಎಂದು ಕೆಲವರು ಚೇಷ್ಟೆ ಮಾಡುತ್ತಿದ್ದರು.

'ಕನ್ನಡದಿಂದ ಗಳಿಸಲಿಕ್ಕೆ ನಾನೆಂದೂ ಪ್ರಯತ್ನ ಮಾಡಲಿಲ್ಲ. ಕನ್ನಡವನ್ನು ಉಳಿಸಲು, ಬೆಳೆಸಲು ಅವಶ್ಯವಿದ್ದದ್ದನ್ನು ಸೇವೆಯ ಒಂದು ಭಾಗವೆಂದು ಮಾಡಲು ಬಂದಿದ್ದೇನೆ. ಸೇವೆಯ ಅವಕಾಶವು, ಆಕಾಶದಲ್ಲಿಯ ಪ್ರಕಾಶದಲ್ಲಿ ನಕಾಶೇ ತೆಗೆಯುವುದಲ್ಲ, ಆಕ್ರೋಶವು ಕರ್ಕಶವಾಗದಂತೆ ಕಿವಿಯನ್ನು ಕಣ್ಣಾಗಿ ಮಾಡುವುದು' ಇದು ರಾಮ ಜಾಧವರ ಕನ್ನಡ ಸೇವೆಯ ಶೈಲಿಯಾಗಿತ್ತು.

## ೧
## ಜನನ-ಬಾಲ್ಯ-ವಿದ್ಯಾಭ್ಯಾಸ

**ಮಣ್ಣ ಹೊರತsದ ಭಾರ**
**ಅಂತ ಆಗತsದ ಆಧಾರ**
**ಸೃಷ್ಟಿ ಸ್ಥಿತಿ ಲಯಾ**
**ಮಣ್ಣ ಹಾಕಿದ ಪಾಯಾ**
**ಅದರದೇ ಅಗಾಧ ಮಾಯಾ**
**ಜೀವಜಂತುಗಳ ಮೇಲೆ ಛಾಯಾ**
**ಇತಿಹಾಸಕ್ಕಿದ್ದರೆ ವಯಸ್ಸು**
**ಮಣ್ಣಿಗಿದೆ ಮನಸ್ಸು**

ಕನ್ನಡ ನೆಲದಲ್ಲಿ, ಕನ್ನಡಕ್ಕಾಗಿ, ಕನ್ನಡಿಗರೇ ಹೋರಾಡಿದ ಕರ್ಮಕಥೆ ನಮ್ಮ ಆಧುನಿಕ ಕರ್ನಾಟಕದ ಬೆನ್ನಿಗಿದೆ. ಹದಿನೆಂಟನೆಯ ಶತಮಾನದಲ್ಲಿ ಮರಾಠಿಗರ ದರಬಾರ, ಇಂಗ್ಲಿಷರ ಕಾರಭಾರದಿಂದ ಉತ್ತರ ಕರ್ನಾಟಕವು ಮರಾಠಿಮಯವಾಗಿ ಪರಿಣಮಿಸಿತು. ತೆಲಗು, ತಮಿಳು, ಮಲಯಾಳಿ ಗಡಿ ಪ್ರದೇಶದಲ್ಲಿಯೂ ಹೀಗೆಯೇ ಕನ್ನಡದ ಮೇಲೆ ಆಕ್ರಮಣ. ಇದರಿಂದ ಕರ್ನಾಟಕದಲ್ಲಿ ಕನ್ನಡಿಗರೇ ಪರದೇಶಿಯಾಗಿ ಪಡಬಾರದ ಕಷ್ಟಗಳನ್ನು ಪಟ್ಟರು. ಕೊನೆಗೂ ಹರಿದು ಹಂಚಿ ಹೋಗಿದ್ದ ಕನ್ನಡದ ನೆಲವನ್ನು, ಚದುರಿ ಹೋಗಿದ್ದ ಕನ್ನಡದ ಮನಸ್ಸುಗಳನ್ನು ಒಂದುಗೂಡಿಸುವ ಪ್ರಯತ್ನಗಳು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಾರಂಭವಾದವು. ಇಂಥ ಸಂಘಟಿತ ಪ್ರಯತ್ನಗಳು ಮೊದಲು ಹೊರಹೊಮ್ಮಿದ್ದು ಉತ್ತರ ಕರ್ನಾಟಕ ಪ್ರದೇಶದಲ್ಲಿಯೇ

ಕನ್ನಡ-ಕನ್ನಡಿಗ-ಕರ್ನಾಟಕದ ಯೋಗಕ್ಷೇಮಕ್ಕಾಗಿ ನಡೆದ ಹೋರಾಟದಲ್ಲಿ ಉತ್ತರ ಕರ್ನಾಟಕವು ಮುಂಚೂಣಿ ಸ್ಥಾನದಲ್ಲಿ ನಿಂತಿದೆ. ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಈ ನೆಲದ ಫಲಗಳು ವಿಶಿಷ್ಟವಾಗಿವೆ. ಸಮಾನತೆಯ ಸಮಾಜ, ಕಲ್ಯಾಣ ನಾಡಿನ ಕನಸು ಕಂಡು ಅದನ್ನು ನನಸು ಮಾಡಲು ಹೋರಾಡಿದ ಅನೇಕ ಜನ ಶರಣರು ಈ ನೆಲದಲ್ಲಿಯೇ ಬಾಳಿ ಬೆಳಗಿದರು. ಜೀವನ ಪ್ರೀತಿ, ದೈವಭಕ್ತಿಯನ್ನು ಪ್ರಸಾರ ಮಾಡಿದ ದಾಸರು ಇದೇ ನೆಲದವರು. ಆಧುನಿಕ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದವರ ದೊಡ್ಡ ಪಡೆಯೇ ಇಲ್ಲಿ ಆಗಿ ಹೋಗಿದೆ. ನಾಡು-ನುಡಿಯ ಸಲುವಾಗಿ ಹಗಲಿರುಳು ದುಡಿದ ನುಡಿಸೇವಕರ ಹೆಸರು ಲೆಕ್ಕವಿಟ್ಟು ಹೇಳುವುದು ಕಷ್ಟ. ಕನ್ನಡ ನುಡಿಯ ದುಃಸ್ಥಿತಿಯ ದೂರ ಮಾಡಲು ಶಾಂತಕವಿಗಳು ನಾಟಕ ತಂಡ ಕಟ್ಟಿದರು. 'ರಕ್ಷಿಸು ಕರ್ನಾಟಕ ದೇವಿ', ಸಂರಕ್ಷಿಸು ಕರ್ನಾಟಕ ದೇವಿ' ಎಂದು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೀರ್ತನೆ ಮಾಡಿದರು. ಇಂತಹ ಹಿನ್ನೆಲೆಯಿಂದಾಗಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅಸ್ತಿತ್ವಕ್ಕೆ ಬರಲು ವೇದಿಕೆ ಸಜ್ಜಾಯಿತು. ಕನ್ನಡ ಕುಲಪುರೋಹಿತ ಆಲೂರ ವೆಂಕಟರಾಯರಿಂದ ಕರ್ನಾಟಕ ಏಕೀಕರಣದ ಕಹಳೆ ಮೊಳಗಿತು. ಈ ಭಾಗದ ಜನರಲ್ಲಿರುವ ಕನ್ನಡದ ಕೆಚ್ಚು ದಕ್ಷಿಣ ಕರ್ನಾಟಕದ ಜನರನ್ನು ಬಡಿದೆಬ್ಬಿಸಿತು. ಹೀಗೆ

ಏಕೀಕರಣ ಚಳುವಳಿಯು ನಾಲ್ಕೂ ನಿಟ್ಟಿನಿಂದ ಸ್ವಾತಂತ್ರ್ಯ ಚಳವಳಿಯ ಜೊತೆ ಜೊತೆಗೆ ಹೆಜ್ಜೆ ಹಾಕಿತು. ಹೀಗೆ ದೇಶಕ್ಕಾಗಿ, ಭಾಷೆಗಾಗಿ ಹಕ್ಕಿನ ಚಳವಳಿ ಜೋರಾಗಿ ನಡೆದಿರುವ ಕಾಲದಲ್ಲಿಯೇ 'ಕನ್ನಡದ ಕೂಲಿ' ರಾಮ ಜಾಧವ ಹುಟ್ಟಿದರು.

ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲೂಕಿನ ಕಟಗೇರಿಯು ಕನ್ನಡದ ಕೂಲಿಯ ಅರ್ಥಾತ್ ರಾಮ ಜಾಧವರ ಹುಟ್ಟೂರು. ಕ್ಷತ್ರೀಯ ಮರಾಠಾ ವಂಶದಲ್ಲಿ ಛತ್ರಪತಿ ಶಿವಾಜಿ ಮಹಾರಾಜನ ಶೌರ್ಯ ಆದರ್ಶಗಳನ್ನೇ ಆರಾಧಿಸುತ್ತಿದ್ದ ಮಧ್ಯಮ ವರ್ಗದ ಕುಟುಂಬದಲ್ಲಿ ಇವರು ಹುಟ್ಟಿದರು. ತಂದೆ ಬಾಬಾಜಿ ರಂಗರಾವ ಜಾಧವ, ತಾಯಿ ಲಕ್ಷ್ಮೀಬಾಯಿ. ಈ ದಂಪತಿಗಳಿಗೆ ಹನ್ನೊಂದು ಜನ ಮಕ್ಕಳು. ನಾಲ್ವರು ಗಂಡುಮಕ್ಕಳು. ಏಳು ಜನ ಹೆಣ್ಣುಮಕ್ಕಳು ಇವರೆಲ್ಲರಲ್ಲಿ ರಾಮ ಜಾಧವರೇ ದೊಡ್ಡವರು. ಇವರು ೧೯.೨.೧೯೧೯ರಂದು, ವಿಜಾಪುರ ಜಿಲ್ಲೆ, ಕಟಗೇರಿಯಲ್ಲಿ ಜನಿಸಿದರು.

ಬಾಬಾಜಿ ಬಾದಾಮಿ ತಾಲೂಕಿನ ಹಂಗರಗಿಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ಆ ಊರಲ್ಲಿ ಅಕ್ಷರ ದಾಸೋಹದ ಕಾರ್ಯವನ್ನು ಆ ಕಾಲಕ್ಕೆ ಬಾಬಾಜಿಯವರು ಸುರು ಮಾಡಿದ್ದರು. ಇವರದು ಅತ್ಯಂತ ಕಟ್ಟುನಿಟ್ಟಿನ ದಿನಚರಿ. ಮಕ್ಕಳನ್ನು ತಪ್ಪದೆ ಶಾಲೆಗೆ ಕಳಿಸಬೇಕೆಂದು ಪಾಲಕರನ್ನು ಒತ್ತಾಯಿಸುತ್ತಿದ್ದರು. ಪಾಲಕರ ಮಾತು ಕೇಳದೆ, ಶಾಲೆಗೆ ಬರಲು ಒಪ್ಪದ ಮಕ್ಕಳನ್ನು ಗಮನಿಸಿ ಅಕ್ಕರೆಯಿಂದ ಕರೆತರುತ್ತಿದ್ದರು. ತಮ್ಮ ಧೋತರದ ಚುಂಗಿನಿಂದ ಅವರ ಕಣ್ಣು, ಮೂಗು, ಮುಖ ಒರೆಸಿ ಸಮಾಧಾನ ಹೇಳುತ್ತಿದ್ದರು. ಪಾಠದ ಜೊತೆಗೆ ಆಟವೂ ಇದೆಯೆಂದು ಹೇಳಿ, ಅವರು ಪ್ರೀತಿಯಿಂದ ಶಾಲೆಗೆ ಬರುವಂತೆ ಹುರಿದುಂಬಿಸುತ್ತಿದ್ದರು. ಬಾಬಾಜಿಯವರು ಸೇವೆ, ಆದರ್ಶಗಳಿಂದ ಆದರ್ಶ ಶಿಕ್ಷಕರೆಂದೇ ಹೆಸರಾಗಿದ್ದರು. ಹುಬ್ಬಳ್ಳಿಯಲ್ಲಿರುವ ಅವರ ಮಗಳು ಶ್ರೀಮತಿ ಸರೋಜಿನಿ ಕಾಟ್ಕರ್ ಅವರು ನೆನಪಿಸಿಕೊಳ್ಳುವಂತೆ 'ನಮ್ಮ ತಂದಿ ಭಾಳ ಅಪರೂಪದ ಮಾಸ್ತರ್ರಿ' ಎಂಬ ಮಾತು ಅವರ ವ್ಯಕ್ತಿತ್ವವನ್ನು ಸೂತ್ರೀಕರಿಸುತ್ತದೆ.

ಈ ಮಾಸ್ತರರು ಶಾಲೆ ತಪ್ಪಿಸುವ ದಡ್ಡ ಮಕ್ಕಳಿಗಾಗಿ ರಾತ್ರಿ ಶಾಲೆ ನಡೆಸುತ್ತಿದ್ದರು. ವಿದ್ಯುತ್ ದೀಪಗಳಿಲ್ಲದ ದಿನಗಳಲ್ಲಿ ಕಂದೀಲುದೀಪ ಬೆಳಗಿಸಿಕೊಂಡು ಮಕ್ಕಳಿಗೆ ಮನೆಪಾಠ ಹೇಳುತ್ತಿದ್ದರು. ಮಕ್ಕಳಿಗೆ ಕಲಿಸಲು ಶಾಲೆಯೇ ಬೇಕೆಂದಿಲ್ಲ. ವೇಳಾಪತ್ರಿಕೆ ಅನುಸರಿಸಬೇಕೆಂದಿಲ್ಲ ಮುಂಜಾನೆ-ಸಂಜೆ, ಎಲ್ಲಿ ಬೇಕಲ್ಲಿ ಕಲಿಸುವ ಕಾಯಕದಲ್ಲಿ ಅವರು ನಿರತರಾಗಿರುತ್ತಿದ್ದರು. ಮನೆಗೆಲಸಗಳಲ್ಲಿ ಕೂಡ ವಿದ್ಯಾರ್ಥಿಗಳು ಮನೆಯ ಮಕ್ಕಳಂತೆ ಭಾಗವಹಿಸುತ್ತಿದ್ದರು. ಅವರ ಉಪಚಾರ ಕೂಡ ಮನೆಯ ಮಕ್ಕಳಿಗಿಂತ ಕಡಿಮೆ ಇರಲಿಲ್ಲ. ಬಾಬಾಜಿರಾವಮಾಸ್ತರ ಹಾಗೂ ವಿದ್ಯಾರ್ಥಿಗಳ ನಡುವಿನ ಗುರು-ಶಿಷ್ಯ ಸಂಬಂಧ ಊರವರ ಪ್ರಶಂಸೆಗೆ ಪಾತ್ರವಾಗಿತ್ತು. ಇಂಥ ಸುಶಿಕ್ಷಿತ, ಸುಸಂಸ್ಕೃತ ವಾತಾವರಣದಲ್ಲಿ ಬಾಲಾಜಿಯವರ ಮಕ್ಕಳು ಬೆಳೆದು ಬಂದರು. ರಾಮ ಜಾಧವರ ವಿದ್ಯಾಭ್ಯಾಸಕ್ಕೆ ತಂದೆಯೇ ಮೊದಲ ಗುರು. ತಾಯಿ ಲಕ್ಷ್ಮೀಬಾಯಿ ಅನಕ್ಷರಸ್ಥಳಾಗಿದ್ದರೂ ಪತಿಯ ಶಿಸ್ತಿನ ದಿನಚರಿಯನ್ನು ಚಾಚೂ

ತಪ್ಪದೆ ಪಾಲಿಸುತ್ತಿದ್ದರು. ಅವರಿಗೆ ಓದಲು, ಬರೆಯಲು ಬರುತ್ತಿರಲಿಲ್ಲ. ಆದರೆ ಮಕ್ಕಳ ಓದಿನ ಬಗ್ಗೆ ನಿಗಾ ಇಡುತ್ತಿದ್ದರು. ಮಕ್ಕಳನ್ನು ಮುಂದೆ ಕೂಡಿಸಿಕೊಂಡು ಅಭ್ಯಾಸ ಮಾಡಿಸುತ್ತಿದ್ದರು.

ರಾಮ ಜಾಧವ ಏಳನೆಯ ಇಯತ್ತೆಯವರೆಗೆ ಕಟಗೇರಿಯಲ್ಲಿಯೇ ಓದಿದರು. ಮುಂದಿನ ವಿದ್ಯಾಭ್ಯಾಸಕ್ಕಾಗಿ ರಾಮನನ್ನು ಎಲ್ಲಿಡಬೇಕೆಂದು ಬಾಬಾಜಿಯವರಿಗೆ ಚಿಂತೆಯಾಯಿತು. ಆಗ ನೆರವಿಗೆ ಬಂದವರು ಗೋಪಾಲರಾವ ದೇಸಾಯಿ. ಇವರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಬಾಗಲಕೋಟೆಯಲ್ಲಿನ ಮನೆ ಮಾಡಿದ್ದರು. ರಾಮನು ಕೂಡ ತಮ್ಮ ಮನೆಯಲ್ಲಿದ್ದುಕೊಂಡೇ ಓದಲಿ ಎಂದು ದೇಸಾಯಿಯವರು ಹೇಳಿದಾಗ ಬಾಬಾಜಿ ಮಾಸ್ತರ ನಿರುಮ್ಮಳಾದರು. ಬಾಗಲಕೋಟೆಯಲ್ಲಿ ಎ.ವಿ. ಹೈಸ್ಕೂಲಿನಲ್ಲಿ ರಾಮನ ಓದು ಸುರುವಾಯಿತು. ದೇಸಾಯಿಯವರು ಬ್ರಾಹ್ಮಣರು, ಮರಾಠಾ ಹುಡುಗನಿಗೆ ಇವರು ಮನೆಯಲ್ಲಿಟ್ಟುಕೊಂಡದ್ದು ಸಣ್ಣ ಸಂಗತಿಯೇನಲ್ಲ. ಇವರ ಪತ್ನಿ ಶ್ರೀಮತಿ ಗಂಗಕ್ಕ ಸುಶಿಕ್ಷಿತ ಧರ್ಮಭೀರು ಹೆಣ್ಣುಮಗಳು. ನಿತ್ಯವು ಜಪ-ತಪ ಸಂಧ್ಯಾವಂದನೆಗಳನ್ನು ತಪ್ಪದೇ ಮಾಡುತ್ತಿದ್ದರು. ದೇವರ ಹಾಗೂ ಸಂಸ್ಕೃತ ಶ್ಲೋಕಗಳನ್ನು ಸರಾಗವಾಗಿ ಹೇಳುತ್ತಿದ್ದರು. ಗಂಗಕ್ಕನ ಆಚಾರ ವಿಚಾರಗಳ ಸಂಸ್ಕಾರ ರಾಮನ ಮೇಲೂ ಆಯಿತು. ಗಂಗಕ್ಕೆ ಕೂಡ ರಾಮನ ಹೊಟ್ಟೆ ನೆತ್ತಿ ಚೆನ್ನಾಗಿಯೇ ನೋಡಿಕೊಂಡರು. ಶಾಲೆಯಿಂದ ಮನೆಗೆ ಬಂದ ಮೇಲೆ ಗಂಗಕ್ಕ ಒಂದು ಹಿಡಿ ಹಚ್ಚಿದ ಅವಲಕ್ಕಿ ಕೊಡುತ್ತಿದ್ದಂತೆ. ಅದನ್ನು ತಿನ್ನಲು ಅರ್ಧ ತಾಸದಾರೂ ಬೇಕಾಗುತ್ತಿತ್ತೆಂದು ಅಣ್ಣ ಮೋಜು ಮಾಡಿ ಹೇಳುತ್ತಿದ್ದುದನ್ನು ರಾಮ ಜಾಧವರ ಸಹೋದರಿ ಶಾಂತಾಬಾಯಿ ನೂಲಿಕರ ಸ್ಮರಿಸುತ್ತಾರೆ. ದೇಸಾಯಿ ಅವರ ಮನೆಯ ವಾಸ್ತವ್ಯದಿಂದ ಬಹಳಷ್ಟು ಜನರಿಗೆ ರಾಮನು ದೇಸಾಯಿಯವರ ಮಗನಾಗಿಯೇ ಕಂಡನು. ರಾಮ ಜಾಧವರು ಜೀವನದುದ್ದಕ್ಕೂ ಈ ಮನೆಯ ಅನ್ನದ ಋಣವನ್ನು ಮರೆಯಲಿಲ್ಲ. ಗಂಗಕ್ಕನ ವಾತ್ಸಲ್ಯ, ವಿಶ್ವಾಸ ತಮ್ಮ ಜೀವನದ ಕೊನೆಯವರೆಗೂ ಸ್ಮರಿಸುತ್ತಿದ್ದರು.

ಹೈಸ್ಕೂಲಿನಲ್ಲಿದ್ದಾಗಲೇ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಸೇರಿದರು. ಆಗಿನ ಸರಕಾರವು, ವಿದ್ಯಾರ್ಥಿಗಳು ಈ ಸಂಘವನ್ನು ಸೇರಬಾರದೆಂದು ಒತ್ತಾಯ ಪಡಿಸುತ್ತಿತ್ತು. ತಂದೆ ಕೂಡ ಇಂಥ ಚಟುವಟಿಕೆಗಳಿಗೆ ಗಮನ ಕೊಡಬಾರದೆಂದು ಬೆದರಿಸುತ್ತಿದ್ದರು. ರಾಮ ಇದಾವ ಬೆದರಿಕೆಗಳಿಗೂ ಮಣಿಯದೆ ಸಮವಸ್ತ್ರ ಧರಿಸಿ ಕವಾಯತ ಮಾಡಲು ಹೋಗುತ್ತಿದ್ದ. ರಾಷ್ಟ್ರಪ್ರೇಮವನ್ನು ತೋರಿಸಲು ಯಾರಿಗೂ ಹೆದರಬೇಕಾಗಿಲ್ಲವೆಂದು ಹೇಳುತ್ತಿದ್ದ. ಇದೇ ವೇಳೆಗೆ ಕನ್ನಡ ನಾಡು ನುಡಿಯ ಅಭಿಮಾನವೂ ಅವರ ಎದೆಯಲ್ಲಿ ಮನೆ ಮಾಡಿತು. ಅದಕ್ಕೊದಗಿ ಬಂದ ಕಾರಣ ಪ್ರೇರಣೆಗಳ ಕಥೆಯನ್ನು ರಾಮ ಜಾಧವರು ಹೀಗೆ ಹೇಳಿದ್ದಾರೆ:

'ಕನ್ನಡದ ಪ್ರೇಮಕ್ಕೆ ಬುನಾದಿ ಹಾಕಿದವರು ೧೯೩೩ ರಲ್ಲಿ ಬಾಗಲಕೋಟದಿಂದ ಎ.ವಿ. ಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ಗೆಳೆಯರ ಗುಂಪಿನ ಶ್ರೀ.ವಿ.ಜಿ. ಹಣಮಸಾಗರ ಶಿಕ್ಷಕರು. ಅಲ್ಲಿ ಕನ್ನಡದ ಚಟುವಟಿಕೆಗಳನ್ನು ಪ್ರಾರಂಭ ಮಾಡಿದವರೇ ಅವರು. ವರ್ಗದಲ್ಲಿ ಬೇಂದ್ರೆಯವರ "ರಾಗರತಿ" ಕವಿತೆಯಿಂದ ಬೇಂದ್ರೆ ಹುಚ್ಚು ಹಚ್ಚಿದವರೇ ಇವರು. ೧೯೩೯ರಲ್ಲಿ ಬೇಂದ್ರೆಯವರು ನಾಡಹಬ್ಬಕ್ಕಾಗಿ ಬಂದಾಗ್ಗೆ ಅವರ "ಕರಿಮರಿ ನಾಯಿ" ಅನುಕರಣ ಮಾಡಿ.

**ಹಂಡ ಬಂಡ ನಾಯಿಗೆ ಅಡಪ ಹತ್ತಿತ್ತು**
**ಭಂಡರ ಬಾಯಿ ಹಚ್ಯಾ ಅನ್ನತಿತ್ತು.**

ಅಂತ ಕೆಲವು ಸಾಲುಗಳನ್ನು ಬರೆದು ಅವರಿಗೆ ತೋರಿಸಿದ್ದೆ. ಅಂದಿನಿಂದ ನನ್ನಲ್ಲಿ ಬೇಂದ್ರೆಯವರ ಸಂಸ್ಕಾರ ಆಕಾರ ಪಡೆಯಹತ್ತಿ, ಅವರ ಸನಾದಿ ಊದಹತ್ತಿದೆ.' ಬೇಂದ್ರೆ ಕವನಗಳಲ್ಲಿನ ನಾದ ಪದ ಅರ್ಥ ಜಾಧವರಿಗೆ ಮರುಳು ಮಾಡಿದವು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಅವರ ಬಹಳಷ್ಟು ಕವನಗಳನ್ನು ಓದಿದರು. ಮಾತು ಮಾತಿಗೆ ಅವರ ಕವನ ಸಾಲುಗಳನ್ನು ಉದ್ಧರಿಸುತ್ತಿದ್ದರು.

ಹೈಸ್ಕೂಲಿನಲ್ಲಿದ್ದಾಗಲೇ ರಾಮ ಜಾಧವರು ಕನ್ನಡಕ್ಕಾಗಿ ದುಡಿಯಬೇಕೆಂದು ದೃಢ ಸಂಕಲ್ಪ ಮಾಡಿದರು. ಅವರ ಈ ನಿಲುವಿಗೆ ಅಂದಿನ ಏಕೀಕರಣ ಚಳುವಳಿ ಮುಖ್ಯ ಪ್ರೇರಣೆಯಾಗಿತ್ತು. ೧೯೨೦ರ ದಶಕ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದ ಜೊತೆ-ಜೊತೆಗೆ ಏಕೀಕರಣ ಚಳುವಳಿಯೂ ಸಾಗಿತ್ತು. ಬಾಗಲುಕೋಟೆಯಲ್ಲಿ ಈ ಚಳುವಳಿಯ ಕರ್ಣಧಾರತ್ವವನ್ನು ಜಂಗಿನ ಮುರಗಯ್ಯನವರು ವಹಿಸಿದ್ದರು. ಇವರನ್ನು 'ಏಕೀಕರಣದ ಭಂಡಾರಿ' ಎಂದೇ ಜನ ಕರೆಯುತ್ತಿದ್ದರು. ಮರಾಠಿಲಿಪಿಯಲ್ಲಿ ಲೆಕ್ಕಪತ್ರಗಳನ್ನಿಡುವ ಪದ್ಧತಿಯನ್ನು ಪ್ರತಿಭಟಿಸಲು ೧೯೨೮ರಲ್ಲಿಯೇ ಇವರು ಹೋರಾಟ ಸುರು ಮಾಡಿದ್ದರು. ವಿದ್ಯಾರ್ಥಿಗಳನ್ನೆಲ್ಲ ಕರೆದುಕೊಂಡು ಅಂಗಡಿ ಮುಂಗಟ್ಟುಗಳ ಎದುರು ಧರಣಿ ಕೂಡುತ್ತಿದ್ದರು. ಆಗ ಹೈಸ್ಕೂಲ ವಿದ್ಯಾರ್ಥಿಯಾಗಿದ್ದ ರಾಮ ಜಾಧವ ಇಂಥ ಧರಣಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಜಂಗಿನ ಮುರಗಯ್ಯನವರ ಚಳುವಳಿಯ ಮಾದರಿಯು ವಿಶಿಷ್ಟವಾಗಿತ್ತು. 'ಡೊಳ್ಳ ಬಾರಿಸಬೇಡಿರಿ ಸುಮ್ಮನೆ ಕನ್ನಡದ ಕೆಲಸ ಮಾಡಿರಿ' ಎಂದು ಚಳವಳಿಗಾರರಿಗೆ ಹೇಳುತ್ತಿದ್ದರು. ಅವರ ಕನ್ನಡ ಕಾರ್ಯವು ಕಲಿಯೋ ಹಾಗೆ ಇತ್ತು. ರಾಮ ಜಾಧವರಿಗೆ ಇದು ಅತ್ಯಂತ ಪ್ರಿಯವಾದ ಘೋಷಣೆಯಾಗಿತ್ತು. ಧಾರವಾಡ ಪ್ರದೇಶದಲ್ಲಿ ಮುದವೀಡು ಕೃಷ್ಣರಾಯರು 'ಕನ್ನಡದಲ್ಲಿ ಅಳಬೇಡಿರಿ ಹೊಡ್ಕೊಳ್ಳಿರಿ' ಎಂದು ಗರ್ಜಿಸುತ್ತಿದ್ದರು. ಇವೆರಡೂ ಮಾದರಿಗಳನ್ನು ಅನುಸರಿಸುವುದು ಅಗತ್ಯವೆನಿಸಿತು, ರಾಮ ಜಾಧವರಿಗೆ. 'ಈ ಎರಡೂ ಕರಾರುಗಳನ್ನು ಪಾಲಿಸುತ್ತ ಬಂದವರ ಪೈಕಿ ನಾನೂ ಒಬ್ಬನು' ಎಂದು ಅವರೇ ಹೇಳಿಕೊಂಡಿದ್ದುಂಟು.

೧೯೩೩ರಲ್ಲಿ ನಾಡಹಬ್ಬದ ನಿಬಂಧ ಸ್ಪರ್ಧೆಯಲ್ಲಿ 'ಕರ್ನಾಟಕಕ್ಕೆ ಬೇಕು ವಿಶ್ವವಿದ್ಯಾಲಯ' ಎಂಬ ನಿಬಂಧ ಬರೆದು ರಾಮ ಜಾಧವ ಪ್ರಥಮ ಬಹುಮಾನ ಪಡೆದರು. ಈ ಬಹುಮಾನವು ಏಕೀಕರಣದ ಕಾರ್ಯದರ್ಶಿ ಬಳವಂತರಾವ ದಾತಾರ ಅವರ ಹಸ್ತದಿಂದ ವಿತರಿಸಲಾಯಿತು. ಬಹುಮಾನ ಪಡೆದುಕೊಂಡ ರಾಮ ಜಾಧವ ಅವರು 'ಉದ್ದೇಶಿತ ಏಕೀಕರಣದ ನಕಾಶೆ'ಯನ್ನು ಯಾಕೆ ಪ್ರಕಟಿಸಿಲ್ಲವೆಂದು ದಾತಾರರಿಗೆ ಕೇಳಿಯೇ ಬಿಟ್ಟರು. ಜಾಧವರ ಹೈಸ್ಕೂಲು ಓದು ಅತ್ಯಂತ ಕ್ರಿಯಾಶೀಲವಾಗಿತ್ತು. ಅವರೊಳಗಿನ ಕವಿ ಕಣ್ ತೆರೆದದ್ದು, ಅವರೊಳಗಿನ ನುಡಿಸೇವಕ ಸೇವೆಗಾಗಿ ಎದ್ದು ನಿಂತದ್ದು ಬಾಗಲಕೋಟೆಯ ಇಂಥ ಸ್ಫೂರ್ತಿಯ ಪರಿಸರದಲ್ಲಿಯೇ. ಸಹಪಾಠಿಗಳಾಗಿದ್ದ ಅರಿಕೇರಿ, ನಾಡಗೌಡ, ಕೊರಧಾನ್ಯಮಠ ಮುಂತಾದವರ ಒಡನಾಟದಲ್ಲಿ ಕನ್ನಡ ಅಭಿಮಾನ ದಿನೇ ದಿನೇ ಪುಟಕ್ಕಿಟ್ಟ ಚಿನ್ನದಂತೆ ಬೆಳೆಯುತ್ತ ಹೋಯಿತು.

ಹೈಸ್ಕೂಲು ಮುಗಿಸಿಕೊಂಡು ರಾ.ಬಾ. ಜಾಧವ ಕಾಲೇಜಿಗೆಂದು ಕೊಲ್ಲಾಪುರದ ರಾಜಾರಾಮ ಕಾಲೇಜ (ಮುಂಬಯಿ ವಿಶ್ವವಿದ್ಯಾಲಯ) ಸೇರಿದರು. ಅಲ್ಲಿ ಕೆ.ಜಿ. ಕುಂದಣಗಾರರು ಗುರುಗಳಾಗಿ ಸಿಕ್ಕರು. ಕನ್ನಡ ಸಾಹಿತ್ಯ

ಸಂಸ್ಕೃತಿಗಳ ಅಧ್ಯಯನದಲ್ಲಿ - ಅವರದು ಮೇರು ವ್ಯಕ್ತಿತ್ವ ನಿರಂತರ ಅಧ್ಯಯನಶೀಲರು. ಇವರ ಸಾನ್ನಿಧ್ಯದಲ್ಲಿ ಜಾಧವರು ಬುದ್ಧಿ ಭಾವಗಳ ಬಾಗಿಲು ತೆರೆದು ಬೆಳಕನ್ನು ತುಂಬಿಕೊಂಡರು. ಕನ್ನಡ ಇಂಗ್ಲೀಷ್ ಸಾಹಿತ್ಯಗಳ ಆಳಕ್ಕೆ ಇಳಿದರು. ಅಲ್ಲಿರುವ ಅಮೂಲ್ಯ ರತ್ನಗಳನೆತ್ತಿ ತಮ್ಮ ಉಡಿಗೆ ಹಾಕಿಕೊಂಡರು. ಸತತ ಅಭ್ಯಾಸ, ವಿಷಯಜ್ಞಾನ ವಿಶ್ಲೇಷಣಾ ಬುದ್ಧಿಯಿಂದ ಜಾಧವರು ಕುಂದಣಗಾರರ ಮೆಚ್ಚಿನ ಶಿಷ್ಯರಾದರು. ಇದೇ ಅವಧಿಯಲ್ಲಿ ಕನ್ನಡದ ಕಟ್ಟಾಳು ಎಂದು ಹೆಸರಾಗಿದ್ದ ನಾಡೋಜ ಪಾಟೀಲ ಪುಟ್ಟಪ್ಪನವರು ಆಗ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದರು. ಅವರು 'ಚಲೇಜಾವ ಚಳುವಳಿ'ಯಲ್ಲಿ ಭಾಗವಹಿಸಿದ್ದಾರೆಂಬ ಕಾರಣಕ್ಕೆ ಕಾಲೇಜಿನಿಂದ ಅವರನ್ನು ಹೊರಗೆ ಹಾಕಿದ್ದರು. ಈ ಘಟನೆಯ ಹಿನ್ನೆಲೆಯಲ್ಲಿ ರಾಮ ಜಾಧವ, ಪಾಪು ಅವರನ್ನು ಭೆಟ್ಟಿಯಾದರು. ಈ ಪರಿಚಯ ಮುಂದೆ ಗೆಳೆತನವಾಗಿ ಬೆಳೆಯಿತು. ಈ ಗೆಳೆತನ ರಾಮ ಜಾಧವರ ಕೊನೆ ಉಸಿರಿನತನಕ ಮುಂದುವರೆಯಿತು. ಪಾಪು ಅವರನ್ನು ತನ್ನ ಹಿತೈಷಿ, ಕನ್ನಡದ ಹಿತೈಷಿ ಎಂದು ಅವರು ಬಲವಾಗಿ ನಂಬಿದ್ದರು. ನಂಬಿದಂತೆಯೇ ಬದುಕಿದರು.

೧೯೪೨ರಲ್ಲಿ ಇವರು ರಾಜಾರಾಮ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದರು. ಈ ಕಾಲೇಜಿನಿಂದ ಕನ್ನಡದಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದವರಲ್ಲಿ ಡಾ. ಸದಾನಂದ ನಾಯಕ ಎಂಬವರು ಮೊದಲಿಗರಾದರೆ ರಾಮ ಜಾಧವ ಎರಡನೆಯವರು. ಮರಾಠಾ ಸಮಾಜದಿಂದ ಮಾತ್ರ ಇವರೇ ಮೊದಲಿಗರು. ಕೊಲ್ಲಾಪುರದ ಛತ್ರಪತಿಯವರ ಆಶ್ರಯದಲ್ಲಿದ್ದುಕೊಂಡು ಇವರು ವಿದ್ಯಾಭ್ಯಾಸ ಪೂರೈಸಿದರು. ಕನ್ನಡದಲ್ಲಿ ಬಿ.ಎ.(ಆನರ್ಸ್) ಆಗಬೇಕೆಂಬ ವಿಚಾರವೂ ಅರಮನೆಯಿಂದಲೇ ಬಂದಿತ್ತು. ರಾಮ ಜಾಧವ ಪ್ರತಿಭಾವಂತ ವಿದ್ಯಾರ್ಥಿಯೆಂದು ಕೊಲ್ಲಾಪೂರ ಛತ್ರಪತಿ ಮನೆತನದಿಂದ ವಿಶೇಷ ಪ್ರೋತ್ಸಾಹ ಸಿಕ್ಕಿತು. ಇವರು ಮನಸ್ಸು ಮಾಡಿದ್ದರೆ ರಾಜಾರಾಮ ಕಾಲೇಜಿನಲ್ಲಿಯೇ ಪ್ರಾಧ್ಯಾಪಕನಾಗುವ ಅವಕಾಶವಿತ್ತು. ಆದರೆ ವಿಧಿ ಇವರನ್ನು ಬೇರೆ ದಾರಿಗೆ ಎಳೆದೊಯ್ಯಿತು. ಆದದ್ದೆಲ್ಲ ಒಳಿತೇ ಆಯಿತು

## ಕನ್ನಡಕ್ಕಾಗಿ ದುಡಿ
## ಕನ್ನಡದಿಂದಲೇ ಪಡಿ

ಪದವೀಧರರಾಗಿ ಊರಿಗೆ ಮರಳಿದ ಮೇಲೆ ೧೯೪೨ರಲ್ಲಿ ರಾಮ ಜಾಧವ ಒಂದು ವರುಷ ಬಾಗಲಕೋಟೆಯ ಬಸವೇಶ್ವರ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಅದೇ ವೇಳೆ 'ಏಕೀಕರಣದ ಭಂಡಾರಿ' ಜಂಗಿನ ಮುಂಗಯ್ಯನವರು ಕರ್ನಾಟಕ ವಣಿಕ ಸಂಘವನ್ನು ಕಟ್ಟುವುದರಲ್ಲಿ ಮಗ್ನರಾಗಿದ್ದರು. ಹೈಸ್ಕೂಲ ವಿದ್ಯಾರ್ಥಿ ದೆಸೆಯಿಂದಲೂ ರಾಮ ಜಾಧವ 'ಉತ್ಸಾಹಿ ಕಾರ್ಯಕರ್ತ'ನೆಂದು ಮುರಿಗಯ್ಯನವರು ಗುರುತಿಸಿದರು. ಈಗ ಶಿಕ್ಷಕರಾಗಿ ಬಂದಿದ್ದರಿಂದ ಅವರ ಸಂಪರ್ಕ ಇನ್ನಷ್ಟು ನಿಕಟವಾಯಿತು.

೧೯೪೩ರಲ್ಲಿ ಭೀಕರ ಬರಗಾಲ ಬಿದ್ದಿತು. ಮಳೆ-ಬೆಳೆ ಇಲ್ಲದೆ ಜನ ಕಂಗಾಲಾದರು. ಆಗ "ಸರ್ವಂಟ್ಸ್ ಆಫ್ ಇಂಡಿಯಾ 'ಸೊಸೈಟಿ'ಯವರು ಬರಗಾಲ ಕಾಮಗಾರಿ ಪ್ರಾರಂಭಿಸಿದರು. ರಾಮ ಜಾಧವರು ಅದರಲ್ಲಿ ತೊಡಗಿಸಿಕೊಂಡರು. ಅದೇ ವರುಷ ಕೇಂದ್ರ ಸರಕಾರವು ತಂಬಾಕಿನ ಮೇಲೆ ತೆರಿಗೆ ಹೇರಿತು. ಇದರಿಂದ ವ್ಯಾಪಾರಸ್ಥರೂ ಕಷ್ಟ-ನಷ್ಟಗಳನ್ನು ಎದುರಿಸುವಂತಾಯಿತು. ಆಗ ಆ ಭಾಗದಲ್ಲಿ ಬ್ಯಾರಿಸ್ಟರ್ ಮೋರೆಯವರು ಮುಖ್ಯ ಆಡಳಿತಾಧಾರಿಕಾರಿಯಾಗಿದ್ದರು. ಅವರಿಗೆ ವ್ಯಾಪಾರಸ್ಥರ ಸಮಸ್ಯೆಗಳನ್ನು ನಿವೇದಿಸಿಕೊಳ್ಳಬೇಕಾಗಿತ್ತು. ಅವರೊಂದಿಗೆ ಇಂಗ್ಲಿಷ್‌ನಲ್ಲಿಯೇ ಮಾತನಾಡಬೇಕಾದ್ದರಿಂದ ಮುರಿಗಯ್ಯನವರಿಗೆ ರಾಮ ಜಾಧವರೇ ಅದಕ್ಕೆ ಯೋಗ್ಯ ವ್ಯಕ್ತಿಯೆನಿಸಿದರು. ಜಾಧವರನ್ನು ಮೋರೆಯವರ ಬಳಿಗೆ ಕರೆದುಕೊಂಡು ಹೋಗಿ ಮರಾಠಿಯಲ್ಲಿ ಪರಿಚಯಿಸಿದರು. ಜಾಧವರು ಇಂಗ್ಲಿಷಿನಲ್ಲಿ ಚೆನ್ನಾಗಿ ಮಾತನಾಡಿದರು. ವ್ಯಾಪಾರಸ್ಥರ ಸಮಸ್ಯೆಗಳನ್ನು ಮನವರಿಕೆ ಮಾಡಿದರು. ಬ್ಯಾರಿಸ್ಟರ್‌ರು ಮೆಚ್ಚುವಂತೆ ಇಂಗ್ಲಿಷ್ ಮಾತಾಡಿದರು. ಇದರ ಪರಿಣಾಮ ತಮ್ಮ ಖಾತೆಯಲ್ಲಿ ನೌಕರಿ ಮಾಡಲು ಅರ್ಜಿ ಹಾಕಬೇಕೆಂದು ಬ್ಯಾರಿಸ್ಟರ್ ಸೂಚಿಸಿದರು. ಕೊಲ್ಲಾಪುರದಿಂದ ಅರ್ಜಿ ಫಾರ್ಮನ್ನು ತರಿಸಿಕೊಟ್ಟರು. ೧೯೪೩ ಜೂನ್ ತಿಂಗಳಲ್ಲಿ ಸಂದರ್ಶನಕ್ಕೆ ಕರೆ ಬಂದಿತು. ಜಾಧವರು ಐಪಿಎಸ್ ಆಗಿದ್ದ ಇಂಗ್ಲಿಷ್ ಅಧಿಕಾರಿ ಕಲೆಕ್ಟರ್ ಮ್ಯಾಕ್ಲಿನನ್ ಎದುರು ನಿಂತರು. ಅರ್ಜಿಯಲ್ಲಿಯ ವಿವರಗಳನ್ನು ನೋಡಿ, ಅವರು ಒಂದು ಕವಿತೆ ಹೇಳಲು ತಿಳಿಸಿದರು. ಆ ಸನ್ನಿವೇಶವನ್ನು ಜಾಧವರ ಮಾತಿನಲ್ಲಿಯೇ ಕೇಳಬೇಕು:

'ಮುಂಗಾರು ಗಾಳಿ ಮುಂಬೈ ಮಳಿ ಒಳಗಿದ್ದ 'ಕಾವ್ಯಗಾನ'ದ ಬೆಳಿ ಥಟ್ಟನೆ ಬರಲಿರುವ ಶ್ರಾವಣಕ್ಕೆ ಶ್ರವಣ ಮಾಡಿಸು ಅಂದಂತಾಗಿ ಬೇಂದ್ರೆಯವರ 'ಬಂತು ಶ್ರಾವಣ' ಕವಿತೆಗೆ ನನ್ನ ಅವಾಜಿನ ರಿವಾಜಿನಲ್ಲಿ ನಮಾಜು ಮಾಡಿಸಿದೆ. 'ಕನ್‌ಸ್ಟ್ರಕ್ಷನ್ ಹೌಸಿ'ನಲ್ಲಿ ಬೇರೆ ಕಳೆ ಮೂಡಿತು. ಆ ದಿನದ ಎಪ್ಪತ್ತೆರಡು ಉಮೇದವಾರರ ಪೈಕಿ. ಸಂದರ್ಶಕರ ಪೈಕಿ ಇದ್ದ ಒಬ್ಬ ಉಚ್ಚ ಅಧಿಕಾರಿ ನನ್ನನ್ನಷ್ಟೇ ತಮ್ಮ ಚೇಂಬರಿಗೆ ಕರೆಸಿ. ಕೈಯಲ್ಲಿ ನೇಮಣೂಕಿಯ ಆಜ್ಞೆ ಜಾರಿ ಮಾಡಿ, ಕೊಲ್ಲಾಪೂರ ವಿಭಾಗದ ಅಸಿಸ್ಟಂಟ್ ಕಲೆಕ್ಟರ್‌ರನ್ನು ಕಾಣಲು ನಿರ್ದೇಶಿಸಿದರು.'

ಬೇಂದ್ರೆಯವರ ಕವಿತೆಗಿರುವ ಅಗಾಧ ಶಕ್ತಿಯನ್ನು ನೆನೆಯುತ್ತ ನೌಕರಿಯ ಆಜ್ಞಾಪತ್ರವನ್ನು ತೆಗೆದುಕೊಂಡರು. ಆ ಪತ್ರವನ್ನು ಇವರ ಕೈಗೆ ಕೊಟ್ಟವರು ಬ್ಯಾರಿಸ್ಟರ್ ಮೋರೆಯವರ ಅಣ್ಣನವರಾಗಿದ್ದ ಬಾಬೂಸಾಹೇಬ ಮೋರೆ. ಬರಗಾಲ ಕಾಮಗಾರಿ ಇನ್ನೂ ಮುಗಿದಿರಲಿಲ್ಲ. ೧೮-೮-೧೯೪೩ರಂದು ಜಾಧವ ಮಿರಜಕ್ಕೆ ಹೋಗಿ ಹೊಸ ಕಚೇರಿ ಪ್ರಾರಂಭಿಸಿದರು. ಮೋರೆಯವರ ಆಪ್ತರಲ್ಲಿ ಕೆಲವು ದಿನ ಕಳೆದರು. ಆಗ ಮದುವೆಯ ಪ್ರಸ್ತಾಪವೂ ಆಯಿತು. ಮೋರೆಯವರು ತಮ್ಮ ಮಗಳನ್ನು ಕೊಡಲು ಮುಂದೆ ಬಂದಿದ್ದರು. ಆದರೆ ಅವರ ಅಧಿಕಾರ ಅಂತಸ್ತುಗಳನ್ನು ನೋಡಿದ ರಾಮ ಜಾಧವರಿಗೆ ಇದು ಹೊಂದಿಕೆಯಾಗದ ಸಂಬಂಧ' ಎನಿಸಿತು. ಸಹೋದರ ಸಹೋದರಿಯರೆಲ್ಲ ಸೇರಿ ತಮ್ಮದು ಹನ್ನೆರಡು ಜನರ ಕುಟುಂಬ. ಹೆಚ್ಚು ಇಲ್ಲ, ಕಡಿಮೆಯೂ ಇಲ್ಲದ ಉಂಡುಟ್ಟು ಸುಖವಾಗಿರುವ ಪರಿವಾರ. ಇದರಲ್ಲಿ ಆಗರ್ಭ ಶ್ರೀಮಂತರ ಮನೆತನದ ಹೆಣ್ಣುಮಗಳು ಪ್ರವೇಶವಾದರೆ ತಮ್ಮ ಮನೆಯ ಗತಿ ಏನು? ಎಂದು ಯೋಚಿಸಿದರು. ಹಾಗೆಯೇ ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಮಿರಜದಲ್ಲಿದ್ದಾಗ ಸೇಡಬಾಳದಲ್ಲಿದ್ದ ಸಾಹಿತಿ ಮಿರ್ಜಿ ಅಣ್ಣಾರಾಯರ ಪರಿಚಯವಾಯಿತು. ಹೀಗಿರುವ ಸಂದರ್ಭದಲ್ಲಿ ಒಂದು ದಿನ ಅಬಕಾರಿ ಮತ್ತು ಸುಂಕ ನಿರ್ವಹಣಾ ಇಲಾಖೆಯಿಂದ (Central Excise and Customs Department) ನೌಕರಿಯ ಕರೆ ಬಂದಿತು. ೧೯೪೩ರಲ್ಲಿ ಪ್ರತಿರೋಧಕ ವಿಭಾಗದ (Preventive) ಮುಖ್ಯಸ್ಥರಾಗಿ ಸೇವೆಗೆ ಸೇರಿಕೊಂಡರು. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಈ ಇಲಾಖೆಯ ಪಾತ್ರ ಅದ್ಭುತವಾದದ್ದು. ಸಾರ್ವಜನಿಕ ಶಿಕ್ಷಣ, ಸಮಾಜ ಕಲ್ಯಾಣದಂತಹ ಕಾರ್ಯಕ್ರಮಗಳಿಗಾಗಿ ಹಣಬೇಕು. ಜನರು ತೆರಿಗೆ ರೂಪದಲ್ಲಿ ಕೊಟ್ಟಂತಹ ಹಣವನ್ನು ಸಂಗ್ರಹಿಸಿ, ಅದನ್ನೇ ಅಭಿವೃದ್ಧಿಗಾಗಿ  ಬಳಸಬೇಕು. ಅಂದರೆ ದೇಶದ ಪ್ರಗತಿಯು ತೆರಿಗೆ ಸಂಗ್ರಹಣೆಯನ್ನೇ ಅವಲಂಬಿಸಿರುವಂತಹದು. ಆದರೆ ಎಷ್ಟು ಜನರು ಪ್ರಾಮಾಣಿಕರಾಗಿ ತೆರಿಗೆಯನ್ನು ಕೊಡುತ್ತಾರೆ? ನ್ಯಾಯವಾಗಿ ಕೊಡಬೇಕಾದ ತೆರಿಗೆಯನ್ನು ಕೊಡದೆ ಅನ್ಯಾಯವಾಗಿ ಉಳಿಸಿಕೊಳ್ಳುವ ಹಣವನ್ನು ನಾವು ಕಪ್ಪು ಹಣವೆಂದು ಕರೆಯುತ್ತೇವೆ. ಹೀಗೆ ತೆರಿಗೆಯಿಂದ ತಪ್ಪಿಸಿಕೊಳ್ಳುವವರನ್ನು ಪತ್ತೆ ಹಚ್ಚುವುದು ಮತ್ತು ಅವರು ಸಂಗ್ರಹಿಸಿದ್ದ ಅನ್ಯಾಯದ ಹಣಕ್ಕೆ ಮುಟ್ಟುಗೋಲು ಹಾಕುವ ಕೆಲಸವನ್ನು ರಾಮ ಜಾಧವ ನಿರ್ವಹಿಸಬೇಕಾಯಿತು. ಸೇವೆಯುದ್ದಕ್ಕೂ ಈ ಕಾರ್ಯವನ್ನು ಅವರು ಅತ್ಯಂತ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಮಾಡಿದರು. ಪಾಟೀಲ ಪುಟ್ಟಪ್ಪನವರು ಹೇಳುವಂತೆ 'ತನ್ನ ಸಂಬಳದ ಮೇಲೆಯೇ ಬದುಕಿದ ಪ್ರಾಮಾಣಿಕ ವ್ಯಕ್ತಿಯಾತ' ಕೆಲವರಿಗೆ ಈ ಇಲಾಖೆಯ ನೌಕರಿಯೆಂದರೆ ಬಂಗಾರದ ತತ್ತಿ ಇಡುವ ಕೋಳಿ, ಜಾಧವರ ಅನುಭವದಲ್ಲಿ ಅದೊಂದು 'ಬಲಾ ಬಲದ ಯುದ್ಧರಂಗ', 'ಕಳ್ಳ ಸಾಗಾಣಿಕೆದಾರರಿಗೆ ಸೋಲಬಾರದು, ಸೋತವರು ಅಲ್ಲಿರಬಾರದು' ಎಂದು ಹೇಳುತ್ತಿದ್ದರು. ಕಳ್ಳವ್ಯಾಪಾರಿಗಳು ರಚಿಸುತ್ತಿದ್ದ ಎಲ್ಲ ಕುತಂತ್ರಗಳನ್ನು ಪತ್ತೆ ಹಚ್ಚಿ ಅವುಗಳನ್ನು ವಿಫಲಗೊಳಿಸುವಲ್ಲಿ ಇವರು ನಿಪುಣರಾಗಿದ್ದರು. ಭ್ರಷ್ಟಾಚಾರ, ಸುಳ್ಳು. ಮೋಸ ಇವರ ಸಮೀಪಕ್ಕೂ ಸುಳಿಯುತ್ತಿರಲಿಲ್ಲ. ಮುಂಬೈ, ಚೆನ್ನೈ, ಕಲಕತ್ತಾ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಕೂಡ ಇವರು ಸೇವೆ ಸಲ್ಲಿಸಿದರು. ಇವರ ಪ್ರಾಮಾಣಿಕ ಸೇವೆಗೆ ಕೆಲವೊಮ್ಮೆ ಮೇಲಾಧಿಕಾರಿಗಳೇ ಮುಳ್ಳಾಗುತ್ತಿದ್ದರು. ಅಂಥ ಒಂದು ಘಟನೆಯನ್ನು ಪಾಟೀಲ ಪುಟ್ಟಪ್ಪನವರು ಸ್ಮರಿಸಿದ್ದಾರೆ.

ಇಲಾಖೆಯ ಸ್ವಾರ್ಥ ಅಧಿಕಾರಿಯೊಬ್ಬರಿಗೆ ಇವರ ಪ್ರಾಮಾಣಿಕತೆ ಸಹನವಾಗುತ್ತಿರಲಿಲ್ಲ. ಮುದ್ದಾಮ ತೊಂದರೆ ಕೊಡುವುದಕ್ಕಾಗಿ ಬೇರೆ ಬೇರೆ ಕಡೆಗೆ ವರ್ಗ ಮಾಡುತ್ತಿದ್ದರು. ಇದರಿಂದ ಬೇಸತ್ತು ಜಾಧವರು ಒಮ್ಮೆ ಬೆಳಗಾವಿಯಲ್ಲಿ ಪಾಪು ಅವರ ಗಮನಕ್ಕೆ ತಂದರು. ಅಧಿಕಾರಿ ವಿರುದ್ದ ಗೋಳಾಡಿದರು. ಕಳ್ಳ ಹಣ ಸಂಪಾದಿಸುತ್ತಿದ್ದ ಅಧಿಕಾರಿಗಳ ಮನೆಯ ಮೇಲೆ ರೇಡ ಮಾಡುವ ಸಂದರ್ಭ ಬಂದಾಗ, ಆ ಅಧಿಕಾರಿಯು ಜಾಧವರ ಕಾರ್ಯಯೋಜನೆಯನ್ನೆಲ್ಲ ಮುಂಚಿತವಾಗಿಯೇ ಸಂಬಂಧಿಸಿದವರಿಗೆ ತಿಳಿಸಿಬಿಡುತ್ತಿದ್ದನು. ಇದರಿಂದ ಜಾಧವರ ದಾಳಿ ವಿಫಲವಾಗಿ ಬಿಡುತ್ತಿತ್ತು. ಭ್ರಷ್ಟರು ಸುಲಭವಾಗಿ ತಪ್ಪಿಸಿಕೊಳ್ಳುತ್ತಿದ್ದರು. ಪಾಪು ಅವರು ತಮ್ಮ ರಾಜಕೀಯ ಪ್ರಭಾವ ಉಪಯೋಗಿಸಿ ಆ ಅಧಿಕಾರಿಯನ್ನು ವರ್ಗ ಮಾಡಿಸಿದರು. ಆದರೆ ಮೇಲಾಧಿಕಾರಿ ವರ್ಗವಾದ ಸ್ಥಳಕ್ಕೆ ಹಾಜರಾಗಲೇ ಇಲ್ಲ. ಏಕೆಂದರೆ ಆತ ಮದ್ರಾಸ ಗವರ್ನರ್‌ರ ಸಂಬಂಧಿಯಾಗಿದ್ದನಂತೆ. ಇದು ತಿಳಿದ ಮೇಲೆ ಪಾಪು ಅವರು ಕೆ.ಸಿ.ಪಂತರ ಮುಖಾಂತರ ಮೇಲಾಧಿಕಾರಿಯನ್ನು ಗೌಹಾತಿಗೆ ವರ್ಗ ಮಾಡಿಸಿದರಂತೆ.

ರಾಮ ಬಾಬಾಜಿ ಜಾಧವ ಅವರನ್ನು ಸಂಕ್ಷಿಪ್ತವಾಗಿ 'ರಾಬಾ' ಎಂದೂ ಕರೆಯಲಾಗುತ್ತಿತ್ತು. ಒಮ್ಮೆ ರಾಬಾ ಬೆಳಗಾವಿಯಲ್ಲಿದ್ದಾಗ ಡೆಪ್ಯೂಟಿ ಕಮೀಶನರ್ ಮನೆಯ ಮೇಲೆ ದಾಳಿ ಮಾಡುವ ಪ್ರಸಂಗ ಬಂತು. ಆ ಅಧಿಕಾರಿ ಲಿಂಗಾಯತ. ಅಲ್ಲದೆ ಕೆಲವೇ ದಿನಗಳಲ್ಲಿ ನಿವೃತ್ತನಾಗುವವನಿದ್ದ. ಅಂಥವನ ಮನೆ ಮೇಲೆ ದಾಳಿ ಮಾಡಿ ಏನು ಪ್ರಯೋಜನ? ಎಂದು ರಾಜಾ ಉಪೇಕ್ಷಿಸಿದರಂತೆ ಇದನ್ನು ತಿಳಿದು ಪಾಪು ಅವರು How Curruption and Kavita go together ಎಂದು ತಮಾಷೆ ಮಾಡಿದರಂತೆ. ಅವರು ವಚನ ಸಾಹಿತ್ಯವನ್ನು ಆಳವಾಗಿ ಓದಿಕೊಂಡಿದ್ದರು. ಬಸವಣ್ಣನ ಚಿಂತನೆ ಅವರ ತಲೆಯಲ್ಲಿ ತುಂಬಿ, ಮಾತಿನಲ್ಲಿ ಒಂದೇ ಸಮ ತುಳುಕುತ್ತಿತ್ತು. ಅವರ ಮಾತಿನ ವಿಷಯ ಯಾವುದೇ ಇರಲಿ, ಅಲ್ಲಿ ಬಸವ ಬೇಂದ್ರೆ ಹಾಜರಾಗುತ್ತಿದ್ದರು. ಅವರ ನಿಕಟವರ್ತಿ ಹಾಗೂ 'ಬಸವಭೂಮಿ ಶರಣ ಸಮ್ಮೇಳನ'ದ ಸಂಚಾಲಕರಾಗಿದ್ದ ಜಮಖಂಡಿಯ ತಾತಾಸಾಹೇಬ ಬಾಂಗಿಯವರು ರಾಜಾ ಅವರ ಬಗ್ಗೆ ಬರೆದದ್ದು ಹೀಗೆ : ನಿಪ್ಪಾಣಿ, ಸೊಲ್ಲಾಪುರ ಕಡೆ ಜಾಧವ ಚವ್ಹಾಣ, ಮಾನೆ ವಗೈರೆ ಅಡ್ಡ ಹೆಸರಿನ ವೀರಶೈವರಿದ್ದಾರೆ. ಹಾಗೆಯೇ ಈ ಜಾಧವ ಕೂಡಾ ವೀರಶೈವರೇ ಇರಬಹುದೆಂದು ಬಹಳಷ್ಟು ಸಮೀಪವರ್ತಿಗಳ ಕಲ್ಪನೆ. ಯಾಕೆಂದರೆ ಇವರಲ್ಲಿ ವೀರಶೈವ ಸಂಸ್ಕಾರವು ಸಾಕಾರವಾಗಿಬಿಟ್ಟಿದೆ ಎಂದರೆ ತಪ್ಪಾಗದು' ರಾಬಾ ಜಾಧವರನ್ನು ನೋಡಿದರೆ ಈ ವಿಷಯ ತಪ್ಪಾಗಿ ಕಾಣದು. ಇಂದಿನ ಲಿಂಗಾಯತ ಸಮಾಜವು ಬಸವ ಸಿದ್ಧಾಂತಗಳಿಂದ ದೂರ ಸರಿಯುತ್ತಿರುವ ಬಗ್ಗೆ ಅವರಿಗೆ ಖೇದವಿತ್ತು. ನೌಕರಿಯ ಸಂದರ್ಭದಲ್ಲಿ ಕೂಡ ಅವರು ಬಸವಣ್ಣ ಹೇಳಿದ ನೀತಿ ನಿಯಮಗಳ ಬಗ್ಗೆ ಎಚ್ಚರದಿಂದ ಇದ್ದರು.

ಕೇಂದ್ರ ಸುಂಕ ಹಾಗೂ ನಿರ್ವಹಣಾ ಇಲಾಖೆಯಲ್ಲಿ ಸೇವೆ ಮಾಡಿದ ಪರಿಣಾಮವಾಗಿ ಅವರಿಗೆ ದೊಡ್ಡ ದೊಡ್ಡವರ ಒಳ ಹೂರಣವೆಲ್ಲ ಗೊತ್ತಿತ್ತು. ಇದರಿಂದ ದೊಡ್ಡ ದೊಡ್ಡ ರಾಜಕಾರಣಿಗಳಿಗೆ ಅಧಿಕಾರಿಗಳಿಗೆ 'ರಾಬಾ' ಎಂದರೆ ಒಂದು ಬಗೆಯ ಹೆದರಿಕೆ, ಒಂದು ಬಗೆಯ ಗೌರವ. ದಿನದ ಇಪ್ಪತ್ನಾಲ್ಕು ತಾಸು ಎಚ್ಚರದಿಂದಿರಬೇಕಾದ ವೃತ್ತಿಯ ಜೊತೆಗೂ ಸಾಹಿತಿಗಳ ಸಹವಾಸ ಬಿಟ್ಟಿರಲಿಲ್ಲ. ವೃತ್ತಿಜೀವನದ ಸಮಸ್ಯೆ-ಸವಾಲುಗಳನ್ನು, ರೋಚಕ

ಅನುಭವಗಳನ್ನು ಕಥೆ ಮಾಡಿ ಬರೆಯುತ್ತಿದ್ದರು. ಬೇಂದ್ರೆಯವರೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ. ೧೯೪೦ರಲ್ಲಿಯೇ ಅವರನ್ನು ಕುರಿತು 'ಕವಿವರ್ಯ' ಎಂಬ ಕವನ ಬರೆದಿದ್ದರು. ಈ ಕವನವನ್ನು ಪ್ರೊ. ಟಿ. ರುಬೆನ್ನರು ಬೇಂದ್ರೆಯವರ ಎದುರು ಓದಿ 'ನಿಮ್ಮ ಬಗ್ಗೆ ಇವರು ಹಲವಾರು ಕವನಗಳನ್ನು ಬರೆದಿದ್ದಾರೆ' ಎಂದು ಹೇಳಿದ್ದುಂಟು. ಇವರು ಮಿರಜದಲ್ಲಿದ್ದಾಗ ಮಿರ್ಜಿ ಅಣ್ಣಾರಾಯರ ಒಡನಾಟ ಬಂದಿತು. ಅವರೊಂದಿಗೆ ಬೇಂದ್ರೆಯವರ ಕುರಿತು ನಡೆಸಿದ ಚರ್ಚೆಯ ಫಲವಾಗಿ 'ದತ್ತವಾಣಿ' ಎಂಬ ವಿಮರ್ಶಾಕೃತಿ ಪ್ರಕಟವಾಯಿತು. ಪ್ರೊ. ಕೆ.ಜಿ. ಕುಂದಣಗಾರ, ರಂ.ಶ್ರೀ ಮುಗಳಿ, ಪಾಟೀಲ ಪುಟ್ಟಪ್ಪ, ಸಂ.ಶಿ. ಭೂಸನೂರಮಠ. ಕೃಷ್ಣಮೂರ್ತಿ ಪುರಾಣಿಕ, ಬಸವರಾಜ ಕಟ್ಟೀಮನಿ, ಚಂಪಾ ಮುಂತಾದ ಸಾಹಿತಿಗಳ ಜೊತೆಗೆ ನಿರಂತರ ಒಡನಾಟವಿತ್ತು. ಅವರ ಜೊತೆಗಿನ ಹರಟೆ ಚರ್ಚೆಗಳಿಗಾಗಿ ಅವರಿದ್ದಲ್ಲಿಗೆ ಹೋಗಿ ಬರುತ್ತಿದ್ದರು.

## ಕೌಟುಂಬಿಕ ಜೀವನ

"ನೀವು ಗಂಡಸು; ನಾನು ಹೆಂಗಸು
ನೀವು ನೀತಿ; ನಾನು ರೀತಿ
ಕೂಡಿರುವುದೇ ಪ್ರೀತಿ
ಇದಿಷ್ಟೇ ಸತ್ಯ'
ಎಂದವಳು ಬಿದ್ದಳು ತೆಕ್ಕೆ
ಕೈಯಲ್ಲಿ ಪೂರ್ಣ ಸಿಕ್ಕೆ

ರಾಮ ಜಾಧವರ 'ಇದಿಷ್ಟೇ ಸತ್ಯ' ಎಂಬ ಕವನದ ಕೊನೆಯ ಚರಣಗಳಿವು. ರಾಮ ಜಾಧವರ ಎರಡನೆಯ ಮದುವೆಯ ಹಿನ್ನೆಲೆಯೇ ಈ ಕವನದ ವಸ್ತು. ಇದನ್ನು ೧೯೪೬ ಡಿಸೆಂಬರ್‌ಲ್ಲಿ ಬರೆದರು. ಇವರ ಮೊದಲ ಪತ್ನಿಯ ಹೆಸರು ಪಾರ್ವತಿ, ಬಳ್ಳಾರಿಯ ಗಂಗೋಜಿ ಮನೆತನದವಳು. ನೋಡಲು ಸ್ಫುರದ್ರೂಪಿ, ಐದು-ಆರನೆಯ ಇಯತ್ತೆ ಶಾಲೆ ಕಲಿತಿದ್ದಳು. ಮನೆಯ ಜನರೊಂದಿಗೆ ತುಂಬಾ ಹೊಂದಿಕೊಂಡಿದ್ದಳು. ಚೊಚ್ಚಲ ಮಗು 'ಅರುಣಾ' ಹುಟ್ಟಿದ ಐದಾರು ತಿಂಗಳಲ್ಲಿಯೇ ೧೯೪೬ರಲ್ಲಿ ಅನಾರೋಗ್ಯದಿಂದ ತೀರಿಕೊಂಡಳು. ರಾಮ ಜಾಧವ ತುಂಬಾ ನೊಂದುಕೊಂಡರು. ಗಂಡನ ಕೆಲಸಕ್ಕೆ ಸಹಕಾರಿಯಾಗಿ ಚೆನ್ನಾಗಿ ಮನೆವಾಳ್ತೆ ನಡೆಸಿದ ಪಾರ್ವತಿಯು ಕುಟುಂಬದವರೆಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಳು. ಅವಳ ಅಗಲಿಕೆಯ ನೋವನ್ನು ಸಹಿಸಲು ರಾಮಜಾಧವರಿಗೆ ತುಂಬಾ ಕಷ್ಟವಾಯಿತು. ಮುದ್ದಿನ ಮಗಳು ಅರುಣಾ ಬಳ್ಳಾರಿಯ ಅಜ್ಜನ ಮನೆಯಲ್ಲಿ ಬೆಳೆಯತೊಡಗಿದಳು.

ಇತ್ತ ತಂಗಿಯರೆಲ್ಲ ಅಣ್ಣನ ಮರು ಮದುವೆಗಾಗಿ ಪ್ರಯತ್ನ ನಡೆಸಿದರು. ಮೊದಮೊದಲು. 'ರಾಬಾ' ನಿರಾಕರಿಸಿದರಾದರೂ ದಿನಗಳೆದಂತೆ ಮೆತ್ತಗಾದರು ಅವರೇ ಕವನದಲ್ಲಿ ಹೇಳಿದಂತೆ:

ನಾ ಬಯಸಿದ ಗೌರಿ
ಆಗದಿದ್ದರೀ ಕುವರಿ
ಕೇರಿ ಕೇರಿಯಲ್ಲಿ ಕಟ್ಟಲಾರೆ
ನನ್ನ ಸಂಕಲ್ಪದ ಗೋರಿ
ಕಾರಣ ಕಳೆಯಾದ ಹಳೆ ಪ್ರಸಂಗ
ಬೆಳೆಗೆ ಅಡ್ಡಿಯಾಗಿತ್ತೀಗ!
ಗೊತ್ತಿಲ್ಲದೆ ನನ್ನ ಇಂಗಿತ
ತಂಗಿ ನಡೆಸಿರಬಹುದೀ ರಂಗತ
ಒಂದು ಜಾಗೆಗೆ ಅನೇಕ ಅರ್ಜಿ
ಸನೇಕದವರ ಪ್ರತ್ಯೇಕ ಮರ್ಜಿ

**ನಡೆದೇ ಇರ್ತದ ಇಂಥ ಸತ್ರ**

**ನಾನೇಕೆ ಮಾಡಬಾರದಂಥ ಪಾತ್ರ?**

**ಅಂತ ಭಾವಿಸುವುದೇ ಸರಿ**

**ಇಲ್ಲವಾದರಾದೀತು ಕಿರಿ ಕಿರಿ**

ಕೊನೆಗೂ ಧೈರ್ಯ ಮಾಡಿದರು. ಧಾರವಾಡದಲ್ಲಿ ಶಿಕ್ಷಣಾಧಿಕಾರಿಯಾಗಿದ್ದ (A.E.O) ಜಗತಾಪ ಅವರ ಮಗಳು ಪದ್ಮಾಳ ಕೈ ಹಿಡಿದರು. ಕಾನ್ವೆಂಟಿನಲ್ಲಿ ಓದಿದ್ದ ಪದ್ಮಾ ಪತಿಯ ಮನಸ್ಸನ್ನು ಅರಿತು ನಡೆಯುವ ಸುಸಂಸ್ಕೃತೆಯಾಗಿದ್ದರು. ಮನೆಯನ್ನು ಅಚ್ಚುಕಟ್ಟಾಗಿ ಒಪ್ಪ ಓರಣವಾಗಿ ಇಡುತ್ತಿದ್ದರು. ಪತಿಯ ಎಲ್ಲ ಕೆಲಸಗಳಿಗೂ ಪೂರ್ಣ ಸಹಕಾರ. ರಾಮ ಜಾಧವರೂ ಅಷ್ಟೇ, ಪದ್ಮಾ ಎಂದರೆ ತುಂಬ ಪ್ರೀತಿ. 'ಪದ್ಮಾ' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಪತ್ನಿಯ ಬಗೆಗೆ ತುಂಬ ಗೌರವ ಕೂಡ. ಅವರ ಮನಸ್ಸಿಗೆ ನೋವಾಗದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಯಾವಾಗಲೋ ಒಮ್ಮೆ ಸಿಗರೇಟು ಸೇದುತ್ತಿದ್ದರು. ಅಪ್ಪಿ ತಪ್ಪಿ ಕೂಡ ಪತ್ನಿಯೆದರು ಮಾತ್ರ ಸೇದುತ್ತಿರಲಿಲ್ಲ. ನಿಜಕ್ಕೂ ಅವರದು ಅನ್ನೋನ್ಯವಾದ ದಾಂಪತ್ಯ, ಆದರ್ಶ ದಾಂಪತ್ಯವೆಂದು ಬಸಲಿಂಗಪ್ಪ (ಅಪ್ಪಣ್ಣ) ಮರಲಿಂಗಣ್ಣವರ (೯೦ ವಯಸ್ಸು) ಹೇಳುತ್ತಾರೆ.

ಕರ್ನಾಟಕಿ ಸಂಗೀತವೆಂದರೆ ಇವರಿಗೆ ಬಹಳ ಪ್ರೀತಿ. ರೇಡಿಯೋದಲ್ಲಿ ಸಂಗೀತ ತೇಲಿ ಬರುತ್ತಿದ್ದರೆ, ಪತ್ನಿಯನ್ನು ಕರೆದು ಅವಳ ಬೆನ್ನ ಮೇಲೆ ಬೆರಳುಗಳಿಂದ ತಾಳ ಹಾಕುತ್ತ ತಾವೂ ಹಾಡಿಗೆ ದನಿ ಸೇರಿಸುತ್ತಿದ್ದರಂತೆ. 'ನಮ್ಮ ವೈನಿ ಎಷ್ಟು ಹೇಳಿದರೂ ಅಣ್ಣನಿಗೆ ಲಕ್ಷ್ಯವೇ ಇರುತ್ತಿರಲಿಲ್ಲ' ಎಂದು ಸಹೋದರಿ ಶ್ರೀಮತಿ ಶಾಂತಾ ನೂಲಿಕರ - ನೆನಪಿನಂಗಳಕ್ಕೆ ಜಾರುತ್ತಾರೆ.

ಪದ್ಮಾವತಿಯವರಿಗೆ ಮಕ್ಕಳಾಗಲಿಲ್ಲ. ಬಳ್ಳಾರಿಯಲ್ಲಿ ಬೆಳೆಯುತ್ತಿದ್ದ ಮಗಳನ್ನೇ ತಮ್ಮ ಮಗಳೆಂದು ಭಾವಿಸಿದರು. ತಮ್ಮೊಟ್ಟಿಗೇ ಕರೆದುಕೊಂಡು ಬಂದರು. ಮಗಳು ಅರುಣಾ ಕೂಡ ತಂದೆ ತಾಯಿಗಳಂತೆ ಪ್ರತಿಭಾನ್ವಿತೆ, ಮಕ್ಕಳೆಂದರೆ ಜಾಧವರಿಗೆ. ಎಲ್ಲಿಲ್ಲದ ಪ್ರೀತಿ. ಒಂದು ಸಲ ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ ಮಾವ ಜಗತಾಪ ಅವರಿಗೆ ನಾಲ್ಕು ವರುಷದ ಹೆಣ್ಣುಮಗು ಸಿಕ್ಕಿತು. ಆ ಮಗುವನ್ನು ಮನೆಗೆ ಕರೆದೊಯ್ಯಲು ಮನೆಯವರೆಲ್ಲ ಅಸಮಾಧಾನ ವ್ಯಕ್ತಪಡಿಸಿದರು. ಆ ವಿಷಯ ಗೊತ್ತಾಗಿ ರಾಮ ಜಾಧವರು ಸಿಕ್ಕ ಆ ಮಗುವನ್ನು ತಮ್ಮ ಮನೆಗೆ ಕರೆತಂದರು. ಮಗುವಿಗೆ 'ಮಂಜು' ಎಂದು ಹೆಸರಿಟ್ಟು ಪ್ರೀತಿ ವಾತ್ಸಲ್ಯಗಳನ್ನು ನೀಡಿದರು. ಬಾಲ್ಯದಲ್ಲಿಯೇ ಮುಸ್ಲಿಂ ಪದ್ಧತಿಯಂತೆ ನಮಾಜ ಮಾಡುವುದನ್ನು ನೋಡಿ ಆ ಮಗು ಮುಸ್ಲಿಂ ಆಗಿರಬಹುದೆಂದು ಕುರಾನ ಓದಿಸಲು ಏರ್ಪಾಡು ಮಾಡಿದರು. ಬೆಳೆದ ಮೇಲೆ ಮುಸ್ಲಿಂ ಯುವಕನೊಂದಿಗೆ ಮದುವೆಯನ್ನೂ ಮಾಡಿಕೊಟ್ಟರು.

ಕೆಲ ವರ್ಷಗಳ ನಂತರ ಮಂಜುನ ಹೆತ್ತ ತಾಯಿ ತಂದೆಗಳ ಪತ್ತೆಯಾಯಿತು. ಅವರು ದಿಲ್ಲಿಯಲ್ಲಿದ್ದರು. ಮಂಜುನ ಮಗ ನರ್ಸಿಂಗ್ ಕೋರ್ಸಿಗೆಂದು ದಿಲ್ಲಿಗೆ ಹೋದಾಗ ಯೋಗಾಯೋಗವೆಂಬಂತೆ ಅವರ ಮನೆತನ ಶೋಧವಾಯಿತು. ಖಾತ್ರಿ ಮಾಡಿಕೊಳ್ಳಲು ಜಾಧವರು ಮಂಜು ಸಿಕ್ಕಾಗ ತೆಗೆಸಿದ್ದ ಫೋಟೋ ದಿಲ್ಲಿಗೆ

ಕಳಿಸಿಕೊಟ್ಟರು. ಅವರು ಅದನ್ನು ನೋಡಿ 'ನಮ್ಮ ಮಗಳೇ' ಎಂದು ಧಾರವಾಡಕ್ಕೆ ಧಾವಿಸಿ ಬಂದರು. ಮಗಳನ್ನು ಮೊಮ್ಮಗನನ್ನು ಅಪ್ಪಿ ಮುದ್ದಾಡಿದರು. ಸೋಜಿಗದ ಸಂಗತಿಯೆಂದರೆ ಬಂದವರು ರಜಪೂತರಾಗಿದ್ದರು. ತಿಳಿಯದೆ ಇಸ್ಲಾಮಿಗೆ ಮತಾಂತರ ಮಾಡಿದ ಬಗ್ಗೆ ಜಾಧವರು ಪಶ್ಚಾತ್ತಾಪ ಪಟ್ಟರು. ಆದರೆ ಆಕೆಯ ಬಗೆಗಿನ ಪ್ರೀತಿ-ವಾತ್ಸಲ್ಯವೇನೂ ಕಡಿಮೆಯಾಗಲಿಲ್ಲ. ಮಂಜು ಹೆತ್ತ ತಾಯಿ ತಂದೆಯನ್ನು ಪಡೆದಳಾದರೂ ಸಾಕಿ ಬೆಳೆಸಿದ ತಾಯಿ ತಂದೆ ಜಾಧವ ದಂಪತಿಗಳನ್ನು ಮರೆಯಲಿಲ್ಲ. ಅರುಣಾಳ ಜೊತೆ ಅವಳೂ ಮಗಳಾಗಿ ಉಳಿದಳು.

ಅರುಣಾಳಿಗೆ ಇಬ್ಬರು ಮಕ್ಕಳು. ರಾಘವೇಂದ್ರ, ಸುಧೀಂದ್ರ, ಸುಧೀಂದ್ರನ ಜೊತೆ ಅರುಣಾ ಕರ್ಪೂರ ಮತ್ತು ಮೇಣಬತ್ತಿ ವ್ಯಾಪಾರ ನಡೆಸುತ್ತಿದ್ದಾರೆ. ರಾಬಾ ಅವರು ರಾಘವೇಂದ್ರನನ್ನೇ ತಮ್ಮ ಆಸ್ತಿಗೆ ವಾರಸುದಾರನಾಗಿ ಮಾಡಿಕೊಂಡರು. ಮಕ್ಕಳೆಂದರೆ ಅವರಿಗೆ ಅಪಾರ ಪ್ರೀತಿ, ಜಾಧವರದು ದೊಡ್ಡ ಕುಟುಂಬವೆಂದು ಈ ಹಿಂದೆಯೇ ಹೇಳಲಾಗಿದೆ. ಏಳು ಜನ ತಂಗಿಯರು ಮೂವರು ತಮ್ಮಂದಿರು. ಮೊದಲ ತಂಗಿಯ ಹೆಸರು ಲಕ್ಷ್ಮೀ (ಬಾದಾಮಿಯ ರೈತ ಕುಟುಂಬವೊಂದರ ಸೊಸೆಯಾಗಿ ಮನೆ ತುಂಬಿದಳು) ಎರಡನೆಯವಳು ಅನುಸೂಯ (ಈಕೆಯ ಗಂಡ ಆಝಾದ ಹಿಂದ್ ಫೌಜದಲ್ಲಿದ್ದರು) ಮೂರನೆಯವಳು ಕಾಶೀಬಾಯಿ ಇವಳ ಬೆನ್ನ ಮೇಲೆ ಹುಟ್ಟಿದವರು ಮೂವರು ತಮ್ಮಂದಿರು. ವೆಂಕಟರಾವ, ಬ್ಲಿಚ್ ಕಂಪನಿಯಲ್ಲಿ ವಿತರಕರಿದ್ದರು; ಕೃಷ್ಣರಾವ, ಪೊಲೀಸ್ ಇಲಾಖೆಯಲ್ಲಿದ್ದರು. ಐದನೆಯವರು ಶ್ರೀಮತಿ ಶಾಂತಾಬಾಯಿ ನೂಲಿಕರ ತಾಳಿಕೋಟೆಯಲ್ಲಿದ್ದಾರೆ. ಶಾರದಾ ಕ್ಯಾಶ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷೆಯಾಗಿದ್ದಾರೆ. ಆರನೆಯ ಸುಶೀಲಾ ಪುಣೆಯಲ್ಲಿದ್ದಾರೆ. ಕೊನೆಯವರೇ ಸರೋಜಿನಿ ಐಂಡೇರಾವ್ ಕಾಟ್ಕರ್. ಇವರು ಮನ್ಸೂರ್ ಗ್ರಾಮದಲ್ಲಿ ಮಹಿಳಾ ಆರ್ಥಿಕ ವಿಕಾಸ ಸಂಘವನ್ನು ಕಟ್ಟಿಕೊಂಡಿದ್ದಾರೆ. ಅದರ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಪತಿ ಮತ್ತು ಮಕ್ಕಳ ಸಹಯೋಗದಲ್ಲಿ ಊದಿನಕಡ್ಡಿ ಫ್ಯಾಕ್ಟರಿಯನ್ನೂ ನಡೆಸುತ್ತಿದ್ದಾರೆ. ಇವರು ಮಹಿಳೆಯರ ಸಬಲೀಕರಣ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಇವರು ಬೆಳಗಾವಿಯ ಖ್ಯಾತ ಸಾಹಿತಿ ಡಾ. ಸರಜೂ ಕಾಟ್ಕರ್ ಅವರ ಅತ್ತಿಗೆ.

## ಕನ್ನಡದ ಕೆಲಸಗಳು

ಏನೇ ಇದ್ದರೂ ಇರಲಿ

ಎಂಥದೇ ಬಂದರೂ ಬರಲಿ

ಕನ್ನಡಕ್ಕಾದರೆ ತರಲಿ

ನಾನಿದ್ದೇನೆ ಕನ್ನಡದ ಕೊಡಲಿ

ಕಾದುತ್ತ ಕೊಡಲು ನನ್ನದೇ ಬಲಿ

ಎಷ್ಟಾದರೂ ನಾನೊಬ್ಬ ಮಾಮೂಲಿ

ಕನ್ನಡದ ಕೂಲಿ

ರಾಮ ಜಾಧವ ಗೋಕಾಕ ಚಳುವಳಿಯ ಸಂದರ್ಭದಲ್ಲಿ ಬರೆದ ಕವಿತೆಯ ಸಾಲುಗಳಿವು. ಮೈಮನಗಳಲ್ಲಿ ಕನ್ನಡ ಪ್ರೇಮವನ್ನು ತುಂಬಿಕೊಂಡಿದ್ದ ರಾಮ ಜಾಧವರಿಗೆ 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ವಿದ್ಯಾರ್ಥಿ ದಿಸೆಯಿಂದಲೇ ಅವರ ಚಟುವಟಿಕೆ ಕನ್ನಡಮಯವಾಗಿತ್ತು. ನೌಕರಿಯ ಜೊತೆಗೂ ಅದು ಮುಂದುವರೆಯಿತು.

### ೧. ಗಡಿನಾಡಿನಲ್ಲಿ ಕನ್ನಡ ಶಾಲೆಗಳನ್ನು ಕಟ್ಟಿದರು

ಪಾಟೀಲ ಪುಟ್ಟಪ್ಪನವರ ಸ್ನೇಹದ ಗರಡಿಯಲ್ಲಿ ಪಳಗಿದ್ದ ರಾಮ ಜಾಧವ ಕನ್ನಡಕ್ಕೆ ಅನ್ಯಾಯವಾದಾಗಲೆಲ್ಲ ಹುಲಿಯಂತೆ ಗರ್ಜಿಸುತ್ತಿದ್ದರು. ಇವರ ಗರ್ಜನೆಯು ಕೆಲವು ಕಾಲ ಬೆಳಗಾವಿಯ ಗಡಿಭಾಗದಲ್ಲಿಯೂ ಮೊಳಗಿತು. 'ಗಡಿನಾಡಿನಲ್ಲಿ ಒಳನಾಡಿನಲ್ಲಿ ಬುಡದಿಂದ ಹಿಡಿದು ಹುಡೆಕ್ಕೆ ಕಲ್ಲು ಮಣ್ಣು ಹೊರುವ ಕೆಲಸ ಮಾಡಿದ್ದೇನೆ' ಎಂದು ಅವರೇ ಹೇಳಿದ್ದಾರೆ.

ಭಾಷಾವಾರು ಪ್ರಾಂತಗಳ ರಚನೆಯಲ್ಲಿ ಮಹಾರಾಷ್ಟ್ರ ನಿರೀಕ್ಷಿಸಿದಷ್ಟು ಪ್ರದೇಶವನ್ನು ಪಡೆದುಕೊಳ್ಳಲಿಲ್ಲ. ಕಳೆದುಕೊಂಡ ಪ್ರದೇಶ ಮರಳಿ ಪಡೆಯುವ ಉದ್ದೇಶದಿಂದಲೇ ಮಹಾರಾಷ್ಟ್ರ ಏಕೀಕರಣ ಸಮಿತಿ ರಚನೆಯಾಯಿತು. ಮುಖ್ಯವಾಗಿ ಬೆಳಗಾವಿ, ನಿಪ್ಪಾಣಿ, ಖಾನಾಪುರ ಮೊದಲಾದ ಪಟ್ಟಣಗಳು ಮಹಾರಾಷ್ಟ್ರಕ್ಕೆ ಸೇರಬೇಕೆಂಬುದು ಈ ಸಮಿತಿಯ ಮುಖ್ಯ ಧೋರಣೆಯಾಗಿತ್ತು. ಅದಕ್ಕಾಗಿ ಉಗ್ರ ಹೋರಾಟವನ್ನು ಪ್ರಾರಂಭಿಸಿತು. ಪರಿಣಾಮ ಬೆಳಗಾವಿಯ ಗಡಿ ಪ್ರದೇಶದೊಳಗಿನ ಕನ್ನಡಿಗರ ಸ್ಥಿತಿ ಡೋಲಾಯಮಾನವಾಯಿತು. ತಾವು ಕರ್ನಾಟಕದಲ್ಲಿ ಉಳಿಯುತ್ತೇವೆಯೋ ಅಥವಾ ಮಹಾರಾಷ್ಟ್ರಕ್ಕೆ ಹೋಗುತ್ತೇವೆಯೋ ಎನ್ನುವ ಆತಂಕ ಅವರಿಗಿತ್ತು. ಅಂಥ ಸ್ಥಿತಿಯಲ್ಲಿ ಅವರಿಗೆ ಕನ್ನಡಪರ ನಿಲುವು ಮನಗಾಣಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ನಡೆಯಬೇಕಿತ್ತು. ಅದಕ್ಕಾಗಿ ಜನರನ್ನು ಸಂಘಟಿಸಿ ಶಿಕ್ಷಣ, ಸಾಹಿತ್ಯ, ಸಂಸ್ಕೃತಿಯ ಬಗೆಗೆ ಕ್ರಿಯಾಯೋಜನೆ ರೂಪಿಸಬೇಕಾಗಿತ್ತು. ಸರಕಾರ ಈ ಬಗ್ಗೆ ಹೆಚ್ಚು ಆಸಕ್ತಿ ತಾಳದೇ ಹೋದಾಗ ಕನ್ನಡ ಪರ ಚಿಂತಕರು, ಹೋರಾಟಗಾರರು ಗಡಿಭಾಗದವರಿಗೆ ಭರವಸೆಯಾಗಿ ನಿಲ್ಲುವುದು ಅನಿವಾರ್ಯವಾಯಿತು. ಆಗ ರಾಮ ಜಾಧವರು

ಬೆಳಗಾವಿ, ನಿಪ್ಪಾಣಿ ಪ್ರದೇಶದಲ್ಲಿ ಈ ಬಗೆಯ ಬಹಳಷ್ಟು ಕೆಲಸ ಮಾಡಿದರು. ಒಬ್ಬ ಅಧಿಕಾರಿಯಾಗಿ, ಸಮಾಜ ಸೇವಕರಾಗಿ ಅಂದು ಅವರು ಮಾಡಿದ ಕಾರ್ಯ ಇಂದಿಗೂ ಕಣ್ಣ ಮುಂದಿದೆ.

೧೯೬೦ರ ದಶಕದಲ್ಲಿ ಮಹಾರಾಷ್ಟ್ರವು ಮುಂಗೈ ಜೋರಿನಿಂದ ಗಡಿಭಾಗದಲ್ಲಿರುವ ಕನ್ನಡ ಶಾಲೆಗಳನ್ನು ಮುಚ್ಚತೊಡಗಿತು. ಆಗ ಜಾಧವರು ನಿಪ್ಪಾಣಿಯಲ್ಲಿದ್ದರು. ನಿಪ್ಪಾಣಿ ಸುತ್ತ ಮುತ್ತ ಕೆಲವು ಕನ್ನಡ ಶಾಲೆಗಳು ಮುಚ್ಚುವುದನ್ನು ನೋಡಿ ಜಾಧವರು ಉಗ್ರವಾಗಿ ಪ್ರತಿಭಟಿಸಿದರು. ಕನ್ನಡಿಗರನ್ನು ಕಟ್ಟಿಕೊಂಡು ಧರಣಿ ಸತ್ಯಾಗ್ರಹ ಮಾಡಿದರು. ಮುಚ್ಚಿದ್ದ ಶಾಲೆಗಳನ್ನು ತೆರೆಸಿದರು. ಇಷ್ಟೇ ಅಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಕನ್ನಡ ವಿದ್ಯಾರ್ಥಿಗಳ ಮುಂದಿನ ಓದಿಗಾಗಿ ಪ್ರೌಢಶಾಲೆಗಳನ್ನು ತೆರೆಯಲು ಶ್ರಮಿಸಿದರು. ನಿಪ್ಪಾಣಿ, ಪಲಕರ್ಣಿ, ಮುಪರಿ ಮುಂತಾದ ಕಡೆಗಳಲ್ಲಿ ಸ್ಥಳೀಯ ಜನರನ್ನು ಸಂಘಟಿಸಿ, ಶಿಕ್ಷಣ ಸಂಸ್ಥೆಗಳ ಹುಟ್ಟಿಗೆ ಕಾರಣರಾದರು. ೧೯೪೯-೫೦ರಲ್ಲಿ ಹಲಕರಣಿಯಲ್ಲಿ ಹೈಸ್ಕೂಲು ಪ್ರಾರಂಭಿಸಿದರು. ೧೯೫೧-೫೨ರ ಅವಧಿಯಲ್ಲಿ ಕಾಗಲ ಹತ್ತಿರದ ಹುಪರಿ ಎಂಬ ಗ್ರಾಮದಲ್ಲಿ ಹೈಸ್ಕೂಲು ಪ್ರಾರಂಭಿಸಿದರು. ಅದೇ ವೇಳೆಯಲ್ಲಿ ಬೆಳ್ಳಿ ಆಭರಣಗಳ ನಿರ್ಮಾಪಕರನ್ನು ಸಂಘಟಿಸಿ, ಅವರ ಯೋಗಕ್ಷೇಮಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಅದರ ಉದ್ಘಾಟನೆಗಾಗಿ ಕೇಂದ್ರ ಯೋಜನಾ ಸಮಿತಿಯ ಮೊದಲ ಉಪಾಧ್ಯಕ್ಷ ಜಿ.ಎಲ್. ಮೆಹತಾ ಅವರನ್ನು ಕರೆಸಿದರು. ೧೯೫೯-೬೦ ನೇ ಸಾಲಿನಲ್ಲಿ ಕನ್ನಡ ಮಾತನಾಡುವ ವಿದ್ಯಾರ್ಥಿಗಳಿಗಾಗಿ ನಿಪ್ಪಾಣಿಯಲ್ಲಿ ಹೈಸ್ಕೂಲು ಮತ್ತು ಕಾಲೇಜು ಹುಟ್ಟಿಕೊಳ್ಳಲು ಶ್ರಮಿಸಿದರು. ಈ ಸಂದರ್ಭದಲ್ಲಿ ನಿಪ್ಪಾಣಿಯ ತಂಬಾಕು ವ್ಯಾಪಾರಸ್ಥರನ್ನು ಸಂಘಟಿಸಿ, ಅವರಿಂದ ದೇಣಿಗೆ ಸಂಗ್ರಹಿಸಿದರು. ರಾಮ ಜಾಧವರು ಅಂದು ಆರಂಭಿಸಿದ್ದ ಹೈಸ್ಕೂಲುಗಳು ಇವತ್ತಿಗೂ ಶಿಕ್ಷಣ ಸೇವೆಯಲ್ಲಿ ನಿರತವಾಗಿವೆ ಮತ್ತು ಶಿಸ್ತಿನಿಂದ ಮುಂದುವರೆದಿವೆ.

ನಿಪ್ಪಾಣಿ ಹೈಸ್ಕೂಲ ೨೫ ವರುಷ ಪೂರೈಸಿದ ಸಂದರ್ಭದಲ್ಲಿ ದೊಡ್ಡ ಕಾರ್ಯಕ್ರಮವನ್ನು ರೂಪಿಸಿತು. ಸಂಸ್ಥಾಪಕರಲ್ಲಿ ಒಬ್ಬರಾದ ರಾಮ ಜಾಧವರನ್ನು ಕಾರ್ಯಕ್ರಮಕ್ಕೆ ಆಮಂತ್ರಿಸಿತು. ಸ್ಮರಣ ಸಂಚಿಕೆಗಾಗಿ ಅವರ ಭಾವಚಿತ್ರವನ್ನು ಕೇಳಿತು. ಅದಕ್ಕೆ ಉತ್ತರವಾಗಿ ಜಾಧವರು ಒಂದು ಕವನವನ್ನೇ ಬರೆದು ಕಳಿಸಿದರು:

**ಎಂದೋ ಮಾಡಿರಬಹುದು ಕೊಂಚ ಸೇವೆ**
**ಇಂದೂ ನೆನಪಿಟ್ಟಿದೆ ಅಲ್ಲಿಯ ಹವೆ**
**ಸಂಸ್ಥೆಯ ಬೆಳ್ಳಿಹಬ್ಬಕ್ಕೆ ಬೇಕು ಫೋಟೋ ಪ್ರತಿ**
**ಅಂತಾ ಬಂತು ಮಿತ್ರರ ಪತ್ರ**
**ಶೋಧಿಸಿದಾಗ ನನ್ನ ಹತ್ರ**
**ಶಾಲಾಬಾಲಕನಿದ್ದಾಗ, ಕಾಲೇಜಿನಲ್ಲಿದ್ದಾಗ**
**ಮದುವೆ ಆದಾಗ, ನವಕರಿಯಲ್ಲಿದ್ದಾಗ**
**ಬೀಗರು ಬಿಜ್ಜರು ಕೂಡಿದಾಗ**
**ವಗೈರೆ ವಗೈರೆ ಸಿಕ್ಕವು ಕೆಲವು ಪ್ರತಿ**

ಆದರೆ ನಾನು ಸಿಗಲಿಲ್ಲ
ಸಿಕ್ಕರೆ ಅಗತ್ಯ ಕಳಿಸುತ್ತೇನೆ
ಅಂತ ಉತ್ತರಿಸಿದೆ (ಫೋಟೋ ೧೯ಲಳ)

ಅವರಿಗೆ ಕನ್ನಡಕ್ಕಾಗಿ ದುಡಿದ ಬಗ್ಗೆ ಯಾವುದೇ ಮೋಹವಿರಲಿಲ್ಲ. ಅಹಂ ಇರಲಿಲ್ಲ. ನಾನು ಮಾಡಿದೆನೆಂಬ ಭಾವವಿರಲಿಲ್ಲ. ಕನ್ನಡ ಸೇವೆ ಅವರ ಜೀವನದ ಶೈಲಿಯಾಗಿತ್ತು. ಕಡ್ಡಿಯಷ್ಟು ಮಾಡಿ ಗುಡ್ಡದಷ್ಟು ಕೀರ್ತಿಗಾಗಿ ಹಂಬಲಿಸುವವರ ನಡುವೆ ಜಾಧವರಂತಹವರು ತುಂಬ ಅಪರೂಪವಾಗಿ ಕಾಣಿಸುತ್ತಾರೆ. ಇಂಥ ನಿಸ್ವಾರ್ಥ ನುಡಿಸೇವಕರ ಕೆಲಸದಿಂದಾಗಿಯೇ ಗಡಿನಾಡಿನಲ್ಲಿ ಕನ್ನಡ ಕೋಟೆಯು ಭದ್ರವಾಗಿ ನಿಲ್ಲುವಂತಾಯಿತು. ಅಂದಿನವರು ಕಟ್ಟಿದ ಕನ್ನಡ ಕೋಟೆಗಳನ್ನು ರಕ್ಷಿಸುವ ಹೊಣೆ ಇಂದಿನವರ ಮೇಲಿದೆಯಲ್ಲವೆ?

**ಕುಂದರನಾಡಿನಲ್ಲಿ ಶಿಕ್ಷಣ ಸೇವೆ**

ಕುಂದರನಾಡಿನ ಜನ ಜಾಧವರನ್ನು ಇವತ್ತಿಗೂ ಗೌರವದಿಂದ ನೆನೆಯುತ್ತಾರೆ. ಅವರ ಜೊತೆಗೆ ಕೆಲಸ ಮಾಡಿದ ಅನೇಕರು ಅಂಕಲಗಿ-ಸುಲಧಾಳದಲ್ಲಿದ್ದಾರೆ. 'ನಮ್ಮ ಭಾಗದಲ್ಲಿ ಮೊದಲಿಗೆ ಪ್ರೌಢಶಿಕ್ಷಣ ಸಂಸ್ಥಾ ಹುಟ್ಟಲಿಕೆ ರಾಮ ಜಾಧವರೇ ಕಾರಣರು' ಎಂದು ಅಭಿಮಾನದಿಂದ ಹೇಳುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ ಈ ಕುಂದರನಾಡು ಬಲು ವಿಶಿಷ್ಟವಾದುದು. ತುಂಬ ಫಲವತ್ತಾದ ಭೂಮಿ, ತಂಬಾಕು, ಕಬ್ಬು ಬೆಳೆಗೆ ಹೆಸರಾದುದು. ಕುಂದಣ ಅಂದರೆ ಬಂಗಾರು, ಬಂಗಾರು ಬೆಳೆಯುವ ನಾಡು ಎಂದು ಕೆಲವರು ಕುಂದರನಾಡು ಹೆಸರಿನ ಅನ್ವಯ ಔಚಿತ್ಯವನ್ನು ಬಣ್ಣಿಸುತ್ತಾರೆ. ಇಂದು ಈ ನಾಡು ಬೆಳಗಾವಿ, ಹುಕ್ಕೇರಿ, ಗೋಕಾಕ ತಾಲೂಕುಗಳಲ್ಲಿ ಹಂಚಿಹೋಗಿದೆ. ಕುಂದರನಾಡೆಂಬುದು ಸುಮಾರು ೫೦-೭೦ ಹಳ್ಳಿಗಳನ್ನೊಳಗೊಂಡ ಪ್ರದೇಶ. ಒಂದು ಕಾಲದಲ್ಲಿ ಇದು ಗುಡ್ಡಬೆಟ್ಟಗಳ ನಾಡು. ಬೇಡ-ನಾಯಕ ಜನಾಂಗದ ನಲೆಬೀಡಾಗಿತ್ತು. ರಟ್ಟರ ಕಾಲದಲ್ಲಿ (೧೧ನೇ ಶತಮಾನ) ಈ ನಾಡಿನ ಕುಂದರಗಿ ಎಂಬ ಊರು ಆಡಳಿತ ಕೇಂದ್ರವಾಗಿತ್ತೆಂದು. ಹದಿನೆಂಟನೆಯ ಶತಮಾನದಲ್ಲಿ ಅಂಕಲಗಿಯ ಆರಾಧ್ಯದೈವ ಅಡವಿಸಿದ್ದೇಶ್ವರರು ಕುಂದರಗಿಯಲ್ಲಿಯ ಹುಣಸೆಮರದ ಪೊಟರೆಯಲ್ಲಿಯೇ ತಪಸ್ಸು ಮಾಡಿದ್ದಾರೆಂದು ರಾಯನಗೌಡ ಪಾಟೀಲ ಹೇಳುತ್ತಾರೆ. (ಇವರು ಕುಂದರನಾಡಿನ ಚರಿತ್ರೆ ಬರೆಯಲು ದಾಖಲೆಗಳನ್ನು ಸಂಗ್ರಹಿಸುತ್ತಿದ್ದಾರೆ. ಅಂಕಲಗಿಯ ಎಸ್.ಎ. ಹೈಸ್ಕೂಲಿನಲ್ಲಿ ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.) ಕುಂದರಗಿಗೆ ಇರುವ ಈ ಹಿನ್ನೆಲೆ ಗಮನಿಸಿದಾಗ ಕುಂದರನಾಡೆಂಬುದು ಈ ಊರಿನಿಂದಲೇ ಬಂದಿರಬೇಕೆನಿಸುತ್ತದೆ. ೧೯೫೭ರವರೆಗೆ ಈ ನಾಡಿನಲ್ಲಿ ಒಂದೂ ಹೈಲ ಇರಲಿಲ್ಲ. ಅಂಕಲಗಿ-ಸುಲಧಾಳ, ಪಾಶ್ಚಾಪೂರ-ಅಕ್ಕತಂಗೇರಹಾಳ, ಕುಂದರಗಿಯ ವಿದ್ಯಾರ್ಥಿಗಳು ಹೈಸ್ಕೂಲಿಗೆ ಹೋಗಬೇಕೆಂದರೆ ಗೋಕಾಕ ಇಲ್ಲವೆ ಬೆಳಗಾವಿಗೆ ಹೋಗಬೇಕು. ಜಮೀನ್ದಾರರು ಇರುವ ಈ ಫಲವತ್ತಾದ ಭೂಮಿಯಲ್ಲಿ ಅಕ್ಷರ ಬೆಳೆಗೆ ಮಾತ್ರ ಬರಗಾಲವಿತ್ತು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮತ್ತು ಎಣ್ಣೆ ಉದ್ಯಮಿಯಾಗಿದ್ದ ಶ್ರೀಶೈಲಪ್ಪ ಕಾಕತಿಕರ ಅವರು ಕನ್ನಡ ಶಾಲೆಗಳನ್ನು ತೆರೆದು ಪ್ರಾಥಮಿಕ ಶಿಕ್ಷಣಕ್ಕೆ ಅಡಿಪಾಯ ಹಾಕಿದ್ದರು. ಅದಾದ ಮೇಲೆ ಶಿಕ್ಷಣ

ರಂಗದಲ್ಲಿ ಹೆಚ್ಚಿನ ಸಾಧನೆ ಆಗಿರಲಿಲ್ಲ. ಅಂತಹ ಸಾಧನೆಗಾಗಿ ರಾಮ ಜಾಧವ ಎಂಬ ತಂಬಾಕು ಇನ್ಸಪೆಕ್ಟರ್ ಅಂಕಲಗಿಗೆ ಬರಬೇಕಾಯಿತು.

ಸ್ವಾತಂತ್ರ್ಯ ಹೋರಾಟಗಾರ ವೆಂಕಣ್ಣ ಕರಗುಪ್ಪಿಕರ (ವಯಸ್ಸು ೯೧. ವಾಸ್ತವ್ಯ ಬೆಳಗಾವಿ) ಹೇಳುವಂತೆ, 'ಜಾಧವ ಸಾಹೇಬ ಇರಲಿಲ್ಲಂದ್ರ ಕುಂದರನಾಡ ಜನತಾ ಶಿಕ್ಷಣ ಸಂಸ್ಥಾ ಆಗತಿರಲಿಲ್ಲ. ಅದು ಅವರಿಂದಲೇ ಆಯಿತು. ಅಂಕಲಗಿ-ಸುಲಧಾಳ ಭಾಗದಾಗ ಜಮೀನ್ದಾರರು ಇದ್ರು, ಅವರು ಬರಿ ಮಾತ ಹೇಳತಿದ್ರು. ಇಂಥಾ ಕೆಲಸ ಮಾಡೂದು ಅವರಿಗೆ ಹೊಳೆದಿರಲಿಲ್ಲ. ಜಾಧವಸಾಹೇಬ ಅವರ ಮನ ಒಲಿಸಿದರು. ಜಾಧವರು ತಂಬಾಕ ಬೆಳಿಯೋ ಜಮೀನಿನ ಲೆಕ್ಕಾ ಇಡತಿದ್ರು, ಯಾವ್ಯಾವ ರೈತ ಎಷ್ಟ ಬೆಳೀತಾನು? ಅದಕ ಟ್ಯಾಕ್ಸ್ ಎಷ್ಟು ಅಂತ ಸರ್ವೆ ಮಾಡತಿದ್ರು, ಟ್ಯಾಕ್ಸ್ ಹಾಕೂದು ಇವರ ಕೈಯಾಗ ಇರೂದರಿಂದ, ತಂಬಾಕ ಬೆಳಿಯೋ ರೈತರು, ವ್ಯಾಪಾರಸ್ಥರು ಇವರ ಮಾತ ಕೇಳತಿದ್ರು. ಇವರಿಗೆ ಜನರ ಕೂಡಸೋ ಶಕ್ತಿಯೂ ಇತ್ತು. ಇವರಿಂದ 'ಕುಂದರನಾಡ ಜನತಾ ಶಿಕ್ಷಣ ಸಂಸ್ಥಾ' ಹುಟಹೋತು' ವೆಂಕಣ್ಣ ಕರಗುಪ್ಪಿಕರ ಅವರು ಜಾಧವರ ಜೊತೆಗೆ ಕೆಲಸ ಮಾಡಿದವರು. ಸ್ಮರಣ ಶಕ್ತಿ ಕಡಿಮೆಯಾಗಿದ್ದರಿಂದ ಇಷ್ಟನ್ನೇ ಹೇಳಿ 'ನೆನಪಾಗ್ತಾ ಇಲ್ಲ' ಎನ್ನುತ್ತ, ತಮ್ಮ ವಯೋಮಾನದ ಪರಿಣಾಮದಿಂದ ಅಸಹಾಯಕತೆ ವ್ಯಕ್ತಪಡಿಸಿದರು.

ಅಂದು ಕುಂದರನಾಡಿನಲ್ಲಿ ರಾಮ ಜಾಧವರು ಪ್ರಾರಂಭಿಸಿದ್ದ ಪ್ರೌಢಶಾಲೆ ಶಿಕ್ಷಣ ಅಭಿಯಾನದಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಸುಲಧಾಳದ ಬಾಳಗೌಡ ಬಸವಣ್ಣೆಪ್ಪ ಪಾಟೀಲ ಅವರು ಇಂದು ಕುಂದರನಾಡ ಜನತಾ ಶಿಕ್ಷಣ ಸಂಸ್ಥೆಯ ಪ್ರೆಸಿಡೆಂಟ್‌ರಾಗಿದ್ದಾರೆ. ಅವರ ಮಾತಿನಲ್ಲಿಯೇ ರಾಮ ಜಾಧವರ ಪರಿಚಯ ಮಾಡಿಕೊಳ್ಳೋಣ:

'ನಮ್ಮ ಭಾಗವಾಗ ರಾಮ ಜಾಧವ ಅಂದ್ರ ಭಾಳ ಮಂದಿಗೆ ಗೊತ್ತಾಗೂದಿಲ್ಲ. 'ತಂಬಾಕ ಸಾಹೇಬ' ಅಂದ್ರ ಗೊತ್ತಾಗತದ. ಸಾಹೇಬ ಇದ್ರೂ ಸಾಹೇಬಕಿ ಇರಲಿಲ್ಲ. ಖಾದಿ ತೊಡತಿದ್ರು. ಖಾದಿ ಪಾಯಿಜಾಮ, ಖಾದಿ ಶರ್ಟ್, ಕೈಯಾಗೊಂದು ದುಂಡ ಬೆತ್ತ, ಎಲ್ಲರ ಜತಿ ನಗ ನಗತಾ ಬೆರೆಯುವ ಅಪರೂಪದ ಮನುಷ್ಯಾ, ನಮ್ಮ ಏರಿಯಾ ತಂಬಾಕ ಬೆಳಿಯೋದಕ್ಕೆ ಬಾಳ ಪ್ರಸಿದ್ಧ. ರೈತರು ಬೆಳಿಯೋ ತಂಬಾಕಿನ ವಹಿವಾಟ-ಮಾರಾಟ ನೋಡಿಕೊಳ್ಳುವುದಕ್ಕೆ ಅಂಕಲಗಿಯೊಳಗ ಎಕ್ಸಾಯಿಜ್ ಆಫೀಸಿತ್ತು. ೧೯೫೪ರ ಸುಮಾರು ಜಾಧವರು ಅಂಕಲಗಿಗಿ ಬಂದರು. ಕೇಂದ್ರ ಸರ್ಕಾರದ ನೌಕರರು. ಒಳ್ಳೆ ಸಂಬಳಾ, ಉಂಡುಟ್ಟು ಮನಿಮಂದಿ ಕೂಡ ಆರಾಮಾಗಿ ಇರಬೇಕಾಗಿತ್ತು. ಆದರ ಇವರು ಪಾಂಗಿರತಿರಲಿಲ್ಲ. ಊರ ಹಿರೇರಿಗೆ ಭೇಟಿಯಾಗೋದು, ಜನರ ಜತಿ ಬೆರಿಯೂದು. ಸುಖಾ ದುಖಾ ಕೇಳೂದು, ಊರ ಸುಧಾರಣೆ ಸಲುವಾಗಿ ಚರ್ಚಾ ಮಾಡೋದು ಅವರ ದಿನಚರಿಯಾಗಿತ್ತು. ಈ ಗುಣದಿಂದಾಗಿ ವರುಷ ಒಪತ್ತಿನಾಗ ಅವರು ಅಂಕಲಗಿಯ ಊರವರಾಗಿ ಬಿಟ್ಟರು. ಕನ್ನಡವಾಗ ದೊಡ್ಡ ವಿದ್ವಾನರಾಗಿದ್ದು, ನಂ ಬಸವರಾಜ ಕಟೀಮನಿ ಜತಿ ಭಾಳ ಗೆಳೆತನ, ಕುಂದರನಾಡಿನ ಜನರಿಗಾಗಿ ಹೈಸ್ಕೂಲು ತಗೀಬೇಕಂತ ಮೊದಲ ವಿಚಾರ ಬಿತ್ತಿದವರ ಇವರು. ಇದರ ಸಲುವಾಗಿ ಊರ ಹಿರೇರನ್ನು ಕೂಡಿಸಿದ್ರು,

ಮನವೊಲಿಸಿದರು. ಅಡವಿಸಿದ್ದೇಶ್ವರ ಮಠದಾಗ ಮೀಟಿಂಗ್ ತಗೋತಿದ್ರು. ಆಗ ನಾ ಬೆಳಗಾವಿ ಲಿಂಗರಾಜ ಕಾಲೇಜಿನಾಗ ಇಂಟರ್ ಓದಿದ ಹುಡುಗ, ನಮ್ಮ ಕಾಕಾ ದೊಡ್ಡಪ್ಪ ಎಲ್ಲ ಈ ಸಂಘಟನಾದಾಗ ಇದ್ರು. ಲೆಕ್ಕಾ ಪತ್ರಾ, ಬರಿಯೋದಕ್ಕೆ ಸಹಾಯ ಆಗತದಂತ ನನಗ ತಗೊಂಡು, ಹಣಾ ಕೂಡಸೋದಕ್ಕೆ ಊರೂರು ತಿರುಗಾಡಿದ್ರು, ನಿಪ್ಪಾಣಿಯ ತಂಬಾಕು ವ್ಯಾಪಾರಸ್ಥರಾದ ಬಾಗೇವಾಡಿ, ಕುರಬೆಟ್ಟ, ದೇವಚಂದ್ರ, ವೇಣಿಚಂದ ಶಹಾ ಮುಂತಾದವರಿಂದ ದೇಣಿಗೆ ಸಂಗ್ರಹ ಮಾಡಿದ್ರು, ಜಾಧವರು ತಂಬಾಕ ಸಾಹೇಬರಾದ್ದರಿಂದ ತಂಬಾಕು ಬೆಳೆಗಾರರು ವ್ಯಾಪಾರಸ್ಥರು ಉದಾರವಾಗಿ ಹಣ ಕೂಡಿಸಿ ಕೊಟ್ಟರು. ಇದರ ಫಲವಾಗಿ ಜೂನ್ ೧೯೫೮ರೊಳಗ 'ಕುಂದರನಾಡು ಜನತಾ ಶಿಕ್ಷಣ ಸಂಘ' ಅಂಕಲಗಿಯೊಳಗ ಸ್ಥಾಪನಾ ಆಯ್ತು. ದೇ.ನಿ. ಕುತ್ತೆ, ಬ.ಶಂ. ಹರದಿ, ಬಸನಗೌಡ ವೀ. ಪಾಟೀಲ(ಲಗಮೇಶ್ವರ) ನಿಂಗಪ್ಪಣ್ಣ ಕರಿನಿಂಗಣ್ಣವರ, ಬಸವರಾಜ ಕಟ್ಟಿಮನಿ, ಬಿ.ಬ. ಗೋವನಕೊಪ್ಪ ಮಾಸ್ತರ, ಬಾಳಗೌಡ ಬ. ಪಾಟೀಲ-ಇವರೆಲ್ಲ ಸಂಘದ ಸಂಸ್ಥಾಪಕ ಸದಸ್ಯರು. ಜಾಧವರೇ ಸಂಘದ ಹಿಂದಿನ ಶಕ್ತಿ. ಅವರ ಮಾತಿನಲ್ಲಿ ಊರ ಹಿರೇರಿಗೆ ದೊಡ್ಡ ವಿಶ್ವಾಸ ಇತ್ತು. ಜಾಧವ ಸಾಹೇಬರು ವಿಚಾರವಾದಿ ಸ್ವಚ್ಛ ಮನಸ್ಸು, ವಿಶಾಲಹೃದಯ, ಸ್ವಷ್ಟ ಮಾತು, ನಿಷ್ಠುರವಾದಿ. ತಾವು, ಮಾಡು ಕೆಲಸದಾಗ ಊರ ಹಿತ, ಜನರ ಹಿತ ಅಡಗಿದೆ ಎಂದು ಪಟಾಯಿಸುವಂಗ ಹೇಳತಿದ್ರು, ಈ ನಮೂನಿಯ ಓಡಾಟದಿಂದ ಅವರು ಅಂಕಲಗಿ ಸುತ್ತಮುತ್ತಲು ಊರ ಜನರ ಜೀವನದಾಗ ಅನ್ಯೋನ್ಯರಾಗಿ ಬೆರೆತು ಹೋದರು. ಅವರು ನಮ್ಮೂರ ಬಿಟ್ಟು ಹೋಗಿ ಸುಮಾರು ಐವತ್ತು ವರುಷ ಆಗಿರಬೇಕು. ಆದರೂ ನಮ್ಮ ಜನ ಇನ್ನೂ ತನಕ ನೆನಸ್ತಾರ. ಅವರು ಅವತ್ತು ಹುಟ್ಟು ಹಾಕಿದ ಸಂಘ ಇವತ್ತು ಹೆಮ್ಮರವಾಗಿ ಬೆಳೆದದ, ಅಂಕಲಗಿಯಲ್ಲಿ ಇದೇ ಸಂಘದ ಉರ್ದು ಮಾಧ್ಯಮ, ಇಂಗ್ಲಿಷ್ ಮಾಧ್ಯಮ ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜು, ಡಿಗ್ರಿ ಕಾಲೇಜುಗಳು ತಲೆಯೆತ್ತಿವೆ. ನಾಲ್ಕುವರೆಯಿಂದ ಐದು ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಸುಲಧಾಳ, ಅಕ್ಕತಂಗೇರಹಾಳದಲ್ಲಿ ಇದೇ ಸಂಘದ ಹೈಸ್ಕೂಲುಗಳಿವೆ. ಜಾಧವ ಸಾಹೇಬರು ಮಾಡಿದ ಕೆಲಸ ಮರಿಯುವಂತಹದ್ದಲ್ಲ. ಇಲ್ಲಿಂದ ವರ್ಗ ಅಗಿ ಬ್ಯಾರೆ ಕಡೆಗೆ ಹೋದರು. ಅಲ್ಲೂ ಸುಧಾರಣಾ ಮಾಡಿದ್ರು. ಎಲ್ಲೆ ಹೋದರೂ ಸುಧಾರಣೆ ಮಾಡು ಮನುಷ್ಯಾ'.

ಬಾಳಗೌಡರಿಗೆ ಈಗ ೭೩ ವಯಸ್ಸು. ಅನೇಕ ವರ್ಷ ಗೋಕಾಕ ಟಿ.ಡಿ.ಬಿ. ಅಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಬಸವರಾಜ ಕಟೀಮನಿಯವರ ಆಪದ್ಬಾಂಧವರು. ಮೈತುಂಬ ಖಾದಿ, ಮನಸ್ಸಿನ ತುಂಬ ಖಾದಿ. ಇವತ್ತಿಗೂ ಅದೇ ಅವರ ಜೀವನ ಹಾದಿಯಾಗಿದೆ.

ಸಿ.ಬಿ. ಪಾಟೀಲ (ಚೆನಗೌಡ ಬಸನಗೌಡ ಪಾಟೀಲ) ವಯಸ್ಸು ೭೦-೭೧ ಸಂಸ್ಥೆಯ ಈಗಿನ ಅಧ್ಯಕ್ಷರು. ರಾಮ ಜಾಧವರ ಕಾರ್ಯವೈಖರಿಯ ಕೆಲವು ಘಟನೆಗಳು ಇನ್ನೂ ಇವರ ನೆನಪಿನಲ್ಲಿ ತಾಜಾ ಇವೆ. ಚೆನಗೌಡರ ಮದುವೆ ಜಾಧವರ ಮಧ್ಯಸ್ಥಿಕೆಯಲ್ಲಿಯೇ ನಿಶ್ಚಯವಾಯಿತಂತೆ. ನಿಪ್ಪಾಣಿಯ ಸದಾಶಿವ ಶಂಕರ ಪಾಟೀಲ ಚವಲಗೆ ದೊಡ್ಡ ಜಮೀನದಾರರು. ಜಾಧವರ ಆತ್ಮೀಯರು. ಕುಂದರನಾಡ ಶಿಕ್ಷಣ ಸಂಸ್ಥೆ ಹುಟ್ಟು ಹಾಕುವಾಗ ಚೆನಗೌಡರ ತಂದೆ ಬಸನಗೌಡರು(ಲಗಮೇಶ್ವರ) ಜಾಧವರ ಬಲಗೈಯಾಗಿ ಶ್ರಮಿಸಿದ್ದರು. ಎರಡೂ ಕಡೆಯ ಇಂಥ ಆತ್ಮೀಯ

ಸಂಬಂಧದಿಂದಾಗಿಯೇ ಚೆನಗೌಡರ ಮದುವೆಯ ನಿಶ್ಚಯದಲ್ಲಿ ಜಾಧವರು ಮಹತ್ವದ ಪಾತ್ರವಹಿಸಿದ್ದರು. ೧೯೫೫ರಲ್ಲಿ ಮದುವೆ ವಿಜೃಂಭಣೆಯಿಂದ ಜರುಗಿತು: ಚೆನಗೌಡರು ಹೇಳುವಂತೆ 'ಮದವಿಗಂತ ನಿಬಣದ ಜನರನ್ನು ಹೊತಗೊಂಡು ನಿಪ್ಪಾಣಿಂದ ಹನ್ನೊಂದು ಬಸ್ಸ ಅಂಕಲಗಿಗೆ ಬಂದಿದ್ದವು. ಮದವಿ ಚೆನ್ನಾಗಿ ಆಯಿತು. ಆದರ ಜಾಧವ (ತಂಬಾಕ ಸಾಹೇಬ). ಕಲ್ಯಾಣಶೆಟ್ಟಿ(ಪಿ.ಎಸ್.ಐ) ಮತ್ತು ಬಸವರಾಜ ಕಟ್ಟಿಮನಿ (ಸಾಹಿತಿ) ಈ ಮೂವರು ಊಟ ಮಾಡಲಿಲ್ಲ. ನಮ್ಮ ತಂದೆಯವರು, ಮಾವನವರು 'ಕಾರಣ ಏನು' ಅಂತ ಕೇಳಿದಾಗ, ಈ ಮೂವರೂ ಶಿಕ್ಷಣ ಸಂಸ್ಥಾಕ ದೇಣಿಗೆ ಕೊಟ್ಟರ ಊಟ ಮಾಡತೇವಿ ಇಲ್ಲಾಂದರ ಇಲ್ಲಾ' ಎಂದು ಹಟ ಹಿಡಿದರು. ಆಗ ನಮ್ಮಿಂದ ಐದು ಸಾವಿರ ರೂಪಾಯಿ ದೇಣಿಗೆ ತೆಗೆದುಕೊಂಡೆ ಅವರು ಊಟ ಮಾಡಿದರು.' ಮುಂದೆ ಇತರರ ಮದುವೆ ಶುಭ ಕಾರ್ಯಗಳಲ್ಲಿ ಕೂಡ ಇದೇ ತಂತ್ರವನ್ನು. ಉಪಯೋಗಿಸಿ ಸಂಸ್ಥೆಗೆ ದೊಡ್ಡ ಪ್ರಮಾಣದಲ್ಲಿ ದೇಣಿಗೆ ಕೂಡಿಸಿದರು.

ನಿಪ್ಪಾಣಿಯ ದೊಡ್ಡ ವ್ಯಾಪಾರಸ್ಥರಾದ ಬಾಗೇವಾಡಿ ಅವರು ದೊಡ್ಡ ಮೊತ್ತದ ತಂಬಾಕ ಟ್ಯಾಕ್ಸ್ ಕೊಡಬೇಕಾಗಿತ್ತು. ಇದನ್ನು ಒಂದು ಅವಕಾಶವೆಂದು ಭಾವಿಸಿ ಜಾಧವ ಸಾಹೇಬರು 'ಶಿಕ್ಷಣ ಸಂಸ್ಥೆಗೆ ದೇಣಿಗೆ ಕೊಡುವುದಾದರೆ ತೆರಿಗೆಯಲ್ಲಿ ರಿಯಾಯತಿ' ಎಂದು ಕಿವಿಮಾತು ಹೇಳಿದರಂತೆ. ಬಾಗೇವಾಡಿಯವರು ಇವರ ಮಾತನ್ನು ಒಪ್ಪಿ ದೇಣಿಗೆ ಕೊಟ್ಟರು. ಹೀಗೆ ಅನೇಕ ಪ್ರಕಾರ ದಾನಿಗಳನ್ನು ಹುರುದುಂಬಿಸಿ ಅವರಿಂದ ಹಣ ಕೂಡಿಸಿ 'ಕುಂದರನಾಡು ಜನತಾ ಶಿಕ್ಷಣ ಸಂಸ್ಥೆ' ಸದೃಢವಾಗಿ ತಲೆಯೆತ್ತುವಂತೆ ಈ ತಂಬಾಕು ಸಾಹೇಬರು ಶ್ರಮಿಸಿದರು. ಇವರ ಪ್ರೇರಣೆಯಿಂದ ಎಂ.ಎಲ್.ಖಡೇದ, ಲಿಗಾಡೆ, ದೇವಚಂದ ಶಹಾ ಮೊದಲಾದವರು ಈ ಸಂಸ್ಥೆಗೆ ಉದಾರವಾಗಿ ದಾನ ಮಾಡಿದರು. ಈ ಮಾಹಿತಿ ಒದಗಿಸಿದವರು ಸಿ.ಬಿ. ಪಾಟೀಲರು

ತೊಂಬತ್ತು ವರ್ಷ ವಯಸ್ಸಿನ ಬಸಲಿಂಗಪ್ಪ (ಅಪ್ಪಣ್ಣ) ಮರಲಿಂಗಣ್ಣವರ ನೆನಪಿಸಿಕೊಳ್ಳುವಂತೆ 'ತಂಬಾಕು ಸಾಹೇಬರು ಹಣ ಕೂಡಿಸಲು, ಜನರಲ್ಲಿ ಎಚ್ಚರ - ಮೂಡಿಸಲು ನಾನಾ ನಮೂನಿ ಪ್ರಯತ್ನ ಮಾಡುತ್ತಿದ್ದರು. ಆದರೆ ಹಣ ಕೈಯಲ್ಲಿ ಹಿಡಿಯುತ್ತಿರಲಿಲ್ಲ. ಕೇವಲ ಮುಂದಾಳನ, ಮಾರ್ಗದರ್ಶನ ಅಷ್ಟೇ. ಉಳಿದ ವ್ಯವಹಾರಗಳೆಲ್ಲ ಸಂಸ್ಥೆಯ ಆಡಳಿತ ಮಂಡಳಿಯಿಂದಲೇ ನಡೆಯಬೇಕು. ಸಂಸ್ಥೆಯ ಸಲುವಾಗಿ ಅತ್ಯಂತ ಪ್ರಾಮಾಣಿಕ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು.' ಪ್ರೌಢಶಾಲೆ ತೆರೆಯುವ ಹೊಸತರಲ್ಲಿ ಅನೇಕರು, 'ಇಂಗ್ಲೀಷ ಕಲಿಸಿ ಹುಡ್ಗರನ್ನ ದನಾ ಕಾಯಾಕ ಬರದಂಗ ಮಾಡತಾರ' ಎಂದು ಜನ ಟೀಕೆ ಮಾಡುತ್ತಿದ್ದರಂತೆ. ಇಂತಹ ಯಾವುದೇ ಕುಚೇಷ್ಟೆಗಳಿಗೆ ಜಾಧವರು ಸೊಪ್ಪು ಹಾಕುತ್ತಿರಲಿಲ್ಲ.

ರಾಮು ಜಾಧವರಿಗೆ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಪ್ರಗತಿಯಾಗಬೇಕೆನ್ನುವ ಹಂಬಲವಿತ್ತು. ಅದಕ್ಕಾಗಿ ತಮ್ಮ ಅಧಿಕಾರದ ವ್ಯಾಪ್ತಿಯ ಆಚೆಗೂ ಕಾರ್ಯಕಲಾಪಗಳನ್ನು ಹಮ್ಮಿಕೊಳ್ಳುತ್ತಿದ್ದರು. ೧೯೫೭ರಲ್ಲಿ ಅಕ್ಕತಂಗೇರಹಾಳ ಶಾಲೆಯ ಉದ್ಘಾಟನೆಗೆ ನಿಜಲಿಂಗಪ್ಪ ಅವರನ್ನು ಕರೆಸಿದ್ದರು. ಸಮಾರಂಭ ಅದ್ದೂರಿಯಿಂದ ಜರುಗಿತು. ಕುಂದರನಾಡ ಜನರ ಗೌರವಾರ್ಥ ನಿಜಲಿಂಗಪ್ಪನವರಿಗೆ ಬಿನ್ನವತ್ತಳೆ ಅರ್ಪಿಸಿದರು. ಕೆಲವೊಮ್ಮೆ 'ತಾನೊಬ್ಬ ಸರಕಾರಿ ಅಧಿಕಾರಿ, ಸಾರ್ವಜನಿಕ ಚಟುಟವಟಿಕೆಗಳಿಗೆ ಕೆಲವು ಮಿತಿಗಳಿರುತ್ತವೆ' ಎಂಬುದನ್ನು ಮರೆತು

ಸಾಮಾಜಿಕ ರಂಗದಲ್ಲಿ ಮುನ್ನುಗ್ಗುತ್ತಿದ್ದರು. ಇವರಿಂದ ಸ್ಫೂರ್ತಿಪಡೆದು ಕುಂದರನಾಡಿನ ಶಿಕ್ಷಣ ಸಂಸ್ಥೆಗಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದವರಲ್ಲಿ ಮುರಿಗೆಪ್ಪ ಶ್ರೇಷ್ಠಿ, ದಸ್ತಗೀರಸಾಬ ಯರಗಟ್ಟಿ, ತವನಪ್ಪ ರಾಜಮಾನೆ, ಅಡಿವೆಪ್ಪ ಡೋಣಿ, ತಮ್ಮಣ್ಣ ಬಸಪ್ಪ ಮರಲಿಂಗಣ್ಣವರ ಪ್ರಮುಖರೆನಿಸಿದ್ದಾರೆ. ಕೇವಲ ಶಿಕ್ಷಣ ಚಟುವಟಿಕೆಗಳು ಮಾತ್ರವಲ್ಲ ಸಂಪರ್ಕ ರಸ್ತೆಗಳ ನಿರ್ಮಾಣ, ಬೀದಿ ದೀಪಗಳು, ಕಾರ್ಮಿಕ ಕಲ್ಯಾಣ ಹೀಗೆ ಗ್ರಾಮ ಸುಧಾರಣೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಗ್ರಾಮಗಳ ಸರ್ವಾಂಗೀಣ ಏಳಿಗೆ ಅವರ ಕನಸಾಗಿತ್ತು.

೧೯೫೬-೫೭ರ ಸಂದರ್ಭ. ಭಾಷಾವಾರು ಪ್ರಾಂತಗಳ ರಚನೆಯ ನಿರ್ಣಯ ಕೇಂದ್ರ ಸರ್ಕಾರ ಪ್ರಕಟಿಸಿತ್ತು. ಮಹಾರಾಷ್ಟ್ರ ತನಗೆ ಬೇಕೆಂದು ನಿರೀಕ್ಷಿಸುತ್ತಿದ್ದ ಬೆಳಗಾವಿ, ನಿಪ್ಪಾಣಿ ಪ್ರದೇಶಗಳು ಕರ್ನಾಟಕದಲ್ಲಿಯೇ ಉಳಿದಿದ್ದವು. ಇದರಿಂದ ಮಹಾರಾಷ್ಟ್ರ ಸರ್ಕಾರ ಕುಪಿತಗೊಂಡು ಈ ಭಾಗದ ಗಡಿ ಪ್ರದೇಶಗಳಲ್ಲಿ ಮರಾಠಿ ಚಟುವಟಿಕೆಗಳನ್ನು ತೀವ್ರಗೊಳಿಸಿತ್ತು. ಏನೇನೋ ನೆಪ ಮುಂದೆ ಮಾಡಿ ಕನ್ನಡ ಪರಿಸರವನ್ನು ಹತ್ತಿಕ್ಕುವ, ಕನ್ನಡ ಶಾಲೆಗಳನ್ನು ಮುಚ್ಚುವ ಪ್ರಯತ್ನದಲ್ಲಿತ್ತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ರಾಮ ಜಾಧವ ಕೇಂದ್ರ ಸರಕಾರದ ಅಬಕಾರಿ ಇಲಾಖೆಯ ನೌಕರರಾಗಿ ನಿಪ್ಪಾಣಿಯಲ್ಲಿದ್ದರು. ಕನ್ನಡವನ್ನೇ ಉಸಿರಾಡಿಸುವ ಮರಾಠಿ ಮನುಷ್ಯ' ಎಂದು ಆ ಭಾಗದಲ್ಲಿ ಪ್ರಸಿದ್ಧರಾಗಿದ್ದರು. ಇವರ ಕನ್ನಡಪರ ಚಟುವಟಿಕೆಗಳಿಗೆ ಬಲಗೈ ಬಂಟರಾಗಿ ಸಹಾಯಕ್ಕೆ ನಿಂತವರೆಂದರೆ ಆರ್.ಎಸ್. ಕಲ್ಯಾಣಶೆಟ್ಟಿ, ಇವರು ಪಿ.ಎಸ್.ಐ. ಆಗಿದ್ದರು. ಬಾದಾಮಿಯವರು. ಕಾರ್ಯದಕ್ಷತೆ, ಪ್ರಾಮಾಣಿಕತೆಗೆ ಹೆಸರಾದವರು. ಕೊನೆ ಕೊನೆಗೆ ಬೆಂಗಳೂರಿನಲ್ಲಿ ಎಸ್.ಪಿ. ಆಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಬೆಂಗಳೂರಿನಲ್ಲಿಯೇ ನೆಲೆಸಿದ್ದಾರೆ. ಇವರಿಗೆ ಈಗ ೮೪ ವಯಸ್ಸು, ರಾಮ ಜಾಧವರನ್ನು ಕುರಿತು ವಿಷಯ ಸಂಗ್ರಹಿಸುವಾಗ ಇವರನ್ನೂ ಫೋನಿನಲ್ಲಿ ಸಂಪರ್ಕಿಸಿದೆ. ಅಂದು ೯-೭-೨೦೧೦. ಮಹಾರಾಷ್ಟ್ರ ಕೇಳುತ್ತಿದ್ದ ೮೪೦ ಊರುಗಳು ಕರ್ನಾಟಕದಲ್ಲಿಯೇ ಉಳಿಯಬೇಕೆಂಬ ಕರ್ನಾಟಕ ಸರ್ಕಾರದ ನಿಲುವನ್ನು ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದು ಆದೇಶ ಹೊರಡಿಸಿತ್ತು. ನಾನು ಫೋನು ಮಾಡುವಷ್ಟೊತ್ತಿಗೆ ಈ ನಿರ್ಣಯ ಪ್ರಕಟವಾಗಿ ಎರಡು ದಿನವಷ್ಟೇ ಆಗಿತ್ತು. ಈ ಬಗ್ಗೆ ಕಲ್ಯಾಣಶೆಟ್ಟರು ತುಂಬ ಖುಷಿಯಲ್ಲಿದ್ದರು. ಫೋನಿನಲ್ಲಿ 'ಸುಪ್ರಿಂ ಕೋರ್ಟ್ ನಿಲುವು ಕೇಳಿ ನಾನು ಅತ್ಯಂತ ಸಂತೋಷದಲ್ಲಿದ್ದೇನೆ. ಆದರೇನು ನನ್ನ ಸಂತೋಷ ಹಂಚಿಕೊಳ್ಳಲು ನನ್ನ ಜೊತೆಗಿದ್ದ ಅಧಿಕಾರಿಗಳು, ನನಗೆ ಗೈಡ್ ಆಗಿದ್ದ ರಾಮ ಜಾಧವ ಅವರು ಇಲ್ಲ ಎಂದು ನೋವಾಗುತ್ತದೆ' ಎಂದು ದೇಶಿಶೈಲಿಯಲ್ಲಿ ಮಾತಿಗೆ ಸುರು ಮಾಡಿದರು. 'ಅಣ್ಣಾ ನೀವು ನಂಬ್ತಿರೋ ಇಲ್ಲೋ ಅವತ್ತ ನಮ್ಮ ಕೆಲಸಾ ನಾವು ಸರಿಯಾಗಿ ಮಾಡದೀವಿ. ನಮ್ಮ ಕೈಕೆಳಗಿನ ಪೊಲೀಸರೂ ಭಾಳ ಪ್ರಾಮಾಣಿಕರಾಗಿ ದುಡಿದರು. ಅಂತ್ಹೇಳಿ ಮರಾಠಿ ಪುಂಡಾಟಿಕೆ ಕಡಿಮಿ ಆತು. ಲೈಸನ್ಸ್ ಇಲ್ಲದ ರಿವಾಲ್ವರ್ ಇಟಕೊಂಡು, ಕಳ್ಳ ದಂಧೆ ಮಾಡುತ್ತಿದ್ದ ಪ್ರಭಾವಶಾಲಿ ವ್ಯಕ್ತಿಗಳಿದ್ರು. ಅವರೆಲ್ಲ ಮಹಾರಾಷ್ಟ್ರ ಮಂತ್ರಿಗಳ ಸ್ನೇಹಿತರಾಗಿದ್ರು, ಅವರನ್ನೆಲ್ಲ ನಾವು ಕಾನೂನಿನ ಪ್ರಕಾರ ದಂಡಿಸಿದಿವಿ. ನಾವೇನು ಚಮತ್ಕಾರ ಮಾಡಲಿಲ್ಲ. ಅಧಿಕಾರ ಸರಿಯಾಗಿ ಉಪಯೋಗ ಮಾಡಿದೀವಿ. ಯಾವುದೇ ಪಕ್ಷಪಾತ ಮಾಡಲಿಲ್ಲ. ಆಶೆ-ಆಮಿಷಗಳಿಗೆ ಒಳಗಾಗಲಿಲ್ಲ. ತಪ್ಪು ಮಾಡಿದವರನ್ನು ಬಿಡಲಿಲ್ಲ. ಈ ವಿಷಯದಾಗ ರಾಮ ಜಾಧವರು ನನಗೆ ಗೈಡ್ ಆಗಿದ್ರು. ಸುದೈವಕ್ಕೆ ನಮ್ಮ ಮ್ಯಾಲಿನ ಅಧಿಕಾರಿಗಳು ನಮಗೆ

ಪ್ರೋತ್ಸಾಹ ಮಾಡತಿದ್ರು, ಕೈಕೆಳಗಿನವರು ಸಹಾಯ ಮಾಡತಿದ್ರು. ಆಗ ಲೂಯಿಸ್ ಎಸ್.ಪಿ. ಇದ್ರು, ಶೇಷಾದ್ರಿ ಎಂಬ ಡಿ.ಸಿ. ಇದ್ರು, ನಮಗೆ ಭಾಳ ಬೆಂಬಲಾ ಕೊಟ್ರು. ಅಂತ್ವೇಳಿ ಮರಾಠಿ ಉಪಟಳ ಕಡಿಮಿ ಆತು......ಅಣ್ಣಾ ಖರೇ ಹೇಳತೀನಿ ಈ ಬಾರ್ಡರ್ ಡಿಸ್ಪುಟ್‌ದಾಗ ಸಮಯ ಸಾಧಕರ ಸ್ಮಗಲಿಂಗ್ ಬಂದಾತು.' ಎಂದು ಭಾವುಕರಾಗಿ ಹಿಂದಿನ ದಿನಗಳನ್ನು ಸ್ಮರಿಸಿಕೊಂಡರು. ಮಾತು ಮುಂದುವರಿಸಿ "ರಾಮ ಜಾಧವ ಮತ್ತು ನಮ್ಮ ಮನಿ ನಡು ಬರಿ ಒಂದು ಗೋಡೆ ಅಡ್ಡ ಇತ್ತು. ಭಾಳ ಓದಿಕೊಂಡಿದ್ದ ಮನುಷ್ಯಾ ಕುಂತರ, ನಿಂತರ ಕನ್ನಡದ ಗಂಟಿ ಬಾರಸತಿದ್ರು. ರಾಮ ಜಾಧವ ಇದ್ದಲ್ಲಿ ಕಲ್ಯಾಣಶೆಟ್ಟಿ, ಕಲ್ಯಾಣಶೆಟ್ಟಿ ಇದ್ದಲ್ಲಿ ರಾಮ ಜಾಧವ. ಅಂಥಾ ಸಂಬಂಧ ನಮ್ಮದು.

ನಿಪ್ಪಾಣಿಯೊಳಗ ಐ.ಬಿ. ಹಿಂದಿನ ಜಾಗಾದಾಗ ಕನ್ನಡ ಸಾಲಿ ಕಟ್ಟಾಕ ನಾನು ಜಾಧವರು ಕಲ್ಲು ಮಣ್ಣು ಹೊತ್ತಿದ್ದೀವಿ. ನಾವು ಮಾಡೂದು ನೋಡಿ ಬಾಗೇವಾಡಿ ಅಣ್ಣಾ, ಕೋರಿವಾಲೆ ಅಣ್ಣಾ, ಕುರಬೇಟ ಇವರೆಲ್ಲ ನಮ್ಮ ಜೋಡಿ ಕೈ ಜೋಡಿಸಿದರು. ಕನ್ನಡ ಸಾಲಿ ತಯಾರಾತು. ಆಮ್ಯಾಲ ಕಾಲೇಜಿಗೆ ಪ್ರಯತ್ನ ಮಾಡಿದಿವಿ.....' ಹೀಗೆ ಕಲ್ಯಾಣಶೆಟ್ಟರು ರಾಮ ಜಾಧವರ ಜೊತೆಯಲ್ಲಿ ಮಾಡಿದ ಕನ್ನಡದ ಕೆಲಸಗಳನ್ನು ಸ್ಮರಿಸುತ್ತಾರೆ. ಅಧಿಕಾರದಲ್ಲಿದ್ದವರು ಪ್ರಾಮಾಣಿಕವಾಗಿ ಕಾನೂನು ವ್ಯವಸ್ಥೆ ಮಾಡಿದರೆ, ಸರಕಾರದ ನಿಯಮಗಳನ್ನು ಪಾಲಿಸಿದರೆ ಕನ್ನಡಕ್ಕೆ ಯಾವುದೇ ಅಡ್ಡಿ ಆತಂಕಗಳು ಬರಲಾರವು ಎಂದು ತಮ್ಮ ಅನುಭವದ ಮಾತುಗಳನ್ನಾಡಿದರು. ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ನಿಲುವು ರಾಮ ಜಾಧವರು ಕೇಳಬೇಕಿತ್ತು. ಅವರಿದ್ದಿದ್ದರೆ ಕುಣಿದಾಡುತ್ತಿದ್ದರು. ಅದನ್ನು ನೋಡಿ ತಮಗೆ ಇನ್ನಷ್ಟು ಸಂತೋಷವಾಗುತ್ತಿತ್ತೆಂದು ಗದ್ಗದಿತ ಕಂಠದಿಂದ ನುಡಿದರು.

ಮಹಾಜನ ವರದಿ ಜಾರಿಯಾಗಬೇಕೆಂದು ಜಾಧವರು, ಅಧಿಕಾರದ ಸೂತ್ರ ಹಿಡಿದವರಿಗೆ ದುಂಬಾಲು ಬಿದ್ದದ್ದೂ ಉಂಟು. ಪಿ.ವಿ. ನರಸಿಂಹರಾವ ಅವರು ಪ್ರಧಾನಿಯಾಗಿದ್ದಾಗ ಮಹಾಜನ ವರದಿಗಾಗಿ ಒತ್ತಾಯಿಸಿದರು. ಅದು ಕಾರ್ಯಗತವಾಗಲೇಬೇಕೆಂದು ಮನವಿ ಮಾಡಿಕೊಂಡರು. ಆಂಧ್ರಾಭಿಮಾನಿ ಪ್ರಧಾನಿಗಳು ಕರ್ನಾಟಕದಲ್ಲಿಯೇ ಬೆಳಗಾವಿ ಇರಬೇಕೆಂದು ತೀರ್ಪು ಕೊಡುವಲ್ಲಿ ತಮ್ಮ ನೈತಿಕ ಹಕ್ಕನ್ನೂ ಕಳೆದುಕೊಂಡಿದ್ದರು. ಮೈಸೂರು ಭಾಗದ ಧುರೀಣರಿಗೆ ಬೆಳಗಾವಿಯ ಗಡಿ ತಂಟೆಯಲ್ಲಿ ಆಸಕ್ತಿಯಿಲ್ಲ. ಉತ್ತರ ಕರ್ನಾಟಕದವರಿಗೆ ಈ ಬಗ್ಗೆ ಅಭಿಮಾನವಿಲ್ಲ. ಹೀಗಾದಾಗ ಬೆಳಗಾವಿ ನಮ್ಮದಾಗಿರಲು ಸಾಧ್ಯವೇ? ಎಂದು ಜಾಧವರು ಯೋಚಿಸುತ್ತಿದ್ದರು. ಒಮ್ಮೆ ಮಹಾರಾಷ್ಟ್ರದ ಮುಖ್ಯಮಂತ್ರಿ ಯಶವಂತರಾವ ಚವ್ಹಾಣರನ್ನು ತರಾಟೆಗೆ ತೆಗೆದುಕೊಂಡಿದ್ದರು. ಗಡಿವಿವಾದದಲ್ಲಿ ರಾಜಕಾರಣಿಗಳು, ದಿಟ್ಟ ನಿಲುವು ತಾಳದ ಬಗ್ಗೆ ಅವರಿಗೆ ಅಸಮಾಧಾನವಿತ್ತು. ಪ್ರಬಲ ರಾಜಕೀಯ ಇಚ್ಛಾಶಕ್ತಿ ರೂಪುಗೊಳ್ಳದ ಹೊರತು ನಾಡಿನ ನೆಲ-ಜಲ-ಸಂಸ್ಕೃತಿಗಳಿಗೆ ನ್ಯಾಯ ಸಿಗುವುದಿಲ್ಲವೆಂದು ಹಳಹಳಿಸುತ್ತಿದ್ದರು. ಅವರ ಮನಸ್ಸಿನಲ್ಲಿ ಕನ್ನಡದ ಕಳಕಳಿ ತುಂಬಿಕೊಂಡಿತ್ತು. ಅದರ ಅಭಿವೃದ್ಧಿ ಅವಕುಂಠನವಾದರೆ ಅವರ ಮನಸ್ಸು ಕುದಿಯುತ್ತಿತ್ತು.

ಉತ್ತರ ಕರ್ನಾಟಕವನ್ನು ಬೆಳೆಸದೆ ಕರ್ನಾಟಕವನ್ನು ಗಳಿಸಲು ಶಕ್ಯವೇ? ಎಂಬ ಪ್ರಶ್ನೆಯನ್ನು ಕೇಳುತ್ತಿದ್ದರು. ಕನ್ನಡದ ಪ್ರಶ್ನೆ ಬಂದಾಗ ಅವಮಾನ ಲೆಕ್ಕಿಸುತ್ತಿರಲಿಲ್ಲ. ಪ್ರತಿಫಲ ಬಯಸುತ್ತಿರಲಿಲ್ಲ. ಕೆಲಸಕ್ಕೆ ಧುಮುಕುತ್ತಿದ್ದರು. ಕನ್ನಡದ ಹಿತವಿರುವ ಕೆಲಸಗಳನ್ನು ಮೈಮೇಲೆ ಹಾಕಿಕೊಂಡು ಅವುಗಳನ್ನು ಇಡೇರಿಸಲು ಹಗಲಿರುಳು

ದುಡಿಯುತ್ತಿದ್ದರು. ಮುಪ್ಪಿನಲ್ಲಿ ಶಕ್ತಿಗುಂದಿದ್ದರೂ ಒಳ್ಳೆ ಹುರುಪಿನಿಂದ ಕೆಲಸಕ್ಕೆ ಮುಂದಾಗುತ್ತಿದ್ದರು. ತ್ಯಾಗಬುದ್ಧಿ, ಸೇವಾಭಾವದಿಂದ ದುಡಿಯುವುದು ಉತ್ತರ ಕರ್ನಾಟಕದವರಿಗೆ ಪರಂಪರೆಯಿಂದ ಬಂದಿರುವ ಗುಣ. ಇಂಥ ಗುಣದಿಂದ ರಾಮ ಜಾಧವರು ಬಹಳ ದೊಡ್ಡವರಾಗಿ ಕಾಣುತ್ತಾರೆ. ಅವರ ಕನ್ನಡ ಕೂಲಿಯ ಕೆಲಸವನ್ನು ನಾವು ಸ್ಮರಿಸಬೇಕು. ಅವರ ಸೇವೆಯ ಮಾದರಿಗಳನ್ನು ನಮ್ಮ ಯುವ ಪೀಳಿಗೆಯುವರು ಮೈಗೂಡಿಸಿಕೊಳ್ಳಬೇಕು.

## ೧. ಗೋಕಾಕ ಚಳುವಳಿಯಲ್ಲಿ ಪ್ರಮುಖ ಪಾತ್ರ

ನೌಕರಿಯಿಂದ ನಿವೃತ್ತರಾಗುವ ಹೊತ್ತಿಗೆ ಕನ್ನಡದ ಕೆಲಸಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳಲು ನಿರ್ಣಯಿಸಿದರು. ಅದಕ್ಕಾಗಿಯೇ ನಿವೃತ್ತರಾದ ಮೇಲೆ ನೇರವಾಗಿ ಧಾರವಾಡಕ್ಕೆ ಬಂದರು. ಧಾರವಾಡವು ಸರಸ್ವತಿಯ ಜಾಗ್ರುತಸ್ಥಾನವೆಂದು ನಂಬಿದವರಲ್ಲಿ ಅವರೂ ಒಬ್ಬರು. ಅಲ್ಲಿ ಬೇಂದ್ರೆ ಇದ್ದಾರೆ. ಶಂಬಾ ಇದ್ದಾರೆ, ಬಸವರಾಜ ಕಟ್ಟಿಮನಿ, ಬೆಟಗೇರಿ ಕೃಷ್ಣಶರ್ಮ, ಆರ್.ಸಿ.ಹಿರೇಮಠ, ಚೆನ್ನವೀರ ಕಣವಿ ಇದ್ದಾರೆ. ವರದರಾಜ ಹುಯಿಲಗೋಳರಿದ್ದಾರೆ. ಸಂ.ಶಿ. ಭೂಸನೂರಮಠರಿದ್ದಾರೆ. ಸಿದ್ಧಲಿಂಗ ಪಟ್ಟಣಶೆಟ್ಟಿ, ಚಂಪಾ ಇದ್ದಾರೆ. ಹುಬ್ಬಳ್ಳಿಯಲ್ಲಿ ಸಹೋದರರಂತಿದ್ದ ಪಾಟೀಲ ಪುಟ್ಟಪ್ಪ ಇದ್ದಾರೆ-ಇವರೆಲ್ಲರ ಸಹವಾಸದಲ್ಲಿ ಕೈಲಾದಷ್ಟು ಕನ್ನಡದ ಕೆಲಸ ಮಾಡಬೇಕೆಂದು ಚಾಧವರು ಧಾರವಾಡಕ್ಕೆ ಬಂದರು. ಆಕಾಶವಾಣಿಯ ಹಿಂದಿರುವ ಹಳಿಯಾಳ ರಸ್ತೆಯಲ್ಲಿ ಮನೆ ಕಟ್ಟಿಸಿದರು.

ಕನ್ನಡ ಭಾಷೆಯ ಸ್ಥಾನಮಾನ, ಕನ್ನಡಿಗನ ಸಾಮಾಜಿಕ ಸ್ಥಾನಮಾನಗಳ ಸಲುವಾಗಿ ಒಂದಿಷ್ಟು ದುಡಿಯಬೇಕು. ಅಭಿಮಾನದ ಕೊರತೆಯಿರುವ ಕನ್ನಡಿಗರಲ್ಲಿ ಅಭಿಮಾನ ತುಂಬಬೇಕು. ಹೀಗೆ ಏನೆಲ್ಲ ಹುಚ್ಚು ಹುಮ್ಮಸ್ಸಿನಿಂದ ಅವರು ಧಾರವಾಡಕ್ಕೆ ಬಂದಾಗಿತ್ತು. ಹಾಗೆ ಬಂದವರಿಗೆ ಕೆಲವೇ ದಿನಗಳಲ್ಲಿ ಧಾರವಾಡವು ಆಭಾಸದ ಸಹವಾಸವಾಗಿ ಕಾಡತೊಡಗಿತು. ವರಕವಿ ಚರಕವಿಗಳಿದ್ದ ಊರಲ್ಲಿ ಗುಂಪುಗಾರಿಕೆ ಮನೆ ಮಾಡಿತ್ತು. ನಾನು ಶ್ರೇಷ್ಠ ಎಂಬ ಅಹಂ ಸಾಹಿತಿಗಳಲ್ಲಿ ತುಂಬಿಕೊಂಡಿತ್ತು. ಒಟ್ಟಿನಲ್ಲಿ ಕನ್ನಡದ ಕೆಲಸಕ್ಕೆ ಗ್ರಹಣ ಹಿಡಿದಿತ್ತು.

**ಈಗೀ ಕವಿ ಪರಂಪರೆ ಪರಿವಾರ**
**ನಡಸ್ಯಾರ ಕನ್ನಡದ ಕಾರಭಾರ**
**ಮಾರುವಾಂಗ ಧಾರವಾಡದ ಪೇಢೆ**
**ಶಾರದೆಗೆ ಕಟ್ಟುತ್ತಾ ಕಾಗದದ ವಾಡೆ**
**ಒಬ್ಬೊಬ್ಬರಾಗ್ಯಾರ ಒಂದೊಂದು ಕಡೆ**
**ಇಬ್ಬರು ಕೂಡಿದರ ಕಟ್ಟಕಡೆ**

೧೯೮೨ರಲ್ಲಿ ನಡೆದ ಗೋಕಾಕ ಚಳುವಳಿಯ ಸಂದರ್ಭದಲ್ಲಿ ಮಾತ್ರ ಧಾರವಾಡ ಅತ್ಯಂತ ಕ್ರಿಯಾಶೀಲವಾಯಿತು. ಸಾಹಿತಿ ಬುದ್ಧಿಜೀವಿಗಳು ಒಂದು ಕಡೆಗೆ ಬಂದರು. ಅದು ನೋಡಿ ಜಾಧವರು ಖುಷಿಯಿಂದ ಓಡಾಡಿದರು. ರಾಮ ಜಾಧವರು ಚಳುವಳಿಯ ಚುಕ್ಕಾಣಿ ಹಿಡಿಯುವುದಕ್ಕೆ ಕಾಲ ಕೂಡಿ ಬಂದಿತು.

ಬೀಸುತ್ತಲ್ಲೆಡೆ ಕನ್ನಡದ ಗಾಳಿ
ಮಾಡಿತು ಗೋಕಾಕ ಚಳುವಳಿ
ಆದರೆ ನೆಯ್ಯದೆ ಹೊಸ ಗೊಂಗಡಿ
ಖಾಲಿ ಬಿದ್ದಿದೆ ಹಳೆ ಅಂಗಡಿ
ಬರತಾ ಇದ್ದಾಗ ಚಕ್ಕಡಿ ತುಂಬ ಅಕ್ಕಡಿ
ಕನ್ನಡಕ್ಕೆ ಹತ್ತಿ ಕನ್ನಡದ ಇಲಿ
ಕನ್ನಡದ ಕೂಲಿಗಿಲ್ಲವಾಗಿದೆ ಹಮಾಲಿ

ಗೋಕಾಕ ವರದಿಯ ಜಾರಿಗೆಗಾಗಿ ನಡೆದ ಗೋಕಾಕ ಚಳುವಳಿಗೆ ಕನ್ನಡಿಗರ ಬದುಕಿನಲ್ಲಿ ಬಹುದೊಡ್ಡ ಸ್ಥಾನವಿದೆ. ಕರ್ನಾಟಕದೊಳಗಿನ ಪ್ರೌಢಶಾಲೆಗಳಲ್ಲಿ ಕನ್ನಡ ಹಾಗೂ ಇತರ ಭಾಷೆಗಳ ಸ್ಥಾನ ಎಂತಹದ್ದಾಗಿರಬೇಕೆಂಬುದರ ಬಗ್ಗೆ ಈ ವರದಿ ಇದ್ದರೂ, ಇದರ ಅನುಷ್ಠಾನಕ್ಕಾಗಿ ನಡೆದ ಚಳುವಳಿ ಮಾತ್ರ ಸಾಮಾನ್ಯ ಕನ್ನಡಿಗರಲ್ಲಿಯೂ ಕನ್ನಡದ ಪ್ರತಿಷ್ಠೆಯನ್ನು ಜಾಗೃತಗೊಳಿಸಲು ಕಾರಣವಾಯಿತು. ಸಾಹಿತಿ, ಕಲಾವಿದರಿಂದ. ಬುದ್ಧಿಜೀವಿಗಳಿಂದ ಆರಂಭವಾಗಿದ್ದ ಚಳುವಳಿ ಸಾಮಾನ್ಯ ಜನರ ವಿಶ್ವಾಸ ಗಳಿಸಿತು. ಕನ್ನಡತನವನ್ನು ಜನರು ಮೈಗೂಡಿಸಿಕೊಳ್ಳಲು ಸಹಕಾರಿಯಾಯಿತು. ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿಕೊಂಡು ನಿಜವಾದ ಅರ್ಥದಲ್ಲಿ ರಾಜ್ಯವ್ಯಾಪಿ ಚಳುವಳಿ ಯೆನಿಸಿತು. ಧಾರವಾಡ ಚಳವಳಿಯ ಕೇಂದ್ರಸ್ಥಳವಾಯಿತು.

ಈ ಚಳುವಳಿಯಿಂದ ಸ್ಫೂರ್ತಿಗೊಂಡು ನಾಡಿನಾದ್ಯಂತ ಸಂಘಟನೆಗಳು ತಲೆಯೆತ್ತಿದ್ದವು. ಧಾರವಾಡದಲ್ಲಿ 'ಕನ್ನಡ ಶಕ್ತಿ ಕೇಂದ್ರ' ಅಸ್ತಿತ್ವಕ್ಕೆ ಬಂದಿತು. ಬೀದಿಗೆ ಬಾರದ ಸಾಹಿತಿ, ಕಲಾವಿದರಿಂದ ಬೀದಿ ಚಳುವಳಿಗಳು ಆರಂಭವಾದವು. ಹೀಗೆ ಸಾಮಾನ್ಯ ಜನರನ್ನು ಒಳಗೊಂಡು ದೀರ್ಘಕಾಲ ನಡೆದ ಗೋಕಾಕ ಚಳುವಳಿಯು ಕನ್ನಡಪರ ಹೋರಾಟಗಳಲ್ಲಿಯೇ ವಿಶಿಷ್ಟವೆನಿಸಿತು.

ಇಂಥ ಐತಿಹಾಸಿಕ ಚಳುವಳಿಯು ರೂಪುಗೊಂಡಿದ್ದು ಧಾರವಾಡದಲ್ಲಿ. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದ ಶಂಬಾ ಜೋಶಿಯವರ ನೇತೃತ್ವದಲ್ಲಿ ಈ ಚಳುವಳಿ ಆರಂಭವಾಯಿತು. ಕೆಲವೇ ದಿನಗಳಲ್ಲಿ ಅನಾರೋಗ್ಯದ ನಿಮಿತ್ತ ಶಂಬಾ ಅವರು ಸಂಘಟನೆಯಿಂದ ಅಲಿಪ್ತರಾದರು. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾದರು. ಚಳುವಳಿಗೆ ಜೋರು ಬರುತ್ತಿದ್ದ ಹಾಗೆಯೇ ಕಾರಣಾಂತರದಿಂದ ಪಾಪು ಅವರೂ ಅಧ್ಯಕ್ಷಸ್ಥಾನದಿಂದ ದೂರ ಉಳಿದರು. ಆ ಮೇಲೆ ಚೆನ್ನವೀರ ಕಣವಿಯವರು ಅಧ್ಯಕ್ಷರಾದರು. ಅವರೂ ಬಹಳ ದಿನ ಮುಂದುವರೆಯಲಿಲ್ಲ. ಇಂಥ ಸಂದರ್ಭದಲ್ಲಿ ತಮ್ಮ ಸರ್ವಶಕ್ತಿಯನ್ನು ಕೇಂದ್ರ ಕನ್ನಡ ಕ್ರಿಯಾ ಸಮಿತಿಗೆ ಧಾರೆಯೆರೆಯುತ್ತಿದ್ದ ಜಾಧವರು ಸಂಘಟನೆಯ ಚುಕ್ಕಾಣಿ ಹಿಡಿಯಲೇ ಬೇಕಾಯಿತು.

ಜಾಧವರು ತ್ರಿಕರ್ಣಪೂರ್ವಕವಾಗಿ ಈ ಚಳುವಳಿಯಲ್ಲಿ ತೊಡಗಿಸಿಕೊಂಡರು. ಸಭೆ ಏರ್ಪಡಿಸುವುದು, ಸಮಾಲೋಚನೆ ಮಾಡುವುದು, ಉಪವಾಸ ಕೂಡುವುದು. ಕಾರ್ಯಕರ್ತರು ಕರೆದಲ್ಲಿ ಹೋಗುವುದು, ಭಾಷಣ ಮಾಡುವುದು, ಮೆರವಣಿಗೆ ತೆಗೆಯುವುದು-ಹೀಗೆ ಹಲವಾರು ಹಂತದಲ್ಲಿ ಚಳುವಳಿಯನ್ನು ಸಂಘಟಿಸುತ್ತ ಜಾಧವರು

ಗೋಕಾಕ ಚಳುವಳಿಯ ಕೇಂದ್ರಬಿಂದುವಾಗಿ ನಿಂತರು. ಜಾಧವರ ಕನ್ನಡ ಅಭಿಮಾನ. ಕನ್ನಡಕ್ಕಾಗಿ ದುಡಿಯುವ ಶಕ್ತಿ ಅಸಾಧಾರಣವಾಗಿತ್ತು. ಯಾರೇ ಕನ್ನಡಕ್ಕೆ ಸಲ್ಲದ ಮಾತು ಆಡಿದರೆ ನಿಗಿ ನಿಗಿ ಕೆಂಡವಾಗುತ್ತಿದ್ದರು. ಇವರ ಕನ್ನಡ ಕೆಲಸದ ಹಿಂದೆ ಯಾವುದೇ ಪದವಿ, ಪ್ರಶಸ್ತಿ, ಪ್ರಚಾರಗಳ ಲವಲೇಶವೂ ಇರುತ್ತಿರಲಿಲ್ಲ. 'ಕನ್ನಡವೇ ಹಾಡು, ಕರ್ನಾಟಕವೇ ನಾಡು, ಕನ್ನಡಿಗನಾಗಿಯೇ ಮಾಡು' ಎಂಬುದು ಅವರ ನಿಲುವಾಗಿತ್ತು. ಇವರ ಈ ದಿಟ್ಟ ನಿಲುವಿನಿಂದ ಉತ್ತರ ಕರ್ನಾಟಕದಲ್ಲಿ ಕನ್ನಡ ಜನಜಾಗೃತಿಯ ಕೆಲಸಕ್ಕೆ ಮತ್ತಷ್ಟು ಚೈತನ್ಯ ತುಂಬಿಕೊಂಡಿತು. ಕರ್ನಾಟಕದ ತುಂಬ ಚಳುವಳಿ ಹುಚ್ಚು ಹೊಳೆಯಾಗಿ ಹರಿಯಿತು. ಸರಕಾರ ವರದಿಯನ್ನು ಜಾರಿಗೆ ತರುವುದು ಅನಿವಾರ್ಯವಾಯಿತು. ಸಂಪೂರ್ಣ ತೃಪ್ತಿಕರವಲ್ಲದಿದ್ದರೂ ಐದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಓದುವಂತಾಯಿತು. ಇದು ಗೋಕಾಕ ಚಳುವಳಿಯ ಮುಖ, ಸಾಧನೆಯೆಂದೇ ಹೇಳಬೇಕು. ಇದರ ಜೊತೆಗೆ ಕನ್ನಡ ನೆಲ, ಜಲ ಸಂಸ್ಕೃತಿಗೆ ಸಂಬಂಧಿಸಿ ಹಲವಾರು ಕನ್ನಡಪರ ನಿಲುವುಗಳನ್ನು ಸರ್ಕಾರ ಮಾನ್ಯ ಮಾಡಬೇಕಾಯಿತು. ಇಂಥ ಪರಿಸ್ಥಿತಿ ಚಳುವಳಿಯಿಂದ ಸಾಧ್ಯವಾಯಿತು. ಇದರ ಶ್ರೇಯಸ್ಸು ಚಳುವಳಿಯ ಸೂತ್ರಧಾರರಾಗಿ ಶ್ರಮಿಸಿದ ಅನೇಕ ಧುರೀಣರಿಗೆ, ಕಲಾವಿದರಿಗೆ, ಜಾಧವರಂತಹ ಕನ್ನಡ ಹೋರಾಟಗಾರರಿಗೆ ಮತ್ತು ಅವರ ಬೆನ್ನಹಿಂದಿನ ಕನ್ನಡ ಸೈನಿಕರಿಗೆ ಸಲ್ಲಬೇಕು.

**೩. ಇತರ ಕನ್ನಡದ ಚಟುವಟಿಕೆಗಳು**

ಗಡಿನಾಡಿನಲ್ಲಿ ಕನ್ನಡ ಶಿಕ್ಷಣ ಪ್ರಸಾರ, ಗೋಕಾಕ ಚಳುವಳಿಯಲ್ಲಿ ರಾಮ ಜಾಧವರು ಮಹತ್ವದ ಪಾತ್ರ ನಿರ್ವಹಿಸಿದ್ದನ್ನು ನೋಡಿದೆವು. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿ ಸಮಿತಿಗೆ ಘನತೆ ತಂದುಕೊಟ್ಟರು. ಇದರ ಜೊತೆಗೆ ಧಾರವಾಡದ ಜಾಗೃತ ನಾಗರಿಕ ಮಂಡಳದ ಅಧ್ಯಕ್ಷರಾಗಿ ಅತ್ಯಂತ ಹೆಚ್ಚು ರಕ್ತದಾನ ಶಿಬಿರಗಳನ್ನು ನಡೆಸಿದರು. ಜೊತೆಗೆ ಧಾರವಾಡದ 'ಮಕ್ಕಳ ಮನೆ' ಸಂಸ್ಥೆಯ 'ಮಕ್ಕಳ ಮಂದಿರ' ಮಾಸ ಪತ್ರಿಕೆಯ ಸಂಪಾದಕರಾಗಿ, ಪತ್ರಿಕೆಯನ್ನು ಮನೆಮಾತಾಗುವಂತೆ ದುಡಿದರು.

ಹುಬ್ಬಳ್ಳಿ ರೇಲ್ವೆ ಇಲಾಖೆಯ ಕನ್ನಡ ಸಂಘದ ಅಧ್ಯಕ್ಷರಾಗಿ, ನಿರಂತರವಾಗಿ ಕನ್ನಡಿಗರ ಉದ್ಯೋಗ ಬಗ್ಗೆ ಅನೇಕ ಹೋರಾಟಗಳನ್ನು ಮಾಡಿದರು. ರೇಲ್ವೆ ಇಲಾಖೆಯು ಸಿಖಂದರಾಬಾದಿನ ಜನರನ್ನು ಹುಬ್ಬಳ್ಳಿಯ ಕಾರ್ಯಾಗಾರದ ಕೆಲಸಕ್ಕೆ ನೇಮಕ ಮಾಡಿದಾಗ ಇವರು ಉಗ್ರ ಹೋರಾಟಕ್ಕೆ ಇಳಿದರು. ಅಲ್ಲಿಯ ಜನರು ತಿರುಗಿ ಹೋಗುವಂತೆ ಮಾಡಿ ಕನ್ನಡಿಗರ ಉದ್ಯೋಗವನ್ನು ಉಳಿಸಿಕೊಟ್ಟರು. ದಟ್ಟ ವಲಯದ ಕನ್ನಡ ಕಾರ್ಮಿಕರಿಗೆ ಅನ್ಯಾಯವಾಗದಂತೆ ಜಾಧವರು ನಿಗಾ ಇಟ್ಟರು.

ಅ) ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿಯ ಗೌರವ ಸಲಹೆಗಾರರಾಗಿಯೂ ಕೆಲವು ಕಾಲ ಸೇವೆ ಸಲ್ಲಿಸಿದರು. ಒಮ್ಮೆ ಕರ್ನಾಟಕ ಸರಕಾರವು ರಾಜ್ಯ ಸಾರಿಗೆ ಸಂಸ್ಥೆಯ ಪ್ರಾದೇಶಿಕ ಕಾರ್ಯಾಗಾರದಲ್ಲಿ ಬಸ್ ಕವಚ ನಿರ್ಮಾಣ ಮಾಡುವಂತಹ ಬಸ್‌ಗಳನ್ನು ರದ್ದುಗೊಳಿಸಿ ಪ್ರತಿತಿಂಗಳು ಮೂವತ್ತು ಬಸ್‌ಗಳನ್ನು

ಗೋವಾದಲ್ಲಿರುವ ಅಟೋಮೊಬೈಲ್ ಕಾರ್ಪೋರೇಶನ್ ಆಫ್ ಗೋವಾ ಲಿ, ಕಂಪನಿಗೆ ಕೊಟ್ಟಿತು. ಇದರಿಂದ ನಾಲ್ಕು ನೂರು ಜನ ಕನ್ನಡಿಗರು ಉದ್ಯೋಗ ಕಳೆದುಕೊಳ್ಳುವ ಪರಿಸ್ಥಿತಿ ಬಂದಿತು. ಆಗ ರಾಮ ಜಾಧವರು ಸಮಿತಿಯ ಗೌರವ ಅಧ್ಯಕ್ಷರಾಗಿದ್ದ ಡಾ.ಎಂ. ಚಿದಾನಂದಮೂರ್ತಿಯವರನ್ನು ಕರೆದುಕೊಂಡು ಹೋರಾಟ ನಡೆಸಿದರು. ಸರಕಾರದ ನಿಲುವನ್ನು ಉಗ್ರವಾಗಿ ಪ್ರತಿಭಟಿಸಿದರು. ಕನ್ನಡಿಗರಿಗಾದ ಅನ್ಯಾಯವನ್ನು ಪತ್ರಿಕೆ, ಸಮೂಹ ಮಾಧ್ಯಮಗಳ ಮೂಲಕ ನಾಡಿನ ಸಮಸ್ತ ಜನರಿಗೆ ತಲುಪಿಸಿದರು. ಇವರ ಹೋರಾಟದ ಪರಿಣಾಮವನ್ನು ಗಮನಿಸಿದ ಸರಕಾರವು ಹುಬ್ಬಳ್ಳಿ ಕಾರ್ಯಾಗಾರದಲ್ಲಿಯೇ ವಾಹನಗಳ ಕವಚ ಕಟ್ಟುವ ಕೆಲಸ ಪುನಃ ಪ್ರಾರಂಭಿಸಿತು. ಮತ್ತೊಂದು ಸಲ ಕಲವು ಕಿಡಿಗೇಡಿಗಳು ಕನ್ನಡ ಧ್ವಜಕ್ಕೆ ಅವಮಾನ ಮಾಡಿದಾಗ ಜಾಧವರು ಚಿತ್ರನಟ ಅಶೋಕರನ್ನು ಮುಂದೆ ಮಾಡಿ ಕನ್ನಡಪರ ಸಂಘಟನೆಗಳನ್ನು ಕೂಡಿಸಿ ಉಗ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಅವಮಾನ ಮಾಡಿದ ಸ್ಥಳದಲ್ಲಿಯೂ ಕನ್ನಡ ಧ್ವಜವನ್ನು ಹಾರಿಸಿ ಕನ್ನಡದ ಕೆಚ್ಚನ್ನು ತೋರಿಸಿದರು.

ಬ) ಮಕ್ಕಳ ಮನೆ ಜಾಧವರ ಕನಸಿನ ಕೂಸು. ಹತ್ತರಿಂದ ಹದಿಮೂರು ವಯಸ್ಸಿನ ಮಕ್ಕಳ ಮಾನಸಿಕ ಬೌದ್ಧಿಕ ವಿಕಾಸಕ್ಕಾಗಿ ಒಂದು ಸಂಘಟನೆ ಜಾಧವರಿಗೆ ಬೇಕೆನಿಸಿತು. ಧಾರವಾಡದಲ್ಲಿ ಅಂಥ ಒಂದು ಸಂಸ್ಥೆಯ ಅಗತ್ಯವನ್ನು ಮನಗಾಣಿಸಿ ಅವರು ಈಶ್ವರ ಕಮ್ಮಾರ ಮೊದಲಾದ ಆಸಕ್ತರನ್ನು ಕೂಡಿಸಿಕೊಂಡು 'ಮಕ್ಕಳ ಮನೆ'ಯನ್ನು ಹುಟ್ಟು ಹಾಕಿದರು. ಮಕ್ಕಳ ಕಲಿಕೆ, ಶಿಕ್ಷಣ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಈ ಸಂಸ್ಥೆ ಮೀಸಲಾಯಿತು. ಮಕ್ಕಳಲ್ಲಿ ಅಡಗಿದ ಸುಪ್ತ ಪ್ರತಿಭೆ ಬೆಳಕು ಕಾಣಬೇಕು. ಕಲಾತ್ಮಕ ಅಭಿವ್ಯಕ್ತಿ ಪಡೆಯಬೇಕೆಂದು 'ಮಕ್ಕಳ ಮನೆ'ಯಿಂದ ಒಂದು ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. 'ಕಲಿವ ಮಕ್ಕಳ ಮಂದಿರ, ಇದುವೆ ಮಕ್ಕಳ ಮಂದಿರ' ಎಂಬುದು ಈ ಪತ್ರಿಕೆಯ ಘೋಷವಾಕ್ಯವಾಗಿದೆ. ಈ ಪತ್ರಿಕೆ ಮಕ್ಕಳ ಬೌದ್ಧಿಕ ಪ್ರಪಂಚ ಭಾವ ಪ್ರಪಂಚವನ್ನು ಬೆಳೆಸುವಂತಿರಬೇಕೆಂಬುದು ಜಾಧವರ ಆಶಯವಾಗಿತ್ತು. ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ, ಮಕ್ಕಳು ಇಷ್ಟಪಡುವ ರೀತಿಯಲ್ಲಿ ಶಿಕ್ಷಕರಿಂದ, ಪಾಲಕರಿಂದ ಪತ್ರಿಕೆಗೆ ಲೇಖನ ಬರೆಸುತ್ತಿದ್ದರು. ಚೈತನ್ಯದ ಚಿಲುಮೆಯಾಗಿ ಓಡಾಡುತ್ತ ಮಕ್ಕಳ ಮನೆಯ ಬೆನ್ನೆಲುಬಾಗಿದ್ದರು. ರಾಮ ಜಾಧವರು.

ಕ) ಧಾರವಾಡದ ಸಪ್ತಾಪೂರದಲ್ಲಿ 'ಕಲ್ಯಾಣ ಕೂಟ' ಮತ್ತು 'ಬಂಗಾರದ ಬಳಗ' ಸಂಘಟನೆಗಳು ತಲೆಯೆತ್ತಲು ರಾಮ ಜಾಧವ ಪ್ರಯತ್ನ ಪಟ್ಟರು. ಕಲ್ಯಾಣಕೂಟದಲ್ಲಿ ಶರಣ ಸಾಹಿತ್ಯದ ಚಿಂತನೆ, ಚರ್ಚೆ, ಉಪನ್ಯಾಸಗಳು ನಡೆಯುತ್ತಿದ್ದವು. 'ಬಂಗಾರದ ಬಳಗ' ವೆಂಬುದು ಪ್ರೊ. ಕೆ.ಜಿ. ಕುಂದಣಗಾರರ ನೆನಪಿಗಾಗಿ ತಲೆಯೆತ್ತಿದ್ದ ಸಂಸ್ಥೆಯಾಗಿತ್ತು. ಇದರಿಂದ ಸಾಹಿತ್ಯಗೋಷ್ಠಿಗಳು ಏರ್ಪಡುತ್ತಿದ್ದವು. ಧಾರವಾಡದ ಹಳಿಯಾಳ ರಸ್ತೆಯಲ್ಲಿ ದಿನವೂ ಬೆಳಿಗ್ಗೆ ವಾಕಿಂಗ್ ಮಾಡುವುದು ಜಾಧವರ ರೂಢಿಯಾಗಿತ್ತು. ಈ ರಸ್ತೆಯಲ್ಲಿಯೇ ಮನೆಗಳಿರುವ ಸಂ.ಶಿ. ಭೂಸನೂರಮಠ, ಆರ್.ಸಿ. ಹಿರೇಮಠ ಮೊದಲಾದವರೂ ವಾಕಿಂಗ್ ವೇಳೆಯಲ್ಲಿ ಕೂಡುತ್ತಿದ್ದರು. ಕನ್ನಡ-ಸಾಹಿತ್ಯ-ಸಂಸ್ಕೃತಿಗಳ ಚಿಂತನೆ ಮಾಡುತ್ತಿದ್ದರು. ಅವರ ಚಿಂತನೆಗಳ ಫಲವಾಗಿಯೇ ಮೇಲಿನ ಸಂಸ್ಥೆಗಳು ಮೈದಾಳಿದವು.

ರಾಮ ಜಾಧವರು ಇದ್ದಲ್ಲಿ ಸಂಘಟನೆಗಳು ತಲೆಯೆತ್ತುತ್ತಿದ್ದವು. ಇದರ ರಹಸ್ಯವೇನು ಎಂದು ಕೇಳಿದರೆ ಕನ್ನಡ ಕೂಲಿಗೆ ಕೆಲಸ ಬೇಕಲ್ಲ ಎಂದು ಅವರು ನಕ್ಕು ಹೇಳುತ್ತಿದ್ದರು.

ಕನ್ನಡದಲ್ಲಿ ಬಿ.ಎ, ಎಂ.ಎ ಮಾಡಿದ್ದ ವಿದ್ಯಾರ್ಥಿಗಳನ್ನು ಕಂಡರೆ ಅವರಿಗೆ ಅಭಿಮಾನ, ಅವರ ಆರ್ಥಿಕ ಪರಿಸ್ಥಿತಿ, ಕೆಲಸ ಎಲ್ಲ ವಿಚಾರಿಸುತ್ತಿದ್ದರು. ಕನ್ನಡದಲ್ಲಿ ಬರೆಯಿರಿ, ಕನ್ನಡಕ್ಕಾಗಿ ಒಂದಿಷ್ಟು ದುಡಿಯಿರಿ ಎಂದು ಅವರ ಬೆನ್ನು ತಟ್ಟುತ್ತಿದ್ದರು. ಮರಾಠಾ ಸಮಾಜದ ವಿದ್ಯಾರ್ಥಿಗಳೇನಾದರೂ ಕನ್ನಡ ಓದುತ್ತಿದ್ದರೆ ಅವರಿಗೆ ಇನ್ನೂ ಸಂತೋಷವಾಗುತ್ತಿತ್ತು. ೧೯೮೨ರಲ್ಲಿ ನಾನು ಕನ್ನಡ ಅಧ್ಯಯನ ಪೀಠಕ್ಕೆ ಮೊದಲ ಬ್ಯಾಂಕ್ ಜೊತೆಗೆ ಚಿನ್ನದ ಪದಕಗಳನ್ನು ಪಡೆದಿದ್ದೆ. ಈ ವಿಷಯ ತಿಳಿದದ್ದೇ ತಡ ಭೇಟಿಯಾಗಲು ಹೇಳಿ ಕಳಿಸಿದರು. ಮನೆಗೆ ಹೋದಾಗ ನನ್ನನ್ನು ಅಪ್ಪಿ ಸಂತೋಷಪಟ್ಟು ಸಿಹಿ ತಿನಿಸಿದರು. ಸಂಶೋಧನೆಗೆ ತೊಡಗುವುದಾದರೆ ಸಹಾಯ ಮಾಡುವುದಾಗಿಯೂ ಹೇಳಿದರು. ಅಂದು ಒಂದು ನೂರು ರೂಪಾಯಿ ಕೊಟ್ಟು ಮತ್ತೆ ಮತ್ತೆ ಕಾಣಲು ಹೇಳಿದರು. ಮುಂದೆ ನಾನು ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ಬಗ್ಗೆ ಸಂಶೋಧನೆ ಪ್ರಾರಂಭಿಸಿದಾಗ ರಂಗ ಕಲಾವಿದರ ಸಂದರ್ಶನಕ್ಕಾಗಿ ಒಂದು ಟೇಪ್ ರಿಕಾರ್ಡರ್ ಕೊಟ್ಟರು. ಸಂ.ಶಿ.ಭೂಸನೂರಮಠರನ್ನು ಪರಿಚಯಿಸಿ, ಮಾರ್ಗದರ್ಶನ ಮಾಡಲು ಹೇಳಿದರು. ಪ್ರತಿಭಾವಂತ ವಿದ್ಯಾರ್ಥಿಗಳು ಕನ್ನಡ ಅಧ್ಯಯನ ಮಾಡುತ್ತಿದ್ದಾರೆ ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಇತರರಲ್ಲಿ ಕಾಣದಂತಹ ಹುಮ್ಮಸ್ಸು ಉಮೇದು ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.

ನನ್ನ ನೌಕರಿಗಾಗಿಯೂ ಇವರೇ ದಾರಿ ತೋರಿದರು. ೧೯೮೩ರ ಮಾತು. ಆಗ ನಾನು ಕನ್ನಡ ಅಧ್ಯಯನ ಪೀಠದಲ್ಲಿ ಸಂಶೋಧನ ವಿದ್ಯಾರ್ಥಿಯಾಗಿದ್ದೆ. ಒಂದು ದಿನ ಆತ್ಮೀಯ ಗೆಳೆಯ ಪಾರ್ಶ್ವನಾಥ ಕೆಂಪಣ್ಣವರ (ಈಗ ರಾಯಬಾಗ ನ್ಯೂ ಇಂಗ್ಲೀಷ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದಾರೆ.) ಬೆಳಗಾವಿಯ ದಕ್ಷಿಣ ಮಹಾರಾಷ್ಟ್ರ ಶಿಕ್ಷಣ ಮಂಡಳದವರು ಕನ್ನಡ ಉಪನ್ಯಾಸಕ ಹುದ್ದೆಗೆ ಅರ್ಜಿ ಕರೆದಿರುವುದಾಗಿ ಹೇಳಿದರು. (ನಾನೂ ಮರಾಠಾ, ಶಿಕ್ಷಣ ಸಂಸ್ಥೆಯೂ ಮರಾಠಿಗರದು. ಈ ಸಂಬಂಧದಿಂದ ಆಯ್ಕೆಯಾಗಬಹುದೆಂಬುದು ಅವರ ಖಚಿತ ಅಂದಾಜು) ಅರ್ಜಿಯನ್ನೂ ಕಳಿಸಿದರು. ನನಗೂ ಅದೊಂದು ಒಳ್ಳೆಯ ಅವಕಾಶವಾಗಿ ಕಂಡಿತು. ಕೂಡಲೇ ರಾ.ಬಾ. ಜಾಧವರನ್ನು ಕಂಡು ವಿಷಯ ತಿಳಿಸಿದೆ. ಬೆಳಗಾವಿ ಅಂದ ತಕ್ಷಣ ತುಂಬ ಭರವಸೆಯಿಂದಲೇ ಹೇಳಿದರು. ಅಲ್ಲಿ ನನ್ನ ಗುರ್ತಿನವರು ಭಾಳ ಜನಾ ಅದಾರ. ನಮ್ ಹುಡುಗಂತ ಹೇಳತೀನಿ, ಅರ್ಜಿ ಹಾಕು' ಎಂದರು. ಸಂದರ್ಶನಕ್ಕಿಂತ ಮೊದಲೇ ಬೆಳಗಾವಿಗೆ ಹೋಗಿ ತಮ್ಮ ಪರಿಚಯದ ವ್ಯಕ್ತಿಗಳಿಗೆ ಭೇಟಿಯಾಗಿ ಬರಲು ಹೇಳಿದರು. ನನಗೆ ಬೆಳಗಾವಿ ಅಪರಿಚಿತವಾಗಿತ್ತು. ಅಲ್ಲಿ ನನ್ನ ಪರಿಚಯದವರೆಂದರೆ ಅಲ್ಲಿಯ ಲಿಂಗರಾಜ ಕಾಲೇಜಿನಲ್ಲಿ ಓದಿದ್ದ ಗೆಳೆಯ ಕೆಂಪಣ್ಣವರ ಮಾತ್ರ. ಅವರಿಂದಲೇ ಈ ನೌಕರಿ ಬೇಟೆ ಪ್ರಾರಂಭವಾಗಿತ್ತು. ಇಂಥದರಲ್ಲಿ ರಾಮ ಜಾಧವರು ಕೊಟ್ಟ ಶಿಫಾರಸ್ಸು ಪತ್ರಗಳನ್ನು ಹಿಡಿದು ಬೆಳಗಾವಿಗೆ ಹೋದೆ.

ಒಂದು ಪತ್ರ ಶಿವಾಜಿರಾವ ಕಾಕತ್ಕರ್ ಅವರ ಹೆಸರಿಗಿತ್ತು. ಇವರು ಕೆಲವು ಕಾಲ ಬೆಳಗಾವಿ ಮಹಾನಗರಸಭೆಯ ಮೇಯರ್ ಆಗಿದ್ದರು. ನಾನು ಅರ್ಜಿ ಹಾಕಿದ್ದ ಶಿಕ್ಷಣ ಸಂಸ್ಥೆಯ ನಿರ್ದೇಶಕರೂ ಆಗಿದ್ದರು. ನರಗುಂದಕರ ಭಾವೆ

ಚೌಕದ ಬಳಿ ಇವರ ಬೆಣ್ಣೆ ಅಂಗಡಿ ಇತ್ತು. ಜಾಧವರು ಕೊಟ್ಟ ಪತ್ರ ಹಿಡಿದು ನಾನು ಅಂಗಡಿಗೆ ಹೋದೆ. ಪರಿಚಯ ಮಾಡಿಕೊಂಡು ಪತ್ರ ಕೊಟ್ಟೆ. ಅವರು ಓದಿ 'ಮರಾಠಿ ಮನಷಾ, ಆದರ ಕನ್ನಡದಲ್ಲಿ ಎಂ.ಎ, ಗೋಲ್ಡ್ ಮೆಡಲಿಸ್ಟ್! ಕಾಯ ಹರಕತ ನಾಹಿ' ಎಂದು ನಕ್ಕು ಬೆನ್ನು ತಟ್ಟಿದರು. ಸಹಾಯ ಮಾಡಬೇಕೆಂದು ಕಾಲೇಜಿನ ಪ್ರಾಚಾರ್ಯರಿಗೆ ಫೋನು ಮಾಡಿಯೂ ಹೇಳಿದರು. ನನ್ನ ಬಳಿ ಮತ್ತೊಂದು ಪತ್ರವಿತ್ತು. ಅದು ಮಿಸಾಳ ಎನ್ನುವವರ ಹೆಸರಿಗೆ ಬರೆದಿತ್ತು. ಮಿಸಾಳ ಅವರು ನಿವೃತ್ತ ಮಿಲಿಟರಿ ಅಧಿಕಾರಿ, ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾಗಿದ್ದರು. ಅವರು ಟಿಳಕವಾಡಿಯಲ್ಲಿರುತ್ತಿದ್ದರು. ಅವರ ಮನೆಗೂ ಹೋಗಿ. ಪತ್ರ ಕೊಟ್ಟೆ, ಸಹಾಯ ಮಾಡುವುದಾಗಿ ಅವರೂ ಭರವಸೆ ಕೊಟ್ಟರು. ಜಾಧವರ ಪತ್ರಗಳಿಂದ ನನ್ನಲ್ಲಿ ಆತ್ಮವಿಶ್ವಾಸ ಬಲವಾಯಿತು. ಸಂದರ್ಶನ ಚೆನ್ನಾಗಿಯೇ ನೆರವೇರಿತು. ಆಶ್ಚರ್ಯವೆಂದರೆ ಸಂದರ್ಶನದಲ್ಲಿ ನನಗಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಇರಲಿಲ್ಲ. ಹೀಗಾಗಿ ಹೇಳಿಕೊಳ್ಳುವ ಸ್ಪರ್ಧೆ ಏರ್ಪಡಲಿಲ್ಲ. ಕೆಲದಿನಗಳಲ್ಲಿ ನೇಮಕಾತಿಯ ವಿಷಯ ತಂತಿ ಸಂದೇಶದ ಮೂಲಕ ತಿಳಿಯಿತು. ಅಂದಿನಿಂದ ನಾನು ದಕ್ಷಿಣ ಮರಾಠಾ ಶಿಕ್ಷಣ ಮಂಡಳದ ಭಾವುರಾವ ಕಾಕತ್ಕರ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವೆ. ಬೆಳಗಾವಿಯ ಋಣಾನುಬಂಧ ಮತ್ತು ಈ ನೌಕರಿಯ ಋಣಾನುಬಂಧದ ಹಿಂದೆ ರಾಮ ಜಾಧವರ ಕಾಣದ ಕೈ ಇರುವುದನ್ನು ಮರೆಯಲಾಗದ ಮಾತು. ಅವರ ಉಪಕಾರ ಸ್ಮರಿಸಿದಷ್ಟೂ ಕಡಿಮೆಯೇ. ನನ್ನಂತೆಯೇ ಅನೇಕ ಜನರಿಗೆ `ರಾ.ಬ' ಸಹಾಯ ಮಾಡಿದ್ದಾರೆ. ಬಡವಿದ್ಯಾರ್ಥಿಗಳನ್ನು, ಅಸಹಾಯಕರನ್ನು ಕಂಡರೆ. ನೆರವಿಗೆ ಧಾವಿಸುತ್ತಿದ್ದರು. ಕೈಲಾದ ಸಹಾಯ ಮಾಡಿ ಉತ್ತಮ ದಾರಿಗೆ ಹಚ್ಚುತ್ತಿದ್ದರು.

ಇನ್ನೊಂದು ಸಂಗತಿಯನ್ನು ಇಲ್ಲಿಯೇ ಪ್ರಸ್ತಾಪಿಸಬೇಕು. ಅದು, ಡಾ. ಸರಜೂ ಕಾಟ್ಕರ್ ನನಗೆ ಪರಿಚಯವಾಗಲು ರಾ.ಬ, ಜಾಧವರೇ ಕಾರಣ. ನೌಕರಿ ಸಿಕ್ಕ ಮೇಲೆ ಬೆಳಗಾವಿಯಲ್ಲಿರಲು ಯಾವುದೇ ರೀತಿಯ ತೊಂದರೆಯಾಗಬಾರದೆಂದು ಡಾ. ಸರಜೂ ಕಾಟ್ಕರ್ ಅವರ ಹೆಸರು ಪ್ರಸ್ತಾಪಿಸಿದರು. 'ನಮ್ ಹುಡುಗ, ಚಲೋ ಬರೀತಾನ. ಕವಿ ಅದಾನ. ಪರಿಚಯ ಮಾಡಕೋ. ಅನುಕೂಲ ಆಗ್ತದ' ಎಂದು ಅವರಿಗೂ ಪತ್ರ ಕೊಟ್ಟಿದ್ದರು. ಆ ಪತ್ರ ನನ್ನ ಹಾಗೂ ಡಾ. ಸರಜೂ ಕಾಟ್ಕರ್ ಅವರ ನಿಕಟ ಸ್ನೇಹ ಸಂಬಂಧಕ್ಕೆ ನಾಂದಿ ಹಾಡಿತು. ರಾ.ಬಾ. ಜಾಧವರ ಪಾದರಸದ ವ್ಯಕ್ತಿತ್ವ ಹೀಗೆ ಅನೇಕರ ಜೀವನದಲ್ಲಿ ಮಹತ್ವದ ಪಾತ್ರವಾಡಿದೆ. ಅವರದು ಸಮಾಜಮುಖಿ ವ್ಯಕ್ತಿತ್ವವಾಗಿತ್ತು.

ಜಾಧವರು ಸಲಹೆಗಾರರಾಗಿಯೋ, ಸಂಸ್ಥಾಪಕರಾಗಿಯೋ, ಅಧ್ಯಕ್ಷರಾಗಿಯೋ. ಉಪಾಧ್ಯಕ್ಷರಾಗಿಯೋ ಸೇವೆ ಮಾಡಿದ ಸಂಸ್ಥೆಗಳನ್ನು ಹೀಗೆ ಹೆಸರಿಸಬಹುದು.

೧. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಧಾರವಾಡ - ಅಧ್ಯಕ್ಷ

೨. ಕೇಂದ್ರ ಅಬಕಾರಿ ಹಾಗೂ ತೆರಿಗೆ ಇಲಾಖೆಯ ಗೃಹ ನಿರ್ಮಾಣ ಸಹಕಾರಿ ಸಂಘ-ಅಧ್ಯಕ್ಷ

೩. ಜಾಗೃತ ನಾಗರಿಕ ಮಂಡಳ, ಧಾರವಾಡ-ಸಂಸ್ಥಾಪಕ ಅಧ್ಯಕ್ಷ

೪. ರಕ್ತದಾನಿಗಳ ಸಂಘ ಧಾರವಾಡ-ಸಂಸ್ಥಾಪಕ ಅಧ್ಯಕ್ಷ

೫. ಮಕ್ಕಳ ಮನೆ ಧಾರವಾಡ-ಸಂಸ್ಥಾಪಕ ಉಪಾಧ್ಯಕ್ಷ

೬. ಹಿಂದುಳಿದ ಅಲ್ಪಸಂಖ್ಯಾತರ ಸಂಯುಕ್ತ ಕ್ರಿಯಾ ಸಮಿತಿ-ಸಲಹೆಗಾರ

೭. ಬಂಗಾರ ಬಳಗ, ಧಾರವಾಡ ಸಂಚಾಲಕ

೮. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ಉಪಾಧ್ಯಕ್ಷ

೯. ಧಾರವಾಡ ಜಿಲ್ಲೆ ಮರಾಠಾ ಜಾಗೃತ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ

೧೦. ಕಲ್ಯಾಣ ಕೂಟ, ಧಾರವಾಡ ಸಂಸ್ಥಾಪಕ ಉಪಾಧ್ಯಕ್ಷ

ಜಾಧವರ ಕನ್ನಡ ಸೇವೆ, ಸಮಾಜ ಸೇವೆ, ಜನಸೇವೆಯ ವಿಸ್ತಾರವನ್ನು ಮೇಲಿನ ಪಟ್ಟಿ ತಿಳಿಸುತ್ತದೆ. ಇವರ ಸೇವೆಯನ್ನು ಗುರುತಿಸಿ ನಾಡಿನ ಸಂಘ ಸಂಸ್ಥೆಗಳು ಗೌರವಿಸಿದವು. ೧೯೯೨ರಲ್ಲಿ ಧಾರವಾಡ ಕನ್ನಡ ಸಾಹಿತ್ಯ ಪರಿಷತ್ತು. ೧೯೯೩ರಲ್ಲಿ ಧಾರವಾಡ ಮಹಾನಗರ ಪಾಲಿಕೆ ಹಾಗೂ ಧಾರವಾಡ ನಾಗರೀಕ ವೇದಿಕೆಗಳು ಸನ್ಮಾನಿಸಿದವು. ೧೯೯೪ ಜುಲೈ ತಿಂಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು, ಕನ್ನಡ ಕ್ರಿಯಾ ಸಮಿತಿಯ ಆಶ್ರಯದಲ್ಲಿ, ಹುಬ್ಬಳ್ಳಿಯಲ್ಲಿ ಜರುಗಿದ ರಾಜ್ಯಮಟ್ಟದ ಎರಡನೆಯ ಅಧಿವೇಶನದಲ್ಲಿ ಸನ್ಮಾನಿಸಿ ಅಭಿನಂದನಾ ಪತ್ರ ನೀಡಿತು.

# ಸಾಹಿತ್ಯ ರಚನೆ, ಬಸವ ಚಿಂತನೆ

**ನಾನು ಸಾಹಿತಿಗಳ ಸಂಗಾತಿ**
**ಅಲ್ಲ ಸಾಹಿತಿ**
**ಎಂಬುದು ನನ್ನ ಪೂರ್ಣ ಮಾಹಿತಿ**

ರಾಮ ಜಾಧವರು ಒಂದು ಕವನ ಸಂಕಲನ (ಇದಿಷ್ಟೇ ಸತ್ಯ-೧೯೯೩). ಒಂದು ಬಿಡಿನುಡಿ ಸಂಚಯ (ಬಸವ ಪ್ರಹರ ೧೯೯೪) ಪ್ರಕಟಿಸಿದ್ದಾರೆ. ಪ್ರಕಟಿತ ಕೃತಿಗಳನ್ನು ಬಿಟ್ಟರೆ ಅಪ್ರಕಟಿತವಾಗಿ ಉಳಿದಿರುವ ಸಾಹಿತ್ಯವೆಂದರೆ ಕವಿತೆಗಳು. ಲೇಖನಗಳು ವೃತ್ತಿಜೀವನದ ಅನುಭವ ಕಥನಗಳು. ಆದರೆ ಇವೆಲ್ಲ ಇಂದು ಸರಿಯಾದ ಕ್ರಮದಲ್ಲಿ ಲಭ್ಯವಿಲ್ಲ.

ಆಗಾಗ ಬರೆದಿಟ್ಟಿರುವ ಕವನಗಳ ರಾಶಿಯಿಂದ ೭೨ನ್ನು ಮಾತ್ರ ಆಯ್ದುಕೊಂಡು 'ಇದಿಷ್ಟೇ ಸತ್ಯ' ಹೆಸರಿನ ಸಂಕಲನ ೧೯೯೩ರಲ್ಲಿ ಪ್ರಕಟಿಸಿದರು. ಈ ಸಂಕಲನ ಹೊರಬರಲು ಕಾರಣರಾದವರು ಪ್ರೊ. ಚಂದ್ರಶೇಖರ ಪಾಟೀಲ. ಅವರ 'ಸಂಕ್ರಮಣ' ಪ್ರಕಾಶನ ಸಂಸ್ಥೆಯಿಂದ ಇದು ಪ್ರಕಟವಾಯಿತು. ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಚಂಪಾ ಅವರಿಗೆ ಜಾಧವರ ಉದ್ದುದ್ದ ಪಂಕ್ತಿಯ ಸಾಹಿತ್ಯ ಪರಿಚಯವಾಯಿತು. ಆಗಲೇ ಅವುಗಳಲ್ಲಿಯ ಕೆಲವನ್ನು ಆಯ್ದು ಒಂದು ಸಂಕಲನವನ್ನು ಹೊರತರಬೇಕೆಂದು ಅವರು ದುಂಬಾಲು ಬಿದ್ದರು. ಅದರ ಪರಿಣಾಮವೇ 'ಇದಿಷ್ಟೇ ಸತ್ಯ' ಸಂಕಲನ. ಇದನ್ನು ಮಡದಿ ಪದ್ಮಾಳ ಬತ್ತದ ತಾಯ್ತನಕ್ಕೆ ಕೃತಜ್ಞತೆಯಿಂದ ಅರ್ಪಿಸಿದ್ದಾರೆ.

ಸಂಕಲನದ ಆರಂಭದ ಕೆಲವು ಕವನಗಳಲ್ಲಿ ಜಾಧವರ ಸಾಹಿತ್ಯಕ ನಿಲುವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

**ಕವಿತೆ ಬರೆಯುವುದರಿಂದ**
**ಆಗುವುದೇನು?**
**ಹೃದಯದಲ್ಲಿರದಿದ್ದರೆ**
**ಕರುಣೆಯ ಜೇನು!**

ಕವಿಗೆ ಬರವಣಿಗೆಯಷ್ಟೇ ಮುಖ್ಯವಲ್ಲ. ಬದುಕೂ ಮುಖ್ಯ. ಕವಿ ಬರೆದ ಅಕ್ಷರ ಅವನ ಬದುಕಿನಲ್ಲಿ ಸಾಕ್ಷಾತ್ಕಾರವಾಗಿರಬೇಕೆಂಬುದು ಜಾಧವರ ಸ್ಪಷ್ಟ ನಿಲುವು. ಅದಕ್ಕಾಗಿಯೇ ಅವರಿಗೆ ಬಸವಣ್ಣ ಅತ್ಯಂತ ಪ್ರಿಯ, ಬಸವಣ್ಣನ ವಚನಗಳು ಅವರಿಗೆ ಶ್ರೇಷ್ಠ ಸಾಹಿತ್ಯವಾಗಿ ಗಮನ ಸೆಳೆದವು.

**ಅಕ್ಷರದಿಂದ ಸಾಕ್ಷಾತ್ಕಾರ**
**ಪಡೆಯುವವನು ಸಾಹಿತಿ,**
**ಅಕ್ಷರವನ್ನು ನಕ್ಷತ್ರದ**

**ಹತ್ತಿರ ಒಯ್ಯುವವನು ಸಿದ್ಧಾಂತಿ**
**ಅಕ್ಷರವನ್ನೇ ನಕ್ಷತ್ರವನ್ನಾಗಿ**
**ಮಾಡುವುದು**
**ಬಸವನಂಥವನ ಕೃತಿ.**

ಮನುಷ್ಯ (ಅತ್ಯಂತ ಘಾತುಕ ಪ್ರಾಣಿ ಪು.೨೮)ನ ಸ್ವಾರ್ಥ ಅಧಿಕಾರ ದಾಹ, ಸಿರಿತನದ ಮೋಹಗಳೆಲ್ಲ ಹೇಗೆ ಒಂದು ವ್ಯವಸ್ಥೆಯನ್ನು ರೂಕ್ಷಗೊಳಿಸುತ್ತವೆ ಮತ್ತು ಸಮಾಜದ ಸಂಪತ್ತುಗಳಾದ ಭಾಷೆ, ಧರ್ಮ, ಆಚಾರ-ವಿಚಾರಗಳನ್ನು ಹೇಗೆ ಅವನು ಕಬಳಿಸಿಬಿಡುತ್ತಾನೆಂಬುದನ್ನು ಇಲ್ಲಿಯ ಕವನಗಳು ನೇರವಾಗಿಯೇ ನುಡಿಯುತ್ತವೆ. ಮುಖ್ಯವಾಗಿ ಜಾಧವರು ಒಪ್ಪಿ ಅಪ್ಪಿಕೊಂಡಿರುವ ನೆಲಸಂಸ್ಕೃತಿಯ ಚಿಂತನೆಗಳನ್ನೇ ಇಲ್ಲಿಯ ಕವನಗಳು ಧ್ವನಿಸುತ್ತವೆ. ಪ್ರಕೃತಿಯ ಸಮಸ್ತ ವ್ಯಾಪಾರಕ್ಕೆ ಈ ನೆಲವೇ ಆಧಾರ. ಸೃಷ್ಟಿ, ಸ್ಥಿತಿ ಲಯದ ಚಲನೆಯು ನೆಲತಾಯಿಯ ಒಲುಮೆಯಲ್ಲಿಯೇ ಚಲಿಸುವಂಥದ್ದು. History is protean, Geography is green ಮತ್ತು Merit is Geographical, Sin is a man ಮುಂತಾದ ಭೌಗೋಲಿಕ ಸಿದ್ಧಾಂತಗಳಿಂದ ಜಾಧವರು ಪ್ರಭಾವಿತರಾಗಿದ್ದರು. ಅವರ ಕವಿತೆಗಳಲ್ಲಿ ಇವುಗಳ ಪ್ರಭಾವ ಎದ್ದು ಕಾಣುತ್ತದೆ.

**ಮಣ್ಣಿನ ಮೇಲೆ ಹುಟ್ಟತಾವ ಗುಡಿಸಲು**
**ಕಟ್ಟತಾರ ಗಗನಚುಂಬಿ ಭವ್ಯ ಮಹಲು**
**ಸೃಷ್ಟಿ ಸ್ಥಿತಿ ಲಯ**
**ಮಣ್ಣ ಹಾಕಿದ ಪಾಯಾ**
**ಅದರದೇ ಆಗಾಧ ಮಾಯಾ**
**ಜೀವ ಜಂತುಗಳ ಮೇಲೆ ಛಾಯಾ**
**ಇತಿಹಾಸಕ್ಕಿದ್ದರೆ ವಯಸ್ಸು**
**ಮಣ್ಣಿಗಿದೆ ಮನಸ್ಸು**
**ಮಣ್ಣು ಮಾಡಿದರೆ ಮನಸ್ಸು**

ಕನಸಾಗರದ ನನಸುಮುಂತಾದ ಪಂಕ್ತಿಯಲ್ಲಿ ಮಣ್ಣಿನ ಮಾಯೆಯನ್ನು, ಮಹಿಮೆಯನ್ನು ಜಾಧವರು ಹಾಡಿದ್ದಾರೆ. ಅದಕ್ಕಾಗಿಯೇ ಅವರಿಗೆ 'ಭೂಮಿ ಗುರು'. ಗುರುಗಳ-ಗುರು ಪರಮಗುರು' ಜಾಧವರು ಮರಾಠಿ ಭಾಷ, ಮರಾಠಿ ಮನೆತನದಿಂದ ಬಂದವರು. ಅದು ಇತಿಹಾಸ. ಅವರು ಹುಟ್ಟಿ ಬೆಳೆದ ನೆಲ ಕರ್ನಾಟಕ. ಇದು ವರ್ತಮಾನ. ಇಲ್ಲಿಯ ಮಣ್ಣಿನಿಂದಲೇ ಅರಳಿದ್ದು ಅವರ ಮನಸ್ಸು. ಹೀಗಾಗಿ ಇತಿಹಾಸವನ್ನು ಅಭಿಮಾನದಿಂದ (ಛತ್ರಪತಿ ಶಿವಾಜಿ ಮಹಾರಾಜರ ಹೋರಾಟ, ಸಾಧನೆಗಳನ್ನು) ಸ್ಮರಿಸುತ್ತ, ನಿಂತ ನೆಲದ ಬಗ್ಗೆ ಮಾತನಾಡುತ್ತ, ಅದರ ಮೇಲಿನ ಬದುಕು ಸುಂದರಗೊಳಿಸಲು ಹೋರಾಡುತ್ತ ಸಾಗುವುದು ಜಾಧವರಿಗೆ ತುಂಬಾ ಪ್ರಿಯವಾದ ಕೆಲಸವಾಗಿತ್ತು. ಜಾಧವರು 'ಕನ್ನಡದ ಕೂಲಿ'ಯಾದ ರಹಸ್ಯವನ್ನು ಅವರು ನಂಬಿದ್ದ ಈ ಸಿದ್ಧಾಂತದಿಂದಲೇ ಕಂಡುಕೊಳ್ಳಬಹುದು. ಅವರ ಬದುಕು-ಬರಹ ನೆಲಸಂಸ್ಕೃತಿಯಿಂದಲೇ ಪ್ರೇರಿತವಾಗಿತ್ತು. ಪ್ರಭಾವಿತವಾಗಿತ್ತು.

Basava is not a History but a Geography ಎಂಬುದು ಜಾಧವರ ಖಚಿತ ನಿಲುವು. ಕಾರಣ ಮನುಷ್ಯನಲ್ಲಿ ಮನುಷ್ಯತ್ವವನ್ನು ಬಿತ್ತಿ, ಉಳುವ, ಒಕ್ಕುವ ಭೂಮಿಯನ್ನಾಗಿ ಮಾಡಿದವನೇ ಬಸವಣ್ಣ.

**ಇದು ಬಸವ ಭೂಮಿ**
**ಇದಕ್ಕಿಲ್ಲ ಸೀಮಿ**
**ನಾನಾಗಿದ್ದರೂ ಹಂಗಾಮಿ**
**ನನಗೆ ನಾನೇ ಸ್ವಾಮಿ**

ಎಂದು ಬಸವ ಭೂಮಿಯ ಕುರಿತು ಬರೆದಿದ್ದಾರೆ.

**ಕಾರಣ ಭೂಮಿ ಶಬ್ದ**
**ಅರ್ಥ ಹೊತ್ತ ವಾಹಕ**
**ಕಾಯಕದ ಪ್ರೇರಕ**
**ಅರುಹಿನ ಪ್ರಾಸಾದಿಕ**
**ದಾಸೋಹದ ಶಾಸಕ**
**ಅರಿವೇ ಗುರು (ಭೂಮಿ ಗುರು)**

ಬಸವಣ್ಣನ ಬಗೆಗಿರುವ ಭಕ್ತಿಯ ಜೊತೆಗೆ ಬೇಂದ್ರೆಯವರ ಬಗೆಗಿರುವ ಪ್ರೀತಿಯನ್ನೂ ಜಾಧವರ ಕವಿತೆಗಳು ಪ್ರಕಟ ಮಾಡುತ್ತವೆ.

**'ಕವಿ ಆಗೂದಿಲ್ಲ, ಬರತಾನ ಹುಟ್ಟಿ**
**ಅಂಥವನಿಂದಾಗ್ತದ ಕಾವ್ಯಸೃಷ್ಟಿ**
**ಅಂತ ಬಿಟ್ಟಾಗ ದತ್ತಗಾಳಿ ಬಿರುಗಾಳಿ**
**ಹಾರಿ ಹೋದಾವು ಎಲ್ಲಾ ಬಿಳಿ ಹಾಳೆ**
**ಕವಿ ಆಗುವ ಭ್ರಮೆ**
**ಕೇಳಿತು ನನ್ನ ಕ್ಷಮೆ**

ಬೇಂದ್ರೆಯವರು ವರಕವಿ, ಅವರ ಭಾವ-ಭಾಷೆಗಳ ಮೋಡಿಗೆ ಒಳಗಾದವರು. ಸದಾ ಅವರ ನಾದಲೀಲೆಗಾಗಿಯೇ ತುಡಿದವರು ಜಾಧವರು. ಹಾಗಾಗಿ ಅವರ ಮಾತಿನ ಧಾಟಿಯಲ್ಲಿ ಬೇಂದ್ರೆಯವರ ಘಾಟಿ ಇರುವುದು ಎದ್ದು ಕಾಣುತ್ತದೆ. ಪ್ರಾಸ ಒಳ ಪ್ರಾಸಗಳ ಹದ, ಆಡುಮಾತಿನ ಸೊಗಸು ತಿಳಿ ಹೇಳುವ ಗುಣಗಳಿಂದ ಜಾಧವರ ಕವಿತೆಗಳು ಮತ್ತೆ ಮತ್ತೆ ಓದಿಸಿಕೊಳ್ಳುವಂತಿವೆ.

ಕುಟುಂಬ ಸಂಬಂಧಗಳು, ಗರುವಿಕೆಯುಳ್ಳ ಗುರುಗಳು. ಧಾರವಾಡದ ವಾಸ್ತವ್ಯ, ಜೊತೆಗೆ ರೈತಾ ಯಾಕ ಸೋತಾ? ಮನುಷ್ಯ ಯಾಕ ಸೋತಾ? ಕನ್ನಡದ ಕಂಟಕರು ಯಾರು? ವರದಿ ರವದಿಯಾಗುವ, ಸುದ್ದಿ

ರದ್ದಿಯಾಗುವ ಹಕೀಕತ ಏನು? ಎಂತು? ಎಂದು ವಿಚಾರಿಸುವ, ವಿಶ್ಲೇಷಿಸುವ ವಿಶಿಷ್ಟ ಕವನಗಳು 'ಇದಿಷ್ಟೇ ಸತ್ಯ' ಸಂಕಲನದಲ್ಲಿವೆ.

### ಬಸವ ಪ್ರಹರ

ಬಸವಣ್ಣನವರನ್ನು ಕುರಿತು ಬರೆದಿರುವ ನೂರೊಂದು ಮುಕ್ತಕಗಳ ಸಂಕಲನ 'ಬಸವ ಪ್ರಹರ', ಮುನ್ನಡಿ, ಒಡನುಡಿ, ಬಿಡಿನುಡಿಗಳು ಸಹಿತ ನೂರಾಹತ್ತು ಪುಟಗಳು ವ್ಯಾಪಿಸಿರುವ ಈ ಪುಸ್ತಕವನ್ನು 'ಮಕ್ಕಳ ಮನೆ'ಯವರು ಪ್ರಕಟಿಸಿದ್ದಾರೆ. ೧೯೯೩ರಲ್ಲಿ ಲೋಕಸತ್ತಾ ಎಂಬ ಮರಾಠಿ ದಿನಪತ್ರಿಕೆಯಲ್ಲಿ ವಿಜಯ ತೆಂಡೂಲ್ಕರ್‌ರ ಲೇಖನಗಳು 'ರಾಮ ಪ್ರಪರ' ಹೆಸರಿನಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದವು. ಈ ಧಾರಾವಾಹಿಯ ಪ್ರೇರಣೆಯೇ 'ಬಸವ ಪ್ರಹರ'ಕ್ಕೆ ಕಾರಣವೆಂದು ರಾಮ ಜಾಧವರು ಹೇಳಿದ್ದಾರೆ.

ಬಸವಣ್ಣನವರ ಕುರಿತ ಅಧ್ಯಯನ, ಅನುಭಾವದ ಅಭಿವ್ಯಕ್ತಿಯನ್ನು ಇಲ್ಲಿಯ ಮುಕ್ತಕಗಳಲ್ಲಿ ಕಾಣುತ್ತೇವೆ. 'ಎಲ್ಲಿ ಬಸವಾ-ಅಲ್ಲಿ ಮಾನವ' ಎಂದು ಬಸವ ಶ್ರದ್ಧೆಯನ್ನು ವ್ಯಕ್ತಪಡಿಸುವ ಜಾಧವರು, ಬಸವಣ್ಣನವರನ್ನು ಜಗತ್ತಿನ ಬೇರೆ ಬೇರೆ ಚಿಂತಕರ ಜೊತೆಗೆ ಹೋಲಿಸಿ 'ಬಸವ ಭೂಮಿ' ಹೇಗೆ ವಿಶಿಷ್ಟ, ಹೇಗೆ ಜನಪರ ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ.

ಟಾಲಮಿಯ ಪೃಥ್ವಿಮಂಡಲ, ಕೋಪರ್ನಿಕಸನ ಸೂರ್ಯಮಂಡಲ ಸಿದ್ಧಾಂತಗಳು ವಿಕಾಸವಾಗಿ ಬಸವಣ್ಣನವರ ಮಾನವ ಮಂಡಳ ಸಿದ್ಧಾಂತ ರೂಪುಗೊಂಡಿರುವುದನ್ನು ಲೇಖಕರು ಗುರುತಿಸಿದ್ದಾರೆ. 'ಚೀನಾದ ಕನ್‌ಫ್ಯೂಸಿಯಸ್ ಬಿಟ್ಟರೆ ಉಳಿದೆಲ್ಲ ಧರ್ಮಗಳು ಜನ್ಮತಾಳಿದ್ದು ಅರಬಸ್ಥಾನದಲ್ಲಿ. Throat Land in Constant Conflict ಯುದ್ಧಭೂಮಿಯ ಧರ್ಮ. ಎರಡನೆಯದು ಹಿಂದುಸ್ಥಾನ A Land in Constant disagreement ಬುದ್ಧಿಭೂಮಿಯ ಧರ್ಮ. ಇವೆರಡೇ ಭೂಮಿಗಳಲ್ಲಿ ಮಾತ್ರ. ಹೀಗಾಗಿ ಜಗತ್ತಿನ ಜನ ಸಂಖ್ಯೆಯಲ್ಲಿ ಎಲ್ಲಕ್ಕೂ ಹೆಚ್ಚು ಕ್ರಿಶ್ಚಿಯನ್ನರಿದ್ದು ನಂತರ ಮುಸಲ್ಮಾನರಿದ್ದಾರೆ. ಮೂರನೆಯ ಸ್ಥಾನದಲ್ಲಿ ಹಿಂದೂಗಳಿದ್ದಾರೆ. ನಾಲ್ಕನೆಯ ಸ್ಥಾನದಲ್ಲಿ ಬೌದ್ಧರಿದ್ದಾರೆ. ಇವರೆಲ್ಲರೂ ಇತಿಹಾಸ ಮಾಡುತ್ತ ಹೊರಟರು. ಯುದ್ಧಭೂಮಿಯಾಯಿತು. ಬಲ ಪ್ರದರ್ಶಿಸಲು, ಬುದ್ಧಿ ಭೂಮಿಯಾಯಿತು. ಪಾಂಡಿತ್ಯದ ಪ್ರದರ್ಶನಕ್ಕೆ, ಇವೆರಡರಲ್ಲಿಯೂ 'ಹೃದಯ'ಕ್ಕೆ ಮಹತ್ವ ಕಡಿಮೆ ಇದ್ದುದರಿಂದ ಪ್ರತಿಯೊಬ್ಬ ಮನುಷ್ಯನನ್ನು ಬಸವಣ್ಣ 'ಹೃದಯಭೂಮಿ' (Heart Land) ಯನ್ನಾಗಿ ಮಾಡಿ, ವಿಶ್ವಮಾನವನ ಕಲ್ಪನೆಗೆ 'ಮಹಾಮನೆ'ಯನ್ನು ಜೋಡಿಸಿದನು. ವಾಯಿಟ್ ಹೆಡ್‌ರು (೧೮೬೧-೧೯೪೭) Man is Provincial in time as well as in space' ಅನ್ನುವ ವಿಧಾನವು ದುಃಖಕ್ಕೆ ಕಾರಣೀಭೂತವಾದ ಸತ್ಯ ಅಸ್ತಿತ್ವದಲ್ಲಿದ್ದರೂ "ಇದು ಬಸವಭೂಮಿ ಇದಕ್ಕಿಲ್ಲ ಸೀಮಿ' ಅನ್ನುವ 'ಮಹಾಮನೆ' ಇಡೀ ಜಗತ್ತಿನಲ್ಲಿ ಮಾನವತೆಯಿಂದ ಬಾಳುವ 'ವಿಶ್ವಮಾನವ' ತತ್ವದ ಹೃದಯಭೂಮಿ(Heart Land)ಯನ್ನು ಪ್ರತಿಯೊಬ್ಬ ವ್ಯಕ್ತಿಯಲ್ಲಿ ನಿರ್ಮಾಣ ಮಾಡಿದನು. ಇದುವೇ "Man is a Microscopic world' ಪ್ರತಿಯೊಬ್ಬ ಮನುಷ್ಯ ಚಲಿಸುವ ಜಗತ್ತು ಅಲ್ಲವೇ?

ಬಸವಣ್ಣನನ್ನು ಕುರಿತು ಜಾಧವರ ಈ ತೌಲನಿಕ ಚಿಂತನೆಯಲ್ಲಿ ಹಲವಾರು ಜನ ಪಾಶ್ಚಾತ್ಯ ಚಿಂತಕರು ಹಾದು ಹೋಗುತ್ತಾರೆ. ಡ್ಯಾನಿಷ್ ತತ್ವಜ್ಞಾನಿ ಕಿರ್ಕಿಗಾರ್ಡ್ (೧೮೧೩-೧೮೫೫) ಜರ್ಮನಿಯ ಹಸ್ರೆಲ್ ಎಂಡಡ್ (೧೮೫೯-೧೯೩೮), ಹೈಡನರ್ ಮಾರ್ಟಿನ್ (೧೮೮೯-೧೯೭೬) ಫ್ರೆಂಚ್ ವಿಜ್ಞಾನಿ ಲ್ಯಾಪಲ್ಸ್ ಪೈರ್ ಸೈಮಂಡ್ (೧೭೪೯-೧೮೨೭) ವಾಯಿಟ್ ಹೆಡ್ (೧೮೬೧-೧೯೪೭), ಜೊತೆಗೆ ಮ್ಯಾಕ್ಲಿಹಾನ್ ಹೆಗಲ್, ಕಾಂಟ್, ಕಾರ್ಲಮಾರ್ಕ್ಸ್ ಮುಂತಾದ ವಿದ್ವಾಂಸರ ತತ್ವಜ್ಞಾನವನ್ನು ಬಸವಣ್ಣನವರ ತತ್ವಜ್ಞಾನದ ಜೊತೆಗೆ ಜಾಧವರು ಹೋಲಿಸಿದ್ದಾರೆ. ಬಸವಣ್ಣನ ಸಿದ್ದಾಂತವು ಮನುಷ್ಯಕೇಂದ್ರಿತ, ಮನುಷ್ಯತ್ವ ಕೇಂದ್ರಿತಸವೆಂಬುದನ್ನು ಜಾಧವರು ಹೇಳುವರು. ಇಡೀ ಜಗತ್ತಿನಲ್ಲಿ ಅಸ್ತಿತ್ವವಾದದ ಸಂಗಡ ಮಾನವತೆಯ ಮದುವೆ ಮಾಡಿಸಿದವನು, ವಿಜ್ಞಾನಯುಗದಲ್ಲಿ ಬಸವಣ್ಣನೊಬ್ಬನೇ ಸುಜ್ಞಾನಿ' ಎಂದು ಅಭಿಪ್ರಾಯಪಡುತ್ತಾರೆ.

ಬಸವಣ್ಣನವರು ೧೨ನೇ ಶತಮಾನದಲ್ಲಿ ಆಗಿಹೋದ ಮಹಾನ್ ಕ್ರಾಂತಿಕಾರರು. ಮನುಷ್ಯನನ್ನು ಶೋಷಿಸುತ್ತಿರುವ ಜಾತಿಯನ್ನು ದೇವರು ಧರ್ಮಗಳನ್ನು, ವರ್ಗವ್ಯವಸ್ಥೆಯನ್ನು ನಿರಾಕರಿಸಿದ ಶರಣರು ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲ, ಆಚಾರವೇ ಸ್ವರ್ಗ ಅನಾಚಾರವೇ ನರಕ-ಎಂದು ಹೇಳಿದರು. ಸಕಲರಿಗೆ ಲೇಸನ್ನು ಬಯಸುವ ಸುಖೀ ಸಮಾಜದ ಪರಿಕಲ್ಪನೆಯನ್ನು ಸಾಕಾರ ಮಾಡಲು ಗುರು, ಲಿಂಗ, ಜಂಗಮ, ಕಾಯಕ, ದಾಸೋಹದ ವಿಚಾರಗಳನ್ನು ಪ್ರತಿಪಾದಿಸಿದರು. : ಅದರಂತೆಯೇ ನಡೆದರು. ಶರಣರ ನೇತಾರ ಬಸವಣ್ಣ ಒಬ್ಬ ಮಹಾನ್ ಜ್ಞಾನಿ, ಅದ್ಭುತ ವಿಜ್ಞಾನಿ, ಸಮಾಜಶಾಸ್ತ್ರಜ್ಞನೆಂಬುದನ್ನು ಜಾಧವರು ಮತ್ತೆ ಮತ್ತೆ ಪ್ರಸ್ತಾಪಿಸಿ ಬಸವಣ್ಣನ ಹಿರಿಮೆಯನ್ನು ಕೊಂಡಾಡುತ್ತಾರೆ.

ಬಸವಣ್ಣನ ನಿಯಮ
ಜೀವವಿಮಾ ನಿಗಮ

ಜನರಿಗೆ ಜೀವನದ ಭದ್ರತೆ, ಆತ್ಮಗೌರವ, ಕಾಯಕ ಸಂಸ್ಕೃತಿಯ ಮಹತ್ವವನ್ನು ತಿಳಿಸಲಿಕ್ಕೆಂದೇ 'ಅನುಭವ ಮಂಟಪ' ತಲೆಯೆತ್ತಿತು. ಜೀವನದ ಸುಖ-ದುಃಖಗಳ ಚರ್ಚೆ, ದುಃಖವನ್ನು ಪರಿಹರಿಸಿಕೊಂಡು ಸುಖವನ್ನು ಪಡೆಯುವ ಬಗೆಯನ್ನು ಇಲ್ಲಿ ಚರ್ಚಿಸಲಾಯಿತು. ಮನುಷ್ಯ ಮನುಷ್ಯರ ನಡುವಿನ ಸಂಬಂಧ, ಭಾವಭಾವಗಳ ಅನುಬಂಧ ಕುರಿತು ಇಲ್ಲಿ ಚಿಂತನ-ಮಂಥನ ನಡೆಯುತ್ತಿತ್ತು. ಬಸವ ಸಂಸ್ಕೃತಿಯಲ್ಲಿ ಅರಳಿ ಬೆಳಕು ಕಾಣಬೇಕಾದ ನಮ್ಮ ಇಂದಿನ ಬದುಕು ಬೇರೆ ದಿಕ್ಕಿನಲ್ಲಿಯೇ ಚಲಿಸುವುದನ್ನು, ಅದರ ವಿಷಯ ವ್ಯಾಸಗಳನ್ನು ಜಾಧವರು ಕಟು ಟೀಕೆಗೆ ಗುರಿಪಡಿಸುತ್ತಾರೆ. ಅಂದು ಆಗಿ ಹೋದ ಬಸವಣ್ಣ ಇಂದು ಮತ್ತೆ ಹುಟ್ಟಿ ಬರಬೇಕಾಗಿದೆ ಎಂದು 'ಬಾರಯ್ಯ ಬಾರೋ ಬಸವಣ್ಣ' ಎಂದು ಭಾವುಕರಾಗಿ ಕರೆಯುತ್ತಾರೆ. ಬಸವಣ್ಣನನ್ನು 'ವಿಶಾಲ ವಿಶ್ವದ ಸೂಕ್ಷ್ಮ ಜಗತ್ತು' ಎಂದು ಕರೆಯುತ್ತಾರೆ. 'ಆಚಾರಿ ಈಚಾರಿ ಯಾಕ ಹಿಡಿತೀರಿ ನಡುವಿನ ದಾರಿ' ಎಂದು ಇಂದಿನವರನ್ನು ಪ್ರಶ್ನಿಸುತ್ತಾರೆ.

ಜಾಧವರ ಬಸವ ಭಕ್ತಿ ಅಗಾಧ-ಅನನ್ಯ. ಅದು ಅವರ ಮುಕ್ತಕಗಳಲ್ಲಿ ವ್ಯಕ್ತವಾಗಿದೆ. ಇಲ್ಲಿಯ ಮುಕ್ತಕಗಳನ್ನು ವಚನಗಳೆನ್ನಬಹುದು. 'ವ' ಎಂದರೆ ವಚಿಸುವುದು. 'ಚ' ಎಂದರೆ ಚರ್ಚಿಸುವುದು 'ನ' ಎಂದರೆ ನಡೆಸುವುದು, ಮೂರಕ್ಷರದ ಈ ಶಬ್ದವು ವೇದಾಮೃತ ಸಾರಸತ್ವವನ್ನು, ಬದುಕುವ ಸರ್ವಶಕ್ತಿಯನ್ನು ತುಂಬಿಕೊಂಡಿದೆ ಎಂಬುದು ಜಾಧವರ ನಂಬಿಕೆ. ಶರಣರ ವಚನಗಳು ಬರಿ ಶಬ್ದಗಳಲ್ಲ, ಬರಿ ಸಾಹಿತ್ಯವಲ್ಲ ಅವು ಸಂವಿಧಾನದಂತೆ ಮನುಷ್ಯನಿಗೆ ಹಕ್ಕು ಕರ್ತವ್ಯಗಳ ಅರಿವನ್ನುಂಟು ಮಾಡುತ್ತವೆ. 'ವಚನಬದ್ಧ'ರಾಗಿ ನಡೆಯುವುದೇ ಮನುಷ್ಯಧರ್ಮ, ಜನರಿಂದ, ಜನರಿಗಾಗಿ, ಜನರಿಗೋಸ್ಕರ, ಇರುವ ವಚನಗಳು ಆಚರಣೆಯಲ್ಲಿ ಬರಬೇಕಾದುದು ಇಂದಿನ ಅಗತ್ಯವಾಗಿದೆಯೆಂದು ರಾಮು ಜಾಧವರು ಒತ್ತಿ ಹೇಳಿದ್ದಾರೆ.

ಬಸವತತ್ವಗಳು ಅವರ ಕಾಲದಲ್ಲಿಯೇ ನಡೆಯದಿರಲು, ಕಲ್ಯಾಣಕ್ರಾಂತಿಯೇ ಸಾಕ್ಷಿ. ವೈಚಾರಿಕತೆಯಿಲ್ಲದ ಮತಾಂಧ ಜನರು ಬಸವಣ್ಣನ ಮಹತ್ವ ಅರಿಯಲಿಲ್ಲ. ಇಂದು ಮನೆ ಮನೆಗಳ ಬಾಗಿಲಲ್ಲಿ ರಾರಾಜಿಸುವ ಬಸವಣ್ಣ ಕೇವಲ ಚಿತ್ರದಲ್ಲಿ ಕಾಣಬಾರದು. ಬದಲಾಗಿ ನಮ್ಮ ನಮ್ಮ ಹೃದಯದ್ವಾರ ಭೇದಿಸಿ ಒಳಹೊಕ್ಕು ಆ ಮಹಾನುಭಾವನ ಆಂತರ್ಯದ ಅರಿವನ್ನು ಅಳವಡಿಸಿಕೊಳ್ಳಬೇಕೆನ್ನುತ್ತಾರೆ.

'ವಚನಗಳಿಂದ ಕನ್ನಡ ಭಾಷೆಗೆ ಹಿರಿಮೆ ಬಂದಿತು. ವಚನಗಳ ನಾದಲಹರಿಯಿಂದ ಬಸವಣ್ಣನ ಅರ್ಥತೀರ್ಥ ಕುಡಿದವರು ಕೃತಾರ್ಥರಾದರು' ಎಂದು ಪ್ರತಿಪಾದಿಸುವ ಜಾಧವರು ಬಸವಣ್ಣನ ವ್ಯಕ್ತಿತ್ವವನ್ನು, ವಚನಗಳ ದರ್ಶನವನ್ನು ಆಡು ಮಾತಿನ ಲಯದಲ್ಲಿ ಸೊಗಸಾಗಿ ಮಂಡಿಸಿದ್ದಾರೆ. ತಾವು 'ಬಸವವಾದಿ' ಎಂಬುದನ್ನು ಪ್ರತಿಪಾದಿಸಿದ್ದಾರೆ. ತಮ್ಮದು 'ಬಸವಪಥ' ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಬಸವಣ್ಣನವರ 'ಮಹಾಮನೆ' ಸಮೃದ್ಧಿಯ ಸಂಕೇತವಾಗಿದೆ. ಅಂಥ ವ್ಯವಸ್ಥೆ ನಮಗಿಂದು ಬೇಕಾಗಿದೆಯೆಂದು ಹೇಳುವರು. ಕಾಯಕನಿಷ್ಠೆ, ಜಂಗಮ ದಾಸೋಹ ಮತ್ತು ಇಷ್ಟಲಿಂಗ ಪೂಜೆಯ ಮೂಲಕ ವರ್ತಮಾನದಲ್ಲಿ ಸಮಾನತೆ, ಸಮನ್ವಯತೆ, ಸಹೋದರತೆ, ಸಾಧಿಸಲು ಸಾಧ್ಯವೆಂಬ ನಿಲುವನ್ನು ಜಾಧವರು ಬಿಡಿನುಡಿಗಳಲ್ಲಿ ಮನೋಜ್ಞವಾಗಿ ಪ್ರಸ್ತಾಪಿಸಿದ್ದಾರೆ.

ಶರಣರ ವಚನಗಳನ್ನು ನಿರ್ವಚಿಸುವ ಜಾಧವರ ಮುಕ್ತಕಗಳು ವೈಚಾರಿಕ ರಸಗುಣದಿಂದ ಓದುಗರನ್ನು ಸೆಳೆಯುತ್ತವೆ. ಇವುಗಳ ಭಾಷೆ ಸರಳವಾದುದು. ಪ್ರಾಸಕ್ಕೆ ಒಲಿದಂಥ ಹದವಾದ ಭಾಷೆ. ಕೆಲವೊಮ್ಮೆ ಪ್ರಾಸದ ಅತಿರೇಕವೇ ತೂಕವಾಗಿ ಅರ್ಥಸ್ಫುಟತೆ ಅಷ್ಟಾಗಿ ಬಿಚ್ಚಿಕೊಳ್ಳುವುದಿಲ್ಲ. ಆದರೂ ಜಾಧವರ ಶಬ್ದಸಂಪತ್ತು ಅಗಾಧವಾದುದು. ಪ್ರಾಸಬದ್ಧ ಕಾವ್ಯಗಳಿಗೆ ಅವರು ತಡಕಾಡುವುದಿಲ್ಲ. ನಿರರ್ಗಳವಾಗಿ ಹರಿಯುವ ಭಾಷೆಯಲ್ಲಿ ಇಂಗ್ಲಿಷ್ ಮರಾಠಿ ಪದಗಳು ಯಾವ ಮುಲಾಜಿಲ್ಲದೇ ಬಳಕೆಯಾಗುತ್ತವೆ.

ಎರಡು ಕೃತಿಗಳನ್ನು ಪ್ರಕಟಿಸಿ, 'ಮಕ್ಕಳ ಮಂದಿರ' ಪತ್ರಿಕೆಯನ್ನು ಸಂಪಾದಿಸಿ ಸಾಹಿತ್ಯ ಸೇವೆಗೈದ ರಾಮು ಜಾಧವರು ಸಾಹಿತಿ, ಲೇಖಕ, ಸಂಪಾದಕನೆಂದು ಕರೆಸಿಕೊಳ್ಳಲು ಸಂಕೋಚಪಡುತ್ತಿದ್ದರು. ಇದರಿಂದ ಸಾಹಿತ್ಯದ ಮೂಲಕ ಸಿಗಬಹುದಾದ ಕೀರ್ತಿ-ಗೌರವಗಳಿಂದಲೂ ಅವರು ಗಾವುದ ದೂರ ಉಳಿದರು. ಹಾಗೆಂದೇ ಪ್ರಕಟಿತ ಕೃತಿಗಳ ಪ್ರಕಾಶಕರನ್ನು ತುಂಬು ಹೃದಯದಿಂದ ನೆನೆದಿದ್ದಾರೆ ಮತ್ತು ಕೃತಿಗಳ ಎಲ್ಲ ಶ್ರೇಯಸ್ಸನ್ನು ಅವರಿಗೇ

ಅರ್ಪಿಸಿದ್ದಾರೆ. ತಮ್ಮನ್ನು ಸಣ್ಣವರೆಂದು, ತಮ್ಮ ಸುತ್ತಲಿದ್ದವರನ್ನು ದೊಡ್ಡವರೆಂದು ಗೌರವಿಸುವುದು ಅವರ ಸ್ವಭಾವವಾಗಿತ್ತು. ಅದಕ್ಕೆ ಅವರ ಮೇಲಿನ ಬಸವ ಸಂಸ್ಕಾರವೇ ಕಾರಣವೆನ್ನಬೇಕು. ಅವರು ಬಸವಣ್ಣನನ್ನು ಬರೀ ಓದಿಕೊಂಡಿರಲಿಲ್ಲ, ತಿಳಿದುಕೊಂಡಿದ್ದರು. ಬದುಕಿನಲ್ಲಿ ಬಸವಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು.

೭

# ಕಣ್ಮರೆಯಾದ ಕನ್ನಡದ ಕೂಲಿ

ನಾವು
ಮೂರು ಮೊಳದವರು
ಮೂಗು ಮೇಲೆ ಮಾಡಿ
ಎತ್ತರದವರೆನ್ನುತ್ತೇವೆ
ಆ ಮೂರಾಳೆತ್ತರದವರು
ತಾವೆಂಥ ಚಿಕ್ಕವರೆನುತ
ಹೊರಟೇ ಹೋದರು
ಎಲ್ಲಿ ಹೋದರು?

(ಜಿನದತ್ತ ದೇಸಾಯಿ)

ವಿದ್ಯಾರ್ಥಿಯಾಗಿದ್ದಾಗಲೇ ರಾಮ ಜಾಧವರ ಮೇಲಾದ ಕನ್ನಡದ ಸಂಸ್ಕಾರವನ್ನು ಗಮನಿಸಿದ್ದೇವೆ.

'ಡೊಳ್ಳು ಬಾರಿಸಬೇಡರಿ ಸುಮ್ಮನೇ ಕನ್ನಡದ ಕೆಲಸ ಮಾಡಿರಿ' ಎಂಬುದು ಬಾಗಲಕೋಟೆಯ ಜಂಗಿನ ಮುರಗಯ್ಯನವರ ಕಾರ್ಯವೈಖರಿಯಾಗಿತ್ತು.

'ಕನ್ನಡದಲ್ಲಿ ಅಳಬೇಡರಿ ಹೊಯ್ಕೊಳ್ಳಿರಿ' ಎಂಬುದು ಮುದುವೀಡು ಕೃಷ್ಣರಾಯರ ಸಿಂಹಗರ್ಜನೆಯಾಗಿತ್ತು.

“ಆಕ್ರೋಶವು ಕರ್ಕಶವಾಗದಂತೆ ಕಿವಿಯನ್ನು ಕಣ್ಣಾಗಿ ಮಾಡುವುದು' ಬ್ರಿಟಿಷರಿಂದ ಕಲಿತ ಪಾಠವಾಗಿತ್ತು. ಈ ಮೂರು ಮಾದರಿಗಳನ್ನು ಮುಂದಿಟ್ಟುಕೊಂಡು ರಾಮ ಜಾಧವರು, ಸಾರ್ವಜನಿಕ ಕೆಲಸ, ಜನಪರ ಕೆಲಸಗಳನ್ನು ಕನ್ನಡ ಕೆಲಸಗಳನ್ನು ಮಾಡಿದರು. ಸಂಯಮದಿಂದ, ಸಮತೋಲನದಿಂದ ಒಮ್ಮೊಮ್ಮೆ ಒಂದಿಷ್ಟು ನಿಷ್ಠುರವಾಗಿ, ಕಟುವಾಗಿ, ಜೋರು ಗರ್ಜನೆಯಿಂದ-ಹೀಗೆ ಸಂದರ್ಭಾನುಸಾರವಾಗಿ ಕನ್ನಡದ ಕಾಯಕ ಮಾಡಿದ್ದುದು ಮರೆಯಲಾಗದ ಸಂಗತಿ. ಅವರ ಸಮಾಜ ಸೇವೆ, ನಾಡಸೇವೆ, ನುಡಿಸೇವೆಯನ್ನು ಸ್ಮರಿಸಿ ನಾವು ಸ್ಫೂರ್ತಿ ಪಡೆಯಬೇಕಾಗಿದೆ. ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಹಗಲಿರುಳೆನ್ನದೆ ದುಡಿದರು. ಬೆಳಗಾವಿ ಗಡಿ ಪ್ರದೇಶದಲ್ಲಿ ಮರಾಠಿ ಭಾಷೆಯ ಒತ್ತುವರಿಯಾದಾಗ ಕನ್ನಡದ ಕಲಿಯಾಗಿ, ಮರಾಠಿ ಬಾಂಧವರಿಗೆ ಕಡ್ಡಿಮುರಿದು ಕೈಯಲ್ಲಿ ಕೊಡುವಂತೆ 'ಬೆಳಗಾವಿ ಕರ್ನಾಟಕದ ಭೂಗೋಲ' ಎಂದು ಗರ್ಜಿಸಿದರು. ಕನ್ನಡಕ್ಕಾಗಿ ಕೈ ಎತ್ತು' ಎಂದು ಹೇಳುತ್ತ ತಮ್ಮ ಜೊತೆಗಿದ್ದವರ ಕೈ ಕೈ ಹಿಡಿದು ನಡೆದರು. ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪನವರಿಗೆ ಕೈ ಜೋಡಿಸಿ ಹೋರಾಡಿದರು. 'ಪಾಪು ಕನ್ನಡದ ಕಾವಲುಗಾರರಾದರೆ, ನಾನು

ಕನ್ನಡದ ಕೂಲಿ' ಎಂದು ಅಭಿಮಾನದಿಂದ ಹೇಳುತ್ತಿದ್ದ ಮಾತು ಅವರ ಕನ್ನಡ ಪ್ರೇಮಕ್ಕೆ ಕನ್ನಡಿ ಹಿಡಿಯುತ್ತದೆ. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕೆಂದು ಸರಕಾರಕ್ಕೆ ಒತ್ತಾಯಿಸಿದವರಲ್ಲಿ ಇವರೂ ಒಬ್ಬರು. ಕನ್ನಡ ಕ್ರಿಯಾ ಸಮಿತಿಯ ವೀಕ್ಷಕರಾಗಿ ಚಂಪಾ ಅವರೊಂದಿಗೆ ಓಡಾಡಿ, ವಿಶ್ವವಿದ್ಯಾಲಯ ತಲೆ ಎತ್ತುವುದಕ್ಕೆ ಶ್ರಮಿಸಿದರು. ಇನ್ನೂ ಹಲವಾರು ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ 'ಮಾಡಿದೆ'ನೆಂಬ ಅಹಂಭಾವ ಅವರ ಬಳಿ ಸುಳಿಯಲಿಲ್ಲ. ಬರೆದರೂ ಸಾಹಿತಿಯೆನಿಸಿಕೊಳ್ಳಲಿಲ್ಲ. ಹೋರಾಡಿಯೂ ಹೋರಾಟಗಾರನೆನಿಸಿಕೊಳ್ಳಲಿಲ್ಲ.

ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಮಕ್ಕಳ ಮಂದಿರ, ಕಲ್ಯಾಣ ಕೂಟ ಎಂದು ಓಡಾಡಿಕೊಂಡಿದ್ದ ಜಾಧವರಿಗೆ ೧೯೯೪ರ ವೇಳೆಗೆ ನಡೆದಾಡಲು ಕಷವಾಗತೊಡಗಿತು. ಸ್ಥೂಲ ಮೈಕಟ್ಟಿನಿಂದಾಗಿ ಮತ್ತು ವಯೋಮಾನದ ಪರಿಣಾಮದಿಂದ ಮೊಣಕಾಲು ನೋವು ಕಾಡತೊಡಗಿತು. ಅಂಥಹದರಲ್ಲಿಯೇ ಕೋಲೂರಿ ಕಷ್ಟಪಟ್ಟು ಸಭೆ ಸಮಾರಂಭಗಳಿಗೆ ಹೋಗಿ ಬರುತ್ತಿದ್ದರು. ಕನ್ನಡಪರ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದರು. ಬರುಬರುತ್ತಾ ನೋವು ಹೆಚ್ಚುತ್ತಾ ಹೋಯಿತು. ಮನೆಯಲ್ಲಿದ್ದುಕೊಂಡೇ ಪತ್ರ ಬರೆಯುವುದು, ಕಾರ್ಯಕರ್ತರ ಮೂಲಕ ಮನವಿ ಸಲ್ಲಿಸುವುದು ಇಂತಹ ಹಲವಾರು ಕೆಲಸಗಳನ್ನು ಮುಂದುವರಿಸಿದರು. ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿಯ ಚಟುವಟಿಕೆಗಳನ್ನೂ ನೋಡಿಕೊಳ್ಳುತ್ತಿದ್ದರು. ಆಗ ಅವರ ಮನೆ ಕನ್ನಡ ಚಟುವಟಿಕೆಗಳ ಕೇಂದ್ರವಾಗಿತ್ತು. ಅವರ ಮನೆಯಲ್ಲಿ ದೊಡ್ಡ ಗ್ರಂಥಾಲಯವಿತ್ತು. ಹಳೆಯ ಮೌಲಿಕ ಗ್ರಂಥಗಳು ಅವರ ಸಂಗ್ರಹದಲ್ಲಿದ್ದವು. ಅಭ್ಯಾಸಿಗಳು ಅವರ ಮನೆ ಹುಡುಕಿ ಬರುತ್ತಿದ್ದರು. ಮರಾಠಿ ಮಾತನಾಡುವ ಮನೆಯಲ್ಲಿ ಕನ್ನಡದ ಕಲರವ ಕೇಳಿ ಬರುತ್ತಿತ್ತು. ೧೯೯೫ರಲ್ಲಿ ಮುಧೋಳದಲ್ಲಿ ಜರುಗಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪಾಟೀಲ ಪುಟ್ಟಪ್ಪನವರೇ ಅಧ್ಯಕ್ಷರಾಗಬೇಕೆಂದು ಪರಿಷತ್ತಿಗೆ ಮನವಿ ಮಾಡಿಕೊಂಡರು. (೧೫-೧೨-೧೯೯೪ರಲ್ಲಿ ಬರೆದ ಈ ಮನವಿ ಪತ್ರ ಅನುಬಂಧದಲ್ಲಿದೆ) ಜಾಧವರ ಈ ಅಭಿಲಾಷೆ ನೆರವೇರಲು ಎಂಟು ವರುಷಗಳೇ ಬೇಕಾದವು. ೨೦೦೩ರಲ್ಲಿ ಪಾಟೀಲ ಪುಟ್ಟಪ್ಪನವರು ಬೆಳಗಾವಿಯಲ್ಲಿ ಜರುಗಿದ ೭೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಆದರೇನು ಆ ಸಂಭ್ರಮವನ್ನು ನೋಡುವ ಭಾಗ್ಯ ಜಾಧವರಿಗಿರಲಿಲ್ಲ.

ಪಾಟೀಲ ಪುಟ್ಟಪ್ಪನವರೆಂದರೆ ಜಾಧವರಿಗೆ ಎಲ್ಲಿಲ್ಲದ ಪ್ರೀತಿ, ಅಭಿಮಾನ, ಅವರಿಬ್ಬರ ಗೆಳೆತನ ತುಂಬಾ ಅನ್ಯೋನ್ಯವಾಗಿತ್ತು. ನಿವೃತ್ತರಾಗಿ ಬಂದ ಮೇಲಂತೂ ಅದು ಇನ್ನಷ್ಟು ನಿಕಟವಾಯಿತು. ಜಾಧವರ ಕೊನೆಯ ಉಸಿರಿನವರೆಗೂ ಅದು ಹಾಗೆಯೇ ಮುಂದುವರೆಯಿತು. ೮ನೇ ಜನೇವರಿ ೧೯೯೭ರ ರಂದು ಪಾಪು ದಂಪತಿಗಳಿಗೆ ಧಾರವಾಡದ ಮಾನವಿ ಕುಟುಂಬದವರಿಂದ ಊಟದ ಆಮಂತ್ರಣವಿತ್ತು. ಈ ವಿಷಯ ಜಾಧವರಿಗೂ ಗೊತ್ತಿತ್ತು. ಜಾಧವರು ಮಾನವಿಯವರ ಮನೆಗೆ ಫೋನು ಮಾಡಿ ವಿಚಾರಿಸಲು ಅವರ ಮನೆಯಲ್ಲಿ ಏನೋ ಅವಘಡ ಘಟಿಸಿದ್ದು ತಿಳಿಯಿತು. ಕೂಡಲೇ ಜಾಧವರು ಪಾಪು ಅವರನ್ನು ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಕೇಳಿಕೊಂಡರು. ಪತ್ನಿ ಪದ್ಮಾಳಿಗೆ ಅಡುಗೆ ಮಾಡಲು ಹೇಳಿದರು. ಪಾಪು ದಂಪತಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡು ಭರ್ಜರಿ

ಊಟ ಮಾಡಿಸಿದರು. ಅಂದು ರಾಮ ಜಾಧವರು ಮತ್ತು ಪಾಪು ತುಂಬ ಹೊತ್ತು ಹರಟೆ ಹೊಡೆದರು. ಕನ್ನಡದ ಕಾರ್ಯಗಳ ಬಗೆಗೆ ಚರ್ಚೆ ಮಾಡಿದರು. ರಾತ್ರಿ ೧೧-೧೨ ಗಂಟೆಗೆ ಪಾಪು ಹುಬ್ಬಳ್ಳಿಗೆ ಹೊರಡಲು ಸಿದ್ಧರಾದರು. ಜಾಧವರು ದಿಲ್ಲಿಯಿಂದ ತಂದಿದ್ದ ಎರಡು ಶಿಲ್ಕ ಶರ್ಟಗಳಲ್ಲಿ ಒಂದನ್ನು ಪಾಪು ಅವರಿಗೆ ಕೊಟ್ಟರು. 'ಒಂದು ನನಗೆ ಒಂದು ನಿನಗೆ' ಎಂದು ನಕ್ಕು ನುಡಿದರು. ಪಾಪು ದಂಪತಿಗಳನ್ನು ಬೀಳ್ಕೊಡುವಾಗ ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಒಂದು ಪುಸ್ತಕ ಬರೆಯಬೇಕೆಂದು ಹೇಳಿದರು. ಪಾಪು ಅವರು 'ಆಗಲಿ' ಎಂದು ಕೈಕುಲುಕಿ ಕಾರು ಹತ್ತಿದರು.

ಮರುದಿನ ೯-೧-೧೯೯೭ ಬೆಳಗಿನ ೭ ಗಂಟೆಗೆ ನಂಬಲಾಗದ ಸುದ್ದಿಯೊಂದು ಪಾಪು ಅವರಿಗೆ ಕಾದಿತ್ತು. ಆ ಸುದ್ದಿಯೆಂದರೆ, ರಾಮ ಜಾಧವರು ನಿಧನರಾದರು ಎಂಬುದು. ಹಿಂದಿನ ರಾತ್ರಿ ಅವರೊಂದಿಗೆ ಹರಟೆ ಹೊಡೆದು ತುಂಬ ಹೊತ್ತು ಅವರ ಜೊತೆಗೆ ಇದ್ದು ಬಂದ ಪಾಪು ಅವರಿಗೆ ಆ ಸುದ್ದಿ ನಂಬುವದಾದರೂ ಹೇಗೆ? ಅದು ಎಂಥ ಭೀಕರ ಸುದ್ದಿ ಎಂದು ಪಾಪು ಆ ಸಂದರ್ಭ ನೆನಪಿಸಿಕೊಂಡು ಭಾವುಕರಾಗುತ್ತಾರೆ. ಆಗ ಅವರ ಕಣ್ಣುಗಳಲ್ಲಿ ನೀರು ತುಳುಕಾಡುತ್ತದೆ. ಅಂದು ರಾಮ ಜಾಧವರು ಹೃದಯಾಘಾತದಿಂದ ಜೀವ ಬಿಟ್ಟಿದ್ದರು. ಅವರ ನಿಧನದ ಸುದ್ದಿ ಕೇಳಿ ಕನ್ನಡಿಗರ ಹೃದಯ ಹಿಂಡಿದಂತಾಯಿತು. ಧಾರವಾಡದ ಸಾಹಿತಿ ಕಲಾವಿದರಿಗಂತೂ ದೊಡ್ಡ ಆಘಾತವಾಯಿತು. ಜಾಧವ ಅಜ್ಜನನ್ನು ಕಳೆದುಕೊಂಡು ಅವರು ಮಮ್ಮಲನೆ ಮರುಗಿದರು. ಇನ್ನು ಅವರ ಕುಟುಂಬದವರ ಸ್ಥಿತಿಯಂತೂ ಹೇಳತೀರದು. ಪತ್ನಿ ಪದ್ಮಾವತಿಯವರಿಗೆ ಮುಗಿಲು ಹರಿದು ಮೈಮೇಲೆ ಬಿದ್ದಂತಾಯಿತು.

ಜಾಧವರೇ ಸ್ಥಾಪಿಸಿದ್ದ 'ಮಕ್ಕಳ ಮನೆ' ಮಾಸಪತ್ರಿಕೆ 'ಮಕ್ಕಳ ಮಂದಿರ'ದ ಸಂಚಿಕೆಯನ್ನು ಅವರ ಸ್ಮರಣೆಗೆ ಸಮರ್ಪಿಸಲಾಯಿತು. (೧೦ ಫೆಬ್ರುವರಿ ೧೯೯೭ ರ ಸಂಚಿಕೆ) ಅದರಲ್ಲಿ ಪ್ರಕಟವಾದ ಕೆಲವು ಶ್ರದ್ಧಾಂಜಲಿ ನುಡಿಗಳು ಇಲ್ಲಿವೆ.

'ರಾಮ ಜಾಧವ ನನ್ನ ಆತ್ಮೀಯ ಸ್ನೇಹಿತ. ಕಳೆದ ನಾಲ್ಕಾರು ದಶಕಗಳಿಂದಲೂ ಒಬ್ಬರನ್ನೊಬ್ಬರು ಅಗಲಿ ಇರದಂತಹ ಗಾಢವಾದ ಆತ್ಮೀಯತೆ ನಮ್ಮಲ್ಲಿತ್ತು. ನಿಜವಾಗಿ ಹೇಳಬೇಕೆಂದರೆ ಸಹಸ್ರ ವರುಷಗಳುಗೊಮ್ಮೆ ಹುಟ್ಟು ಬರುವಂಥ ಲಕ್ಷಾಂತರ ಮಂದಿಯಲ್ಲಿ ಒಬ್ಬರಂತೆ ಇರುವ ಅಪರೂಪದ ವ್ಯಕ್ತಿ. ಇನ್ನೊಂದು ರೀತಿಯಿಂದ ಹೇಳಬೇಕೆಂದರೆ ಅವರು ನನ್ನ ಬೆನ್ನೆಲುಬೇ ಆಗಿದ್ದರು. ನನ್ನನ್ನು ಏಕವಚನದಿಂದ ಕರೆದು ಆತ್ಮೀಯತೆಯಿಂದ ಅಪ್ಪಿಕೊಳ್ಳುವ ಸ್ನೇಹಿತನನ್ನು ಕಳೆದುಕೊಂಡು ಇಂದು ಅಭಾಗಿಯಾಗಿದ್ದೇನೆ.'

**ನಾಡೋಜ ಡಾ. ಪಾಟೀಲ ಪುಟ್ಟಪ್ಪ**

'ರಾಮ ಜಾಧವ ಅವರು ಅದ್ವಿತೀಯ ವ್ಯಕ್ತಿ, ಧರ್ಮ, ಸಾಹಿತ್ಯ, ಸಂಸ್ಕೃತಿಯ ಸಾಕಾರ ರೂಪದಲ್ಲಿದ್ದರು. ರಾಜಕೀಯ, ಸಾಮಾಜಿಕ ರಂಗದಲ್ಲಿಯೂ ಆದರ್ಶಪ್ರಾಯರಾಗಿದ್ದರು. ಮಿಗಿಲಾದ ಬಸವಾಭಿಮಾನಿ. ಒಂದರ್ಥದಲ್ಲಿ ಅವರು ನನ್ನ ರಾಜಕೀಯ ಗುರುವಾಗಿದ್ದರಲ್ಲದೆ ಮಾರ್ಗದರ್ಶಕರಾಗಿದ್ದರು.

**ಚಂದ್ರಕಾಂತ ಬೆಲ್ಲದ ಶಾಸಕರು, ಧಾರವಾಡ**

'ರಾಮ ಜಾಧವ ನನ್ನ ಪರಮ ಮಿತ್ರ, ಒಡನಾಡಿ, ಪ್ರಕಾಂಡ ಪಂಡಿತ, ಬಸವಣ್ಣನವರ ಬಗ್ಗೆ ಅವರು ಬಹಳಷ್ಟು ತಿಳಿದುಕೊಂಡಿದ್ದರು. ದಿನಾಲೂ ನಾನು ಅವರು ಒಂದಿಲ್ಲೊಂದು ರೀತಿಯಿಂದ ಭೇಟಿಯಾಗುತ್ತಿದ್ದು, ನಿನ್ನೆ ಮುಂಜಾನೆ ಅವರನ್ನು ಕಂಡಾಗ ನಾಳೆ ಮಧ್ಯಾಹ್ನ ೩ ಗಂಟೆಗೆ ಬನ್ನಿ ಮಾತಾಡೋಣ ಎಂದಿದ್ದರು. ಅಂದು ಮಧ್ಯಾಹ್ನ ಅವರ ಮನೆಗೆ ಬರಬೇಕೆನ್ನುವಾಗಲೇ ಅವರು ಹಿಂದಿರುಗಿ ಬಾರದ ಹಾದಿ ಹಿಡಿದು ಹೋಗಿ ಬಿಟ್ಟರು. ಈ ನೋವನ್ನು ನಾನು ಎಂದೆಂದೂ ಮರೆಯಲಾರೆ.

**ಡಾ. ಆರ್. ಸಿ. ಹಿರೇಮಠ**

ವಿಶ್ರಾಂತ ಕುಲಪತಿಗಳು, ಧಾರವಾಡ

"ಅವರು ಬಾಳ ಚೆಲೋ ಮನಿಷ್ಯಾರು ಆಗಿದ್ರು, ಅವರಂಥಾ ವಿದ್ವಾನರನ್ನು ಪುನಹಾ ಕಾಣೋದು ಅಪರೂಪ. ನಮಗೆಲ್ಲಾ ಅವರು ಮಾರ್ಗದರ್ಶಕರಾಗಿದ್ರು, ಬಾಳಷ್ಟು ತಿಳಿಕೊಂಡಿದ್ರು. ಯುಗಕ್ಕೊಮ್ಮೆ ಹುಟ್ಟೋವಂತಾ ಪಂಡಿತರು. ಮಕ್ಕಳ ಮನೆ, ಮಕ್ಕಳ ಮಂದಿರದ ಕೆಲಸದಾಗ ಭಾಳ ಆಸಕ್ತಿ ಹೊಂದಿದ್ರು, ಅವರ ನಿಧನದಿಂದ ನಮಗೆ ಸಹಿಸಿಕೊಳ್ಳಲು ಆಗದಷ್ಟು ದುಃಖ ಆಗೇತಿ. ಅವರು ತೋರಿಸಿದ ಮಾರ್ಗದಾಗ ನಡ್ಯೋದು ನಮ್ಮ ಕರ್ತವ್ಯ. ಪರಮಾತ್ಮ ಅವರ ಆತ್ಮಕ್ಕೆ ಚಿರಶಾಂತಿ ಕೊಡಲಿ ಅಂತ ಪ್ರಾರ್ಥಿಸತೇವಿ.'

**ಜಿ.ಜಿ, ದೊಡವಾಡ**

ಅಧ್ಯಕ್ಷರು ಮಕ್ಕಳ ಮನೆ ಧಾರವಾಡ

'ರಾಮ ಜಾಧವ ನಿಧನದ ವಾರ್ತೆ ತಿಳಿದು ಅತ್ಯಂತ ವಿಷಾದವಾಯ್ತು. ಈ ತಿಂಗಳ ಕೊನೆಯ ವಾರದಲ್ಲಿ ನನ್ನ ಪುಸ್ತಕದ ಬಿಡುಗಡೆಯನ್ನು ಅವರಿಂದ ಮಾಡಿಸಬೇಕೆಂದು ವಿಚಾರವಿತ್ತು. ಆದರೇನು ಭಗವಂತನ ಇಚ್ಛೆ ಇರಲಿಲ್ಲ. ಇದರಿಂದ ನನಗೆ ದುಃಖ ಹಾಗೂ ಹಳಹಳಿಯಾಗಿದೆ.

**ಹ.ಗ. ಜೋಶಿ**

**ನಿವೃತ್ತ ಟಿ.ಸಿ.ಎಂ.ದ ಪ್ರಾಚಾರ್ಯರು**

ಹಿರಿಯಣ್ಣ ರಾಮ ಜಾಧವ ಅವರು ನಾಡಿನ ಅದರಲ್ಲಿಯೂ ಧಾರವಾಡ ಸಾಂಸ್ಕೃತಿಕ ರಂಗಕ್ಕೆ ಜೀವನಾಡಿಯಾಗಿದ್ದರು. ಕನ್ನಡ ನಾಡು ನುಡಿಯ ಬಗ್ಗೆ ಅವರ ಅಭಿಮಾನ ಅಪಾರ. ಕನ್ನಡಕ್ಕಾಗಲಿ, ಕನ್ನಡಿಗರಿಗಾಗಲಿ ಯಾವುದೇ ಅನ್ಯಾಯವಾದಾಗ ಅದನ್ನು ಪ್ರತಿಭಟಿಸಲು ಅವರು ಸದಾ ಸಿದ್ಧ. ಕನ್ನಡ ನಾಡು ನುಡಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಅವರಿಗಿದ್ದ ಕಳಕಳಿ ಹಾಗೂ ಅಭ್ಯಾಸಪೂರ್ಣ ಪರಿಜ್ಞಾನ ಬೆರಗುಗೊಳಿಸುವಂತಹದ್ದಾಗಿತ್ತು. ಅವುಗಳ ಬಗ್ಗೆ ಹೋರಾಟಗಳಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದ ಅವರು ಕಿರಿಯರಿಗೆ, ಯುವಕರಿಗೆ ಮಾರ್ಗದರ್ಶಿಯಾಗಿದ್ದರು. ಆದರೂ ಅವರು ತಮ್ಮನ್ನು 'ಕನ್ನಡದ ಕೂಲಿ' ಎಂದೇ ಕರೆದುಕೊಳ್ಳುತ್ತಿದ್ದರು. ಅವರ ಅಗಲುವಿಕೆ ಸಮಾಜದ ದುರ್ದೈವ. ಸಹೃದಯ, ಗುಣಗ್ರಾಹಿ, ಸ್ನೇಹಜೀವಿ, ಚಿಂತನಶೀಲ, ಪ್ರೇಮಮುಖಿ, ಸಮಾಜ ಕಲ್ಯಾಣದ ಬಗ್ಗೆ ಅಪಾರ ಕಳಕಳಿಯುಳ್ಳ ಈ ಅಪರೂಪದ ವ್ಯಕ್ತಿ ಎಲ್ಲರ ಅಚ್ಚುಮೆಚ್ಚಿನವರಾಗಿದ್ದರು. ನಾಡಿನಾದ್ಯಂತ ಅವರ ಸ್ನೇಹಿತರ ಅಭಿಮಾನಿಗಳ ಬಳಗ ಹಬ್ಬಿತ್ತು. ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡ ಕವಿ, ಸಾಹಿತಿ ಆಗಿದ್ದ ಅವರು ಬಸವಣ್ಣನವರ ತತ್ವಗಳಲ್ಲಿ ಶ್ರದ್ಧೆ, ನಿಷ್ಠೆ

ಉಳ್ಳವರಾಗಿದ್ದರು. ಹಿರಿಯಣ್ಣನಂತಿದ್ದ ಅವರ ಅಗಲುವಿಕೆಯ ವೇದನೆಯಿಂದ ನಾವಿನ್ನೂ ಚೇತರಿಸಿಕೊಳ್ಳಬೇಕಾಗಿದೆ.

**ಸದಾಶಿವ ಒಡೆಯರ**

ವಿಶ್ರಾಂತ ಕುಲಪತಿಗಳು, ಧಾರವಾಡ

ಆತ್ಮೀಯತೆಯ ಸಾಕಾರಮೂರ್ತಿ, ಕನ್ನಡ ಸಾಹಿತ್ಯ ಸಂಸ್ಕೃತಿಗಳ ದಿಗ್ಗಜ. ಸಹೃದಯ ಕವಿ. ಅವರ ಪ್ರಾಸಬದ್ಧವಾದ ಮಾತುಗಳಿಗೆ, ಕಾವ್ಯದ ರೂಪ ಅವರದೇ ಆದ ವೈಶಿಷ್ಟ್ಯವಾಗಿತ್ತು. ಮೇಲಿಂದ ಮೇಲೆ ಅವರನ್ನು ಕಾಣಬೇಕೆಂಬ ಆತುರತೆ ನನ್ನಲ್ಲಿ ಸದಾ ಇರುತ್ತಿತ್ತು. ಅವರ ಅಗಲಿಕೆ ಸಹಿಸಲಸಾಧ್ಯವಾದುದು.

**ಡಾ. ಎಸ್. ಶೆಟ್ಟರ**

**ನಿವೃತ್ತ ಇತಿಹಾಸ ಪ್ರಾಧ್ಯಾಪಕರು ಧಾರವಾಡ**

ಇನ್ನೂ ಅನೇಕ ಜನ ಒಡನಾಡಿಗಳು ಅಭಿಮಾನಿಗಳು ಅವರ ಮರಣ ವಾರ್ತೆ ಕೇಳಿ ಕಂಬನಿಯ ಕೋಡಿಯನ್ನು ಹರಿಸಿದರು. ಗಂಡನನ್ನು ಕಳೆದುಕೊಂಡ ಪದ್ಮಕ್ಕಳಿಗೆ ಸಾಂತ್ವನ ಹೇಳಿರುವರು.

ಧಾರವಾಡದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಪಾಟೀಲ ಪುಟ್ಟಪ್ಪನವರು ಜಾಧವರ ಸ್ಮಾರಕವಾಗಿ ದತ್ತಿನಿಧಿಯನ್ನು ಸ್ಥಾಪಿಸಬೇಕೆಂದು ಪ್ರಸ್ತಾಪ ಮಾಡಿದರು. ಕೇವಲ ೫-೧೦ ನಿಮಿಷಗಳಲ್ಲಿ ಸುಮಾರು ೫೦ ಸಾವಿರ ರೂಪಾಯಿಗಳಷ್ಟು ವಾಗ್ದಾನವಾಯಿತು. ಪಾಪು ಅವರು ೫೦೦೧ ರೂಪಾಯಿಗಳನ್ನು ನೀಡಿದರು. ಆಗಲೇ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ 'ರಾಮಜಾಧವ ಸ್ಮಾರಕ ದತ್ತಿ ನಿಧಿ'ಯನ್ನು ಸ್ಥಾಪಿಸಲಾಯಿತು. ಹೀಗೆ ರಾಮ ಜಾಧವರ ನೆನಪನ್ನು ಉಳಿಸಿಕೊಳ್ಳಲು ಅವರ ಹೋರಾಟವನ್ನು ಸ್ಫೂರ್ತಿಯಾಗಿಸಿಕೊಳ್ಳಲು ಧಾರವಾಡ ಜನರು ಮುಂದಾದದ್ದು ಅವಿಸ್ಮರಣೀಯ. ಮಹಾನಗರ ಸಭೆಯು ಧಾರವಾಡ ಕೇಂದ್ರ ಬಸ್ ನಿಲ್ದಾಣದ ಎದುರಿಗಿನ ರಸ್ತೆಗೆ 'ರಾಮ ಜಾಧವ'ರ ಹೆಸರಿಟ್ಟು ಅವರಿಗೆ ಕೃತಜ್ಞತೆ ಸಲ್ಲಿಸಿತು. ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ರಾಮ ಜಾಧವರ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನು ಇದೆ. ಕನ್ನಡನಾಡು ನುಡಿಯ ಹಿನ್ನೆಲೆಯಲ್ಲಿ ರಚನೆಯಾದ ಅತ್ಯುತ್ತಮ ಪುಸ್ತಕಕ್ಕೆ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದೆ. ಪ್ರತಿವರ್ಷ ರಾಮ ಜಾಧವರ ಪುಣ್ಯದಿನದಂದು ಈ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಏರ್ಪಡಿಸಲಾಗುತ್ತದೆ.

**ಚಿಂಚಣಿಯ** ಸಿದ್ಧಸಂಸ್ಥಾನಮಠದ **'ಕನ್ನಡ ಜಾಗೃತಿ ಪುಸ್ತಕ ಮಾಲೆ'ಯಲ್ಲಿ** ಪ್ರಕಟವಾದ ಹಲವಾರು ಕೃತಿಗಳಿಗೆ 'ರಾಮ ಜಾಧವ ಪ್ರಶಸ್ತಿ' ಗೌರವ ಸಂದಿರುವುದು ಇಲ್ಲಿ ಗಮನಿಸಬೇಕಾದ ಅಂಶ. 'ಕನ್ನಡದ ಕೂಲಿ' ರಾಮ ಜಾಧವ, ಮರಣದ ನಂತರವೂ ಕನ್ನಡ ಚಟುವಟಿಕೆಗಳಿಗೆ ಸ್ಫೂರ್ತಿಯಾಗಿ ಉಳಿದರು.

ರಾಮ ಜಾಧವ ಚಿಕ್ಕವರೊಂದಿಗೆ ಚಿಕ್ಕವರಾಗಿ, ಗಣ್ಯರೊಂದಿಗೆ ಗಣ್ಯರಾಗಿ, ಸಾಹಿತಿಗಳೊಂದಿಗೆ ಸಾಹಿತಿಗಳಾಗಿ ಸಮಾಜಕ್ಕಾಗಿ, ಕನ್ನಡ ನಾಡು ನುಡಿಗಾಗಿ ಮಾಡಿದ ಹೋರಾಟ ಅವಿಸ್ಮರಣೀಯ. ಅವರ ಹೋರಾಟದ ಬದುಕಂತೂ ಅನುಕರಣೀಯ.

## ಜಾಧವ 'ಅಜ್ಜ' : ಒಂದು ಚಿತ್ರ

೧೯೮೨ ಗೋಕಾಕ ಚಳುವಳಿಯ ಮುಖ್ಯ ಯುದ್ಧಭೂಮಿಯಾಗಿ ಧಾರವಾಡದ ವಿದ್ಯಾವರ್ಧಕ ಸಂಘ ಸದಾ ಗಿಜಿಗಿಜಿ ಅನ್ನುತ್ತಿದ್ದ ಕೋಲಾಹಲದ ಕಾಲ. ಹಿರಿಯರು ಕಿರಿಯರು ಕೂಡಿ ಸಮಾಲೋಚನೆ ಮಾಡುವುದು, ಸಭೆ ಏರ್ಪಡಿಸುವುದು, ಉಪವಾಸ ಕೂಡುವುದು, ಘೋಷಣೆ ಕೂಗುವುದು, ಮೆರವಣಿಗೆ ತೆಗೆಯುವುದು...ಹೀಗೆ ನೂರೆಂಟು ರೀತಿಯಲ್ಲಿ ಸಮಷ್ಟಿ ಕನ್ನಡದ ಕ್ರಿಯಾಶಕ್ತಿ ಎಲ್ಲಿಲ್ಲದ ಉಮೇದಿನಿಂದ ಮೆರೆಯುತ್ತಿದ್ದ ಸಂದರ್ಭ.

ಆ ದಿನಗಳಲ್ಲಿ ಚಳುವಳಿಯ ಮುಂಚೂಣಿ ನಾಯಕರಲ್ಲಿ ಒಬ್ಬರಾದ ಪಾಟೀಲ ಪುಟ್ಟಪ್ಪನವರೊಂದಿಗೆ ಒಮ್ಮೊಮ್ಮೆ ಸ್ಥೂಲಕಾಯದ ಹಿರಿಯರೊಬ್ಬರು ಬರುತ್ತಿದ್ದರು. ಚಿಕ್ಕವರಾದ ನಮಗೆಲ್ಲ ಅವರು ಹೊಸಬರೇ ಅನ್ನಿಸುತ್ತಿದ್ದರೂ ಹಿರಿಯರಿಗೆಲ್ಲ ಬಹಳ ಹತ್ತಿರದವರೇ ಆಗಿದ್ದಂತೆ ಅವರೆಲ್ಲರ ವರ್ತನೆಯಿಂದ ನಮಗೆ ತೋರುತ್ತಿತ್ತು. 'ಬರ್‍ರೀ ಜಾಧವ ಅಂತ' ಪಾಪು ಅವರು ತಮ್ಮ ಶೈಲಿಯಲ್ಲಿ ಇವರನ್ನು ಕರೆಯುತ್ತಿದ್ದರು. ಜಾಧವ ಅವರು ಆಲೋಚನೆಯಲ್ಲಿ ಅಷ್ಟಿಷ್ಟು ಭಾಗವಹಿಸಿ, ವಾಕಿಂಗ್ ಸ್ಟಿಕ್ ಮೇಲೆ ಕೈಯೂರಿ ಕುಳಿತು ಎಲ್ಲವನ್ನೂ ತಮ್ಮ ಕಣಲ್ಲಿ ಮೌನವಾಗಿ ತುಂಬಿಕೊಳ್ಳುತ್ತ, ಆಗೀಗ ನಮ್ಮಂಥ ಎಳೆಯರ ಕೈಕಲುಕಿ 'ಶಾಭಾಶ' ಎಂದು ಹೇಳಿ, ಮತ್ತೆ ಪಾಪು ಅವರ ಕಾರಿನಲ್ಲಿ ಮಾಯವಾಗುತ್ತಿದ್ದರು.

ಮುಂದೆ ಕೆಲವೇ ವರ್ಷಗಳಲ್ಲಿ ಕನ್ನಡ ಚಳುವಳಿಯ ಪರೀಷದ ಮೇಲೆ ನೆರಳಿನಂತೆ ಸುತ್ತಾಡುತ್ತಿದ್ದ ರಾಮ ಜಾಧವರು ಆ ಚಳುವಳಿಯ ಕೇಂದ್ರಬಿಂದುವಾಗಿದ್ದು ನಾನು ನನ್ನ ಕಣ್ಣೆದುರೇ ಕಂಡ ಪವಾಡ. ಅ.ಕ.ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದ ಶಂಬಾಜೋಶಿಯವರು ಅನಾರೋಗ್ಯದಿಂದಾಗಿ ಸಂಘಟನೆಯಿಂದ ಅಲಿಪ್ತರಾದರು. ಪಾಪು ಅವರು ಏನೇನೋ ಒತ್ತಡಗಳಿಂದಾಗಿ ದೂರ ಉಳಿದರು. ಅನಂತರ ಅಧ್ಯಕ್ಷ ಪದವಿ ಅಲಂಕರಿಸಿದ ಚೆನ್ನವೀರ ಕಣವಿಯವರೂ ಕೂಡ ಮತ್ತೊಂದು ಸಂಘಟನೆಯ ಅಧ್ಯಕ್ಷತೆಯ ಗೌರವಕ್ಕೆ ಮಾರು ಹೋದರು. ಜಾಧವರು ಈಗ ಮಾತ್ರ ಇಡೀ ಸಂಘಟನೆಯ ಚುಕ್ಕಾಣಿ ಹಿಡಿಯಲೇಬೇಕಾಯಿತು. ತಮ್ಮ ಸರ್ವಶಕ್ತಿಯನ್ನೂ ಸಂಘಟನೆಗೆ ಧಾರೆ ಎರೆಯುತ್ತಿರುವ ಈ ಹಿರಿಯರು ಕನ್ನಡದ ಹೋರಾಟ'ವನ್ನು ಒಂದು ಬಂಡವಲನ್ನಾಗಿ ಮಾಡಿಕೊಂಡು ಸರಕಾರದಲ್ಲಿ ಸ್ಥಾನ ಗಿಟ್ಟಿಸಲು ಬಯಸಿದವರಲ್ಲ; ಪತ್ರಿಕೆಗಳಲ್ಲಿ ಪ್ರಸಿದ್ಧಿ ಗಳಿಸಲು ಹಾತೊರೆಯದವರಲ್ಲ. ಜಾಧವರ ಕಾರ್ಯಕ್ಷೇತ್ರ ಕೇವಲ ಕನ್ನಡ ಕ್ರಿಯಾಸಮಿತಿಯೊಂದೇ ಅಲ್ಲ; ಮಕ್ಕಳ ಮನೆ, ಕಲ್ಯಾಣಕೂಟ, ಬಂಗಾರ ಬಳಗ, ಜಾಗೃತ ನಾಗರಿಕ ಮಂಡಳ, ಹಿಂದುಳಿದವರ-ಅಲ್ಪಸಂಖ್ಯಾತರ-ದಲಿತರ ಜಂಟಿ ಕ್ರಿಯಾ ವೇದಿಕೆ. ಕೋಮು ಸೌಹಾರ್ದತಾ ಸಮಿತಿ...ಹೀಗೆ ಅನೇಕ ವಲಯಗಳಲ್ಲಿ ಅಧ್ಯಕ್ಷರಾಗಿಯೋ,

ಸಲಹೆಗಾರರಾಗಿಯೋ, ಕಾರ್ಯಕರ್ತರಾಗಿಯೋ ಇರುವ ಇವರು ಈಗ ಧಾರವಾಡ ಯುವಪೀಳಿಗೆಯ ಚೇತನಗಳಿಗೆಲ್ಲ 'ಅಜ್ಜಿ' ಪ್ರೀತಿಯ 'ಜಾಧವ ಅಜ್ಜ'.

ಆಕಾಶವಾಣಿ ಕೇಂದ್ರದ ಹಿಂಬದಿಯಿಂದ ವಿಶ್ವವಿದ್ಯಾಲಯಕ್ಕೆ ಹೋಗುವ ಹಳಿಯಾಳ ರೋಡಿನ ಒಂದು ಕ್ರಾಸಿನಲ್ಲಿರುವ ಜಾಧವರ ಮನೆಯ ಹೆಸರು 'ರಾಘವೇಂದ್ರ ಕೃಪಾ' ಮನೆಯ ಹೊಸ್ತಿಲು ದಾಟಿದರೆ ಗೋಡೆಯ ಮೇಲೆ ಛತ್ರಪತಿ ಶಿವಾಜಿ ಮಹಾರಾಜನ ಒಂದು ಫೋಟೋ, ದೆವ್ವನಾಕಾರದ ಎರಡು ದೊಡ್ಡ ಕ್ರಾಸ್ ಬ್ರೀಡಿನ ನಾಯಿಗಳು ನಿಮಗೆದುರಾಗುತ್ತವೆ. (ಮರಾಠಿ ಮನೆತಮಾತಿನ ಜಾಧವರು ಹೇಳುತ್ತಾರೆ: "ನಮ್ಮ ಮನ್ಯಾಗಿನ ನಾಯಿ ಸೈತ ಮರಾಠಿ ಮಾತಾಡ್ತಾವು!) ಜಾಧವರ ಮಡದಿ ಪದ್ಮಾತಾಯಿ ಕೂಡ ಮರಾಠಿ ಘಾಟಿನ ಕನ್ನಡದಲ್ಲಿ ನಿಮ್ಮ ಕ್ಷೇಮ ಸಮಾಚಾರ ವಿಚಾರಿಸುತ್ತಾರೆ.

ಗೊತ್ತಿಲ್ಲದ ಬಹಳ ಜನರಿಗೆ ಆಶ್ಚರ್ಯವಾಗುತ್ತದೆ: 'ಮರಾಠಿ' ಹಿನ್ನೆಲೆಯ ಈ ವ್ಯಕ್ತಿ ಹೇಗೆ ಕನ್ನಡ ಕ್ರಿಯಾ ಸಮಿತಿಯ ಅಧ್ಯಕ್ಷನಾಗಿರಲು ಸಾಧ್ಯ? ಅಲ್ಲೇ ಇದೆ ಗಮ್ಮತ್ತು. ಜಾಧವರು ಹುಟ್ಟಿದ್ದು ಧಾರವಾಡ ಜಿಲ್ಲೆಯ ಕರ್ಕಿಕಟ್ಟಿ (೧೭-೨-೧೯೧೯). ಪ್ರಾರಂಭದ ಶಿಕ್ಷಣ ಕಟಗೇರಿ, ಬಿಜಾಪುರ, ಬಾಗಲಕೋಟಗಳಲ್ಲಿ. ಉಚ್ಚ ಶಿಕ್ಷಣ ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ. ಅಲ್ಲಿ ಕನ್ನಡದಲ್ಲಿ ಬಿ.ಎ. (ಆನರ್ಸ್), ಅದರಲ್ಲಿ ಇವರು ಎರಡನೆಯವರು; ಮರಾಠಾ ಸಮಾಜದಲ್ಲಿಯೇ ಮೊದಲಿಗರು!

ಹೈಸ್ಕೂಲು ವಿದ್ಯಾರ್ಥಿಯಾದಾಗಿನಿಂದಲೇ ಕನ್ನಡ ಚಳುವಳಿಯಲ್ಲಿ ಸಕ್ರಿಯ ಆಸಕ್ತಿ ತಾಳಿದ ರಾಮ ಜಾಧವರು ಆಗ ಮನಸ್ಸು ಮಾಡಿದ್ದರೆ, ಈಗ ಕರ್ನಾಟಕದ ವಿಶ್ವವಿದ್ಯಾಲಯವೊಂದರ ಕನ್ನಡ ಪ್ರೊಫೆಸರ್ ಆಗಿಯೋ ಕುಲಪತಿಯಾಗಿಯೋ 'ನಿವೃತ್ತ'ರಾಗಿರುತ್ತಿದ್ದರೇನೋ! ಆದರೆ ಅವರೇ ಹೇಳುವಂತೆ 'ವಿಧಿ ಹಾಗೆ ಮಾಡಗೊಡಲಿಲ್ಲವೆಂತಲೇ ಈ ನಿಧಿ ಬೇರೆಯವರಿಗೆ ದೊರೆಯಿತು.'... ಆದರೆ ಮತ್ತೆ ಅವರವೇ ಮಾತು 'ಕನ್ನಡದ ಬಗ್ಗೆ ಹೈಸ್ಕೂಲಿನ ಹಂತದಿಂದಲೇ ಹತ್ತಿದ ಜಡ್ಡಿಗೆ ಇಲ್ಲಿಯವರೆಗೆ ಬರಲೇ ಇಲ್ಲ ಜಡ್ಡು'.

ಈಗ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯಲ್ಲಿರುವ ಹಾತಕಣಗಲಿ ತಾಲೂಕಿನಲ್ಲಿ. ಕರ್ನಾಟಕದ ಕುಂದರನಾಡಿನ ಅನೇಕ ಹಳ್ಳಿಗಳಲ್ಲಿ ಕನ್ನಡ ಪ್ರಾಥಮಿಕ ಶಾಲೆ, ಹೈಸ್ಕೂಲುಗಳನ್ನು ಪ್ರಾರಂಭಿಸಿದ ಕಾಯಕ ಇವರದು-ಅದೂ ಕಸ್ಟಮ್ಸ್ ಇಲಾಖೆಯ ಒಬ್ಬ ಅಧಿಕಾರಿಯಾಗಿ, ೧೯೭೭ರಲ್ಲಿ ನಿವೃತ್ತರಾಗಿ ಧಾರವಾಡದಲ್ಲಿ ನೆಲೆಸಿದ ಈ ಹಿರಿಯರಿಗೆ ಕನ್ನಡ-ಕನ್ನಡಿಗ-ಕರ್ನಾಟಕ ಎಂದರೆ ಜೀವ ಜೀವಾಳದ ಪ್ರಶ್ನೆಗಳೇ. ರಾಮ ಜಾಧವರ ಬದುಕಿನ ಅಂತರಂಗ ಬಹಿರಂಗಗಳನ್ನು ರೂಪಿಸುತ್ತಲೇ ಬಂದಿರುವ ಅಂತರಂಗಗಳೆಂದರೆ ಅವರು ನಂಬಿದ ಬಸವ ತತ್ವ, ಬಸವಣ್ಣನ ಬಗ್ಗೆ ಅವರು ಮಾತಾಡಲು ಸುರು ಮಾಡಿದರೆಂದರೆ ಸಾಕು; ಅಶ್ವಾರೂಢ ಸೇನಾಪತಿಯಾಗಿ, ಭಕ್ತಿಭಂಡಾರಿಯಾಗಿ, ಕಲ್ಲಿನ ಎತ್ತಾಗಿ, ವೀರಶೈವರೆಂದೂ ಲಿಂಗಾಯತರೆಂದೂ ಕರೆದುಕೊಳ್ಳುವ ಅನೇಕರಿಗೆ ಕೇವಲ ಮಣ ಮಣ ಮಂತ್ರವಾಗಿಯೋ ಉಪಜೀವನದ ತಂತ್ರವಾಗಿಯೋ ಪರಿಣಮಿಸಿರುವ ಮಾಮೂಲಿ ಬಸವಣ್ಣ ಮರೆಯಾಗಿ, ಒಂದು

ಸದಾ ನಿಗಿನಿಗಿ ಕೆಂಡದಂತಿರುವ ಜ್ಯೋತಿರ್ಲಿಂಗವಾಗಿರುವ ಬಸವ-ತತ್ವ ತನಗೆ ತಾನೇ ರಾಮ ಜಾಧವರ ಜವಾರಿ ಕನ್ನಡದಲ್ಲಿ ಅರಳತೊಡಗುತ್ತದೆ.

**ಅಕ್ಷರದಿಂದ ಆವಿಷ್ಕಾರ ಪಡೆಯುವುದು ಮಾಹಿತಿ**
**ಅಕ್ಷರದಿಂದ ಸಾಕ್ಷಾತ್ಕಾರ ಪಡೆಯುವವನು ಸಾಹಿತಿ**
**ಅಕ್ಷರವನ್ನು ನಕ್ಷತ್ರದ ಹತ್ತಿರ**
**ಒಯ್ಯುವವನು ಸಿದ್ಧಾಂತಿ**
**ಅಕ್ಷರವನ್ನೇ ನಕ್ಷತ್ರವನ್ನಾಗಿ ಮಾಡುವುದು**
**ಬಸವನಂಥವರ ಕೃತಿ**

ಇದು ರಾಮ ಜಾಧವರು

ನಾನು ಸಾಹಿತಿಗಳ ಸಂಗಾತಿ
**ಅಲ್ಲ ಸಾಹಿತಿ**
**ಎಂಬುದು ನನ್ನ ಪೂರ್ಣ ಮಾಹಿತಿ**

ಎಂದು ವಿನೋದದಿಂದಲೇ ಹೇಳಿಕೊಳ್ಳುತ್ತ ಬಸವಣ್ಣನನ್ನು 'ಕಂಡುಕೊಂಡ' ರೀತಿ! ವಯೋವೃದ್ಧರೆಂದೂ ಜ್ಞಾನವೃದ್ಧರೆಂದೂ ವರ್ಣಿಸಲ್ಪಡುವ ಅನೇಕ ಹಿರಿಯರು ವಯಸ್ಸಿನ ವೃದ್ದಾಪ್ಯದೊಂದಿಗೇ ಜ್ಞಾನದ 'ವೃದ್ದಾಪ್ಯ'ವನ್ನೂ ಸಾಕಷ್ಟು ಪುರಾವೆಗಳೊಂದಿಗೆ ಸಿದ್ಧಮಾಡುತ್ತ ಸನ್ಮಾನ ಸಮಾರಂಭಗಳ ರಂಗಿನಲ್ಲಿಯೋ ಅಧ್ಯಾತ್ಮ ಗಿಧ್ಯಾತ್ಮಗಳ ಗುಂಗಿನಲ್ಲಿಯೋ ತಾವು ಈವರೆಗೆ ಪಡೆದ ಸವಲತ್ತುಗಳ ಹಂಗಿನಲ್ಲಿಯೋ ಕ್ಷಣಕ್ಷಣಕ್ಕೆ ಕೊಳೆಯುತ್ತ ಕುಳಿತ ಮಾಮೂಲಿ ಹಿನ್ನೆಲೆಯಲ್ಲಿ ನಮ್ಮ ಜಾಧವ 'ಅಜ್ಜ' ತೀರ ಭಿನ್ನವಾದ ರೀತಿಯಲ್ಲಿ ಒಡೆದು ಕಾಣುವುದು:

**ಇತಿಹಾಸಕ್ಕಿದ್ದರೆ ವಯಸ್ಸು**
**ಮಣ್ಣಿಗಿದೆ ಮನಸ್ಸು**

-ಎಂಬ ಪ್ರಖರ ವೈಚಾರಿಕತೆಯಲ್ಲಿ:

**ಕಳೆದ ಕೆಲವು ದಿನಗಳಿಂದ,**
**ಅಲ್ಲ, ಕೆಲವು ವರ್ಷಗಳಿಂದ**
**ನನ್ನನ್ನೇ ನಾನು ಹುಡುಕುತ್ತಿದ್ದೇನೆ,**

-ಎಂಬ ನಿರಂತರ ಹುಡುಕಾಟದಲ್ಲಿ;

**ಎಲ್ಲಿ ಗೀತಾ**
**ಅಲ್ಲಿ ಮನುಷ್ಯ ಸೋತಾ**

-ಎಂಬ ಕಟುವಾದ, ಸತ್ಯನಿಷ್ಠುರವಾದ ವಿಮರ್ಶೆಯಲ್ಲಿ;

**ಕವಿತೆ ಬರೆಯುವುದರಿಂದ ಆಗುವುದೇನು?**
**ಹೃದಯದಲ್ಲಿರದಿದ್ದರೆ**
**ಕರುಣೆಯ ಜೇನು!**

-ಎಂಬ ಕಾವ್ಯದ ಮೂಲ ಸೆಲೆಯನ್ನೇ ಸೆರೆ ಹಿಡಿಯುವುದರಲ್ಲಿ;

ಎಪ್ಪತ್ನಾಲ್ಕು ವರುಷದ ಜಾಧವ ಅಜ್ಜ ಅನೇಕ ದಶಕಗಳಿಂದ ಪದ್ಯ ಬರೆಯುತ್ತಲೇ ಇದ್ದಾರೆ. ಅವರ ಕಾವ್ಯೋತ್ಸಾಹಕ್ಕೆ ಗಡಿಯಿಲ್ಲ, ಗೆರೆಯಿಲ್ಲ. ಅವರ ಮಾತು ಬೇರೆಯಲ್ಲ; ಗದ್ಯ ಬೇರೆಯಲ್ಲ; ಪದ್ಯ ಬೇರೆಯಲ್ಲ, ತಮ್ಮ ಪ್ರಾಸಬದ್ಧವಾದ ಒಂದು ಗತ್ತಿನ ಮಾತುಗಾರಿಕೆಯಿಂದ ತಾಸುಗಟ್ಟಲೆ ಅವರು-ಬಾಯಲ್ಲಿನ ಹಲ್ಲಿನ ಸೆಟ್ಟು ಕಳಚಿ ಬೀಳುವವರೆಗೂ-ನಿಮ್ಮನ್ನು ಗಾಢವಾಗಿ, ಒಮ್ಮೊಮ್ಮೆ ಗೂಢವಾಗಿ ಆವರಿಸಬಲ್ಲರು. ಬೇಂದ್ರೆಯವರನ್ನು 'ಅಣ್ಣ' ಎಂದೇ ನೆನೆಯುವ ಜಾಧವರು ಬೇಂದ್ರೆಯವರ ಅನೇಕ 'ಚಾಳಿ'ಗಳನ್ನು ಕಲಿತಿದ್ದಾರೆ. ಆದರೆ ಅಮೂರ್ತಗಳ ಆದರ್ಶಗಳಲ್ಲಿ ಕರಗಿ ಹೋಗದೆ, ಭೂತ-ಭವಿಷ್ಯಗಳ ಹಳವಂಡಗಳಲ್ಲಿ ಹುಗಿದು ಹೋಗದೇ, ವರ್ತಮಾನದ ಸತ್ಯಗಳ ಬೆಳಕಿನ್ನಲೇ ಸಾರ್ಥಕ ಬದುಕು ಬದುಕುತ್ತಿರುವ ಈ 'ಅಜ್ಜ' ಈಗಾಗಲೇ ಅಧಿಕೃತವಾಗಿ ತಮ್ಮ 'ದೇಹದಾನ' ಮಾಡಿದರು; 'ಮುದುಕನ ಬದುಕು ಕಾಡತೂಸಿಲ್ಲದ ಬಂದೂಕು' ಎಂದು ತನ್ನನ್ನು ಗೇಲಿ ಮಾಡಿಕೊಳ್ಳುತ್ತಲೇ ಇರುವ ಈ 'ಮುದುಕ'ನನ್ನು 'ಬತ್ತದ ತಾಯ್ತನ'ದಿಂದ ನೋಡಿಕೊಳ್ಳುತ್ತಿರುವ ಪದ್ಮತಾಯಿಯವರೂ ಮರಣೋತ್ತರ 'ದೇಹದಾನ' ಮಾಡಿದವರೇ.

ರಾಮು ಜಾಧವರ ಕಾವ್ಯ ಅವರ ನೋವು ನಲಿವುಗಳ, ವೈಚಾರಿಕತೆ-ಹೃದಯವಂತಿಕೆಗಳ, ಹಾಡು-ಪಾಡುಗಳ, ಅರಿವು-ಇವುಗಳ ಒಟ್ಟು ಅಭಿವ್ಯಕ್ತಿಯಾಗಿದೆ. ಅವರ ಒಟ್ಟು ವ್ಯಕ್ತಿತ್ವದ ಒಂದು ಅಂಶ ಇದು. ಈ ಅಂಶದ ಚುಂಗು ಹಿಡಿದು ಅವರನ್ನು ಇಡಿಯಾಗಿ ಗ್ರಹಿಸಬೇಕೆನ್ನುವವರು ಅವರನ್ನು ಇಡಿಯಾಗಿಯೇ ನೋಡಬೇಕು; ಇಡಿಯಾಗಿ ಕೇಳಬೇಕು

**ಚಂದ್ರಶೇಖರ ಪಾಟೀಲ**

* ಇದಿಷ್ಟೇ ಸತ್ಯ : ಕವನ ಸಂಕಲನದ ಹಿನ್ನುಡಿಯಿಂದ ಆಯ್ದುಕೊಂಡದ್ದು

## ರಾಮು ಜಾಧವರ ಸ್ಮರಣೆ!

ನಮ್ಮೆಲ್ಲರ ಎದೆಯ ಗೂಡಿನಲ್ಲಿ ಕುಳಿತು ಸದಾ 'ಬಸವ ಬಸವಾ' 'ಕನ್ನಡ ಕನ್ನಡಾ' ಎಂದು ಮಧುರ ದನಿಯಿಂದ ಕೂಗುತ್ತಿದ್ದ ಕೋಗಿಲೆಯೊಂದು ಒಮ್ಮೆಲೇ ಗರಿಬಿಚ್ಚಿ ಹಾರಿಹೋಯಿತು! ನಮ್ಮ ಹೃದಯ ಮಂದಿರವನ್ನು ಸದಾ ಬೆಳಗುತ್ತಿದ್ದ ದಿವ್ಯ ಜ್ಯೋತಿಯು ಪಟ್ಟನೆ ಆರಿಹೋಯಿತು! ನಮ್ಮ ಸಂಕಟ ಸಮಯದಲ್ಲಿ ಆಶೆ-ಭರವಸೆಯನ್ನು ತುಂಬಿ ಚೈತನ್ಯವಾಗಿ ಚಿಮ್ಮುತ್ತಿದ್ದ ಚಿಲುಮೆ ಬತ್ತಿತ್ತು! ಕನ್ನಡದ ನೆಲಜಲದ ಸಮಸ್ಯೆಗಳಲ್ಲಿ ಹೋರಾಟದ ರಥವನ್ನು ಎಳೆಯುವಲ್ಲಿ ಮುಂಚೂಣಿಯಾಗಿ ನಿಲ್ಲುತ್ತಿದ್ದ ಹಿರಿಯಾನೆಯೊಂದು ತಪ್ಪಿಸಿಕೊಂಡು ಹೋಗಿ ಶಿವನಪಾದ ಸೇರಿತು!

ರಾಮು ಜಾಧವ ಅವರನ್ನು ಏನೆಂದು ಕರೆದರೂ, ಎಷ್ಟು ಪ್ರಶಂಸಿದರೂ ಇನ್ನೂ ಕಡಿಮೆಯೇ! ಇತ್ತೀಚೆ ಅವರ ನೆನಪು ತೆಗೆದಾಗೊಮ್ಮೆ ಕಣ್ಣೀರು ತಾನು ತಾನೇ ಚಿಮ್ಮಿ ಬರುವುದು. ಸ್ಮೃತಿಯ ಪರದೆಯ ಮೇಲೆ ಅವರು ಬಂದು ನಿಲ್ಲುವರು.

ಮಕ್ಕಳ ಸಾಹಿತ್ಯದ ವೇದಿಕೆಯಾಗಿ ಪತ್ರಿಕೆಯೊಂದನ್ನು ತೆರೆಯಬೇಕೆಂದು ಪ್ರಸ್ತಾಪ ಮಾಡಿದಾಗ ಮೊಟ್ಟಮೊದಲು ಜೈ ಅಂದವರು ರಾಮು ಜಾಧವ ಅವರು. ಆ ಪ್ರಥಮ ಸಂಚಿಕೆಯನ್ನು ಪ್ರಕಟಿಸಿ ಅವರ ಕೈಯಲ್ಲಿ ತಂದುಕೊಟ್ಟಾಗ ಹಿರಿಹಿರಿ ಹಿಗ್ಗಿ 'ನಾವು ಇಷ್ಟು ಚೆನ್ನಾಗಿ ಪತ್ರಿಕೆ ತೆಗೆಯಬಲ್ಲೆವೇ?' ಎಂದು ಬೆನ್ನು ಚಪ್ಪರಿಸಿ ಆನಂದಭಾಷ್ಪ ಸುರಿಸಿದ ಆ ದೃಶ್ಯವನ್ನು ನಾನೆಂದೂ ಮರೆಯಲಾರೆ.

ನನ್ನ ಜೀವಮಾನದಲ್ಲಿ ಅವರಂಥ ದೊಡ್ಡ ವ್ಯಕ್ತಿಯನ್ನು ನಾನು ಕಂಡಿಲ್ಲ. ಅವರು ಸರ್ ಎಂ. ವಿಶ್ವೇಶ್ವರಯ್ಯ ಆಗಿರಲಿಲ್ಲ. ಸಿ.ವಿ. ರಾಮನ್ ಆಗಿರಲಿಲ್ಲ, ಐನ್‌ಸ್ಟೀನ್, ಅರಿಸ್ಟಾಟಲ್, ಸಾಕ್ರೇಟಿಸ್, ರವೀಂದ್ರನಾಥ ಟಾಗೋರ ಆಗಿರಲಿಲ್ಲ. ಆದರೆ ನಮ್ಮ ನಿಮ್ಮ ನಡುವಿನ ನಮ್ಮ ನಮ್ಮೊಳಗಿನ ಮಹಾನ್ ವ್ಯಕ್ತಿಯಾಗಿದ್ದರು. ನಮ್ಮೊಳಗಿನ ಐನ್‌ಸ್ಟೀನ್, ಸಾಕ್ರೆಟಿಸ್, ರವೀಂದ್ರ ಇತ್ಯಾದಿ ಎಲ್ಲಾ ಆಗಿದ್ದರು. ಅವರೊಬ್ಬ ಸ್ವಯಂ 'ಪಬ್ಲಿಕ್ ಗ್ರಿವೆನ್ಸಿಸ್ ಆಫೀಸ್' ತರಹ ಆಗಿದ್ದರು. ಯಾರಿರಲಿ ಎಂಥಾ ಗಂಡಾಂತರ ಪ್ರಸಂಗದಲ್ಲಿ ಸಿಲುಕಿ 'ನಾನಿನ್ನು ಸತ್ತೆ' ಎಂದು ಕೊನೆಯ ಹಂತದಲ್ಲಿ ಬಂದು ಅವರನ್ನು ಕಂಡರೂ ಅದಕ್ಕೆ ಅವರಲ್ಲಿ ದಿವ್ಯಮಂತ್ರ ಶಕ್ತಿಯಿತ್ತು, ಪರಿಹಾರವಿತ್ತು. 'ನೀ ಹಿಂದೆ ಸರಿ...ನಾನು ಹುಲಿಯ ಬಾಯಿಗೆ ತಲೆ ಕೊಡುವೆ' ಎಂದು ಮುಂದೆ ನಿಲ್ಲುತ್ತಿದ್ದರು. ಧರ್ಮವೇ ಇರಲಿ, ರಾಜಕೀಯವೇ ಇರಲಿ, ಕಾಯದೇ ಕಾನೂನೇ ಇರಲಿ, ಸಾಮಾಜಿಕ ವಿಷಯವೇ ಇರಲಿ...ಅದೊಂದು ಪರ್ವತ. ಅದನ್ನು ಅಲುಗಿಸಲು ಯಾರಿಂದಲೂ ಸಾಧ್ಯವಿರಲಿಲ್ಲ. ಬಹಳ ಜನ ಬೂಟಾಟಿಕೆಯ ಮಾತನ್ನಾಡುತ್ತಾರೆ. ಅದು ಅವರಿಗೆ ಸೇರುತ್ತಿರಲಿಲ್ಲ.

ಅವರ ಮನೆ ಒಂದು ಸಾರ್ವಜನಿಕ ಯಾತ್ರಾಸ್ಥಳವಾಗಿತ್ತು! ಇವರು ನಮ್ಮವರು ಇವರು ಹೊರಗಿನಿಂದ ಬಂದವರು ಎಂಬ ಭೇದಭಾವವೇ ಇರಲಿಲ್ಲ. ಯಾರೇ ಹೋಗಲಿ... 'ಪದ್ಮಾ...' ಎಂದು ಕೂಗಿದರೆ ಸಾಕು... ಹತ್ತಾರು ಕಪ್ಪು ಬಿಸಿಬಿಸಿ ಚಹಾ ಅಮ್ಮನವರು ತಂದಿರಿಸುತ್ತಿದ್ದರು. ಅವರ ಖಾಸಗೀ ಗ್ರಂಥಾಲಯ ಅಲಭ್ಯ ಅಪೂರ್ವ ಗ್ರಂಥಗಳು ಅವರಲ್ಲಿ ಲಭ್ಯ. ಆಸಕ್ತರು ಎತ್ತಿಕೊಂಡು ಹೋಗುತ್ತಿದ್ದರು. ಓದಿಯಾದ ಮೇಲೆ ತಾವೇ ತಂದಿರಿಸುತ್ತಿದ್ದರು. .

ಅವರಂಥ ಪ್ರಾಮಾಣಿಕ ಸತ್ಯಸಂಧ ನಿರ್ಭಿಡೆಯ ನಿಷ್ಠುರದ ವ್ಯಕ್ತಿ ಅವರೇ! ಅವರು ಮನಸ್ಸು ಮಾಡಿದ್ದರೆ 'ಮಲ್ಟಿ ಕ್ರೋರ್ಸ್' ಅಧಿಪತಿಗಳಾಗುತ್ತಿದ್ದರು. ಅಂಥ ಹಿರಿಯ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಅವರಂಥ ಕರುಳಿನ ಮನುಷ್ಯ ದೊರೆಯುವುದು ಅಪರೂಪ. ಒಂದು ಸಲ ವಿದ್ಯಾವರ್ಧಕ ಸಂಘದಲ್ಲಿ ಸಭೆ ನಡೆಸುತ್ತಿದ್ದೆವು. ಅವರು ಮಾತಾಡುವಾಗ ಬಾಯಿತಪ್ಪಿ 'ನನಗೆ ಮಕ್ಕಳಿಲ್ಲ...ಮುದುಕ...ನಾನು ಏನು ಮಾಡಬಲ್ಲೆ?' ಎಂದರು. ಎದುರಿಗೆ ಕುಳಿತ ಡಾ. ಚೆನ್ನಕ್ಕ ಪಾವಟೆ ಒಮ್ಮೆಲೇ ಎದ್ದುನಿಂತು...ವೇದಿಕೆಗೆ ಬಂದು 'ಅಪ್ಪಾ! ನನಗೆ ಮಕ್ಕಳಿಲ್ಲ ಈ ಮಾತನ್ನು ಹಿಂತೆಗೆದುಕೊಳ್ಳಿ...! ನಾವು ನಿಮ್ಮ ಮಕ್ಕಳಲ್ಲವಾ? ಹೇಳಿ...?' ಎಂದು ಪ್ರತಿಭಟಿಸಿದರು. ಆಗ ಜಾಧವ ಗಳ ಗಳ ಅತ್ತುಬಿಟ್ಟು 'ಆತವ ತಪ್ಪಾಯಿತು!' ಎಂದು ಕ್ಷಮೆ ಕೇಳಿದರು. ಎಂಥಾ ಮೃದುಹೃದಯ!

ಡಾ. ಪಾಟೀಲ ಪುಟ್ಟಪ್ಪ ರಾಮ ಜಾಧವರ ಸ್ನೇಹ ಅನ್ಯಾದೃಶ್ಯವಾಗಿತ್ತು. ಸ್ನೇಹಿತನಿಗಾಗಿ ಅವರು ತಮ್ಮ ಮನೆಯಲ್ಲಿ ಒಂದು ರೂಮನ್ನೇ ಮೀಸಲಾಗಿಟ್ಟಿದ್ದರು. ಅದಕ್ಕೆ ಪುಟ್ಟಪ್ಪನ ರೂಮು ಎಂದೇ ಹೆಸರಿಟ್ಟಿದ್ದರು. ಇಂದಕ್ಕನನ್ನು ಅವರು ತಮ್ಮ ಪುಟ್ಟ ಸೋದರಿಯಂತೆ ತಿಳಿದುಕೊಂಡಿದ್ದರು. ಪುಟ್ಟಪ್ಪ ಧಾರವಾಡಕ್ಕೆ ಬಂದರೆ ಅಲ್ಲಿ ಕೆಲಹೊತ್ತು ಇದ್ದು ವಿಶ್ರಾಂತಿ ಪಡೆದುಕೊಂಡು ಹೋಗುವುದು ವಾಡಿಕೆ. ಸ್ನೇಹಿತರ ಬಗ್ಗೆ ಯಾರಾದರೂ ಸಲ್ಲದ ಸ್ವರ ಎತ್ತಿದರೆ ಕಿಡಿಕಿಡಿ ಕೆಂಡವಾಗುತ್ತಿದ್ದರು. ಕೋಪಗೊಂಡಾಗ ಅವರು ಕೈಯಲ್ಲಿಯ ಕೋಲೆತ್ತಿ ರೌದ್ರಾವತಾರಿಯಾಗುತ್ತಿದ್ದರು!

ಆಶುಕವಿತ್ವ ಅವರಿಗೆ ರಕ್ತಗತವಾಗಿತ್ತು. ಅವರ ಅಂತ್ಯಪ್ರಾಸದ ಗತ್ತು ಅವರದೇ ವೈಶಿಷ್ಟ್ಯ ಒಂದೊಂದು ಸಲ ರಾತ್ರಿ ಹನ್ನೊಂದರ ಮೇಲೆ ಫೋನು ಮಾಡಿ "ಮಲಗಿಕೊಂಡಿದ್ದಿಯೇನು ಮಗು? ಎಂದು ಕೇಳಿ' ಕಾಗದದ ಮೇಲೆ ಮೂಡಿಸಿದ ಕವನದ ಒಂದೊಂದು ನುಡಿಗಳನ್ನು ಮೌಖಿಕವಾಗಿ ವಾಚನ ಮಾಡಿ 'ಬರಕೋ..ಮುಂದಿನ ಸಂಚಿಕೆಯಲ್ಲಿ ಅದು ಬರಬೇಕು' ಎಂದು ಹೇಳುತ್ತಿದ್ದರು. ಫೋನಿನಲ್ಲಿಯ ವ್ಯಂಗ್ಯ...ವಿಡಂಬನೆ, ಅವರಿಗೆ ಸಮಯದ ಪ್ರಜ್ಞೆಯೇ ಇರುತ್ತಿರಲಿಲ್ಲ. ತಮಗಿಂತ ಒಂದೇ ದಿನ ಕಡಿಮೆಯಿದ್ದರೂ ಸರಿ 'ಮಗು' ಎಂದು ಕರೆಯುವ ಆತ್ಮೀಯತೆ ಅವರದು.

ರಾಜ್ಯದ ಒಳಗೆ ಹೊರಗೆ ಅವರಿಗೆ ಲೆಕ್ಕವಿಲ್ಲದಷ್ಟು ಸ್ನೇಹಿತರು ಅಭಿಮಾನಿಗಳು! ಲೆಕ್ಕವಿಲ್ಲದಷ್ಟು ಸಂಘ ಸಂಸ್ಥೆಗಳೊಡನೆ ಪದಾಧಿಕಾರಿಗಳಾಗಿ ಇಲ್ಲದೆಯೂ ಸಂಪರ್ಕವಿಟ್ಟುಕೊಂಡಿದ್ದರು. ನಾನು ಎಲ್ಲಾ ಬಿಟ್ಟು ಕೊಟ್ಟೆನು...' 'ಮಕ್ಕಳ ಮಂದಿರ'ವನ್ನು ಬಿಡಲಾರೆ ಅದನ್ನು ನೀನೇ ನಡೆಸಿಕೊಂಡು ಹೋಗಬೇಕು. ನಾನು ಸತ್ತರೂ ಪತ್ರಿಕೆಯ ಪುಟಪುಟಗಳಲ್ಲಿ ನಮ್ಮ ಆತ್ಮವಿರುತ್ತದೆ.' ಎಂದು ಹೇಳುತ್ತಿದ್ದ ಆ ಪುಣ್ಯಾತ್ಮನನ್ನು ನಾನು ಹೇಗೆ ಮರೆಯಲಿ?

# ಅನುಬಂಧ

i ಗಡಿ ಬಗ್ಗೆ ಪ್ರಧಾನಿಗೆ ನಿಯೋಗವು ಆತ್ಮಗೌರವದಾಹುತಿ

ii ಹುಬ್ಬಳ್ಳಿ ರೇಲ್ವೆ ಕಾರ್ಯಗಾರ ಕುರಿತು ಕೋರಿಕೆ

iii ಕನ್ನಡ ಕೂಲಿಯ ಕಲಕಲ

iv ಅರ್ಧನಾರೀ ನಟೇಶ್ವರ

v ನೀರಿಗಾಗಿ ಮನವಿ

vi ರಾಮ ಜಾದವ ಸೇವೆ - ಸಾಧನೆ - ಗೌರವ

## ಗಡಿ ಬಗ್ಗೆ ಪ್ರಧಾನಿಗೆ ನಿಯೋಗವು ಆತ್ಮಗೌರವದಾಹುತಿ

ಗಡಿ ವಿಷಯವಾಗಿ ಚರ್ಚಿಸಲು ಕರ್ನಾಟಕದಿಂದ ಸರ್ವಪಕ್ಷಗಳ ನಿಯೋಗವು ಪ್ರಧಾನಿಯವರನ್ನು ಕಾಣುವುದಿದೆ ಎಂಬ ಸುದ್ದಿಯು ಈ ವಿಷಯದ ಬಗ್ಗೆ ಪ್ರಜ್ಞೆ ಇದ್ದವರನ್ನು ಗುದ್ದಿದಂತಾಯಿತೆಂದರೆ ಆಶ್ಚರ್ಯ ಪಡಬೇಕಿಲ್ಲ. ಯಾಕೆಂದರೆ ಶ್ರೀ ನರಸಿಂಹರಾಯರು (ಪ್ರಧಾನಿಯಾಗುವುದಕ್ಕಿಂತ ಮುಂಚೆ) ಮಹಾರಾಷ್ಟ್ರದ ರಾಮಟೆಕ್ ಕ್ಷೇತ್ರದಿಂದ ಆರಿಸಿ ಬಂದ ನಂತರ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಆಗಿನ ಕೇಂದ್ರ ಸರ್ಕಾರಕ್ಕೆ ನಿಯೋಗ ಒಯ್ದಿದ್ದರು. ಆದ್ದರಿಂದ ಅವರು ಪ್ರಧಾನಿಯಾದ ಕೂಡಲೇ ನಾನು ಮತ್ತು ಡಾ. ಪಾಟೀಲ ಪುಟ್ಟಪ್ಪನವರು, ಪ್ರಧಾನಿಯಾಗಿ ನರಸಿಂಹರಾಯರು ಗಡಿ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ನೈತಿಕ ಹಕ್ಕು ಕಳೆದುಕೊಂಡಿದ್ದರಿಂದ ಅವರನ್ನು ಈ ವಿಷಯ ಕುರಿತು ದೂರ ಇರಿಸಬೇಕೆಂದು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದ್ದೆವು. ಈ ಪ್ರಧಾನಿ ನರಸಿಂಹರಾಯರು ಕರ್ನಾಟಕದ ಬಗ್ಗೆ ಎಷ್ಟು ಕಳಕಳಿ ತಾಳಿದ್ದಾರೆಂದರೆ ಹುಬ್ಬಳ್ಳಿ ರೇಲ್ವೆ ವಿಭಾಗಕ್ಕೆ ಮಂಜೂರಾದ ಹಣವನ್ನು ಆಂಧ್ರದಲ್ಲಿಯ ತಮ್ಮ ಸ್ವಂತ ಕ್ಷೇತ್ರಕ್ಕೆ ರೇಲ್ವೆ ಮಂತ್ರಿ ಜಾಫರ ಶರೀಫರ ಮುಖಾಂತರ ಖರ್ಚು ಮಾಡಲು ಹಚ್ಚಿದ ಪರೋಪಕಾರಿಗಳು. ಈ ಆಂಧ್ರದ ರಾಯರು ಈಗ ಕೇಂದ್ರದಲ್ಲಿ ರಾಮನಾಮ ಪಡೆದಿದ್ದರಿಂದ ಭೌಗೋಲಿಕವಾಗಿ ಮತ್ತು ಐತಿಹಾಸಿಕವಾಗಿ ಅವರಿಗೆ ಕರ್ನಾಟಕದಿಂದ ಹನುಮಂತ ಭಕ್ತರು ಸಿಗುವುದು ಸಹಜ. ಮೇಲಾಗಿ ಹಳೆಮೈಸೂರಿನ ಧುರೀಣರಿಗೆ ಬೆಳಗಾವಿ ಎಂದರೆ ಮುಳ್ಳುಗಾವಿ. ಶ್ರೀ ಚಂಗಲರಾಯರೆಡ್ಡಿಯವರು ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಕೊಟ್ಟರೇನು ಅಭ್ಯಂತರವಿಲ್ಲವೆಂದು ಗುಣಗಿ ಗವರ್ನರಾದರು. ಈ ವಾತಾವರಣಕ್ಕೆ ಬೆಂಬಲವಾಗಿ ಉತ್ತರ ಕರ್ನಾಟಕದಲ್ಲಿಯ ನಿಷ್ಕ್ರೀಯ ಸ್ವಾಭಿಮಾನ ಶೂನ್ಯ ಪುಢಾರಿಗಳಿಗೇನು ಕೊರತೆ ಇಲ್ಲ. ಇಂಥ ಆಶೆಬುರಕ ಪರಿಸ್ಥಿತಿಯಲ್ಲಿ ಇಂಥ ನಿಯೋಗವು ಬಲೆಯಲ್ಲಿ ಸಿಕ್ಕು ಸುಂಬಳ ಸುರಿಸಿದರೇನು ಗತಿ ಎಂಬ ಭೀತಿಯನ್ನು ಸಹಜ ತಳ್ಳಿಹಾಕಲಾಗದು. ಕಾರಣ ಕರ್ನಾಟಕದ ಬೆಳಗಾವಿಯಲ್ಲಿ ಮಹಾರಾಷ್ಟ್ರದ ಇಂದಿನ ಇತಿಹಾಸಕ್ಕೆ ಕಾರಣರಾರು? ಶ್ರೀ ಯಶವಂತರಾವ ಚವ್ಹಾಣರವರು ಭಾರತದ ಗೃಹಮಂತ್ರಿಗಳಾಗಬೇಕಾದರೆ ಶ್ರೀ ನಿಜಲಿಂಗಪ್ಪನವರು ಗಡಿ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ಖಂಡಿತ ಕರಾರು ಹಾಕಿದ್ದರು. ಬೆಳಗಾವಿಯನ್ನು ಧಾರಣೆಗೆ ಹಚ್ಚಿದ ಅಂದಿನ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶಂಕರರಾವ ಚವ್ಹಾಣರಿಗೆ ನಾನು ಮರಾಠಾವಾಡದಲ್ಲಿ ಗಟಾರಕ್ಕೆ ಹಣಬೇಕಿದ್ದರೆ ಅರ್ಜಿ ಹಾಕಿ, ನಾವು ಕನ್ನಡಿಗರು ಪಟ್ಟಿಹಾಕಿ ಕೊಡುತ್ತೇವೆಂದು ಪತ್ರ ಬರೆದಿದ್ದೆವು. ಇದೇ ಶಂಕರರಾವ ಚವ್ಹಾಣರು ಭಾರತದ ಗೃಹಮಂತ್ರಿಯಾದ ಬಗ್ಗೆ ನಾನು ಮತ್ತು ಡಾ. ಪಾಟೀಲ ಪುಟ್ಟಪ್ಪನವರು ಇವರಿಗೆ ಗಡಿ ವಿಷಯದಲ್ಲಿ ನೈತಿಕ ಹಕ್ಕು ಕಳೆದುಕೊಂಡಿದ್ದು ಹಸ್ತಕ್ಷೇಪ ಮಾಡಕೂಡದೆಂದು ಬಹಿರಂಗವಾಗಿ ಸೂಚಿಸಿದ್ದೆವು.

ಆದ್ದರಿಂದ ಗಡಿ ವಿಷಯ ಕುರಿತು ನರಸಿಂಹರಾಯರು ಕರ್ನಾಟಕಕ್ಕೆ ಪ್ರಧಾನಿಗಳು ಅಲ್ಲವೇ ಅಲ್ಲ. ಈ ವಿಷಯದಲ್ಲಿಯು ಇವರಿಗೆ ಕರ್ನಾಟಕದ ಪ್ರಧಾನಿಯಾಗಬೇಕೆಂಬ ಪ್ರಾಮಾಣಿಕ ಹಕ್ಕು ಬೇಕಾಗಿದ್ದರೆ 'ಮಹಾರಾಷ್ಟ್ರವನ್ನು ಸಂತಸಗೊಳಿಸುವುದಕ್ಕಾಗಿ ಕರ್ನಾಟಕದ ಮೇಲೆ ಹೇರಿದ 'ಮಹಾಜನ ವರದಿ'ಯನ್ನು

ನ್ಯಾಯಸಮ್ಮತವಾಗಿ, ಧೈರ್ಯದಿಂದ ಜಾರಿಗೊಳಿಸಲಿ, ಇಲ್ಲವಾದರೆ ಅವರ ಮೌನ ಸಂಕಲ್ಪದ ಮಂತ್ರವೂ ಕರ್ನಾಟಕಕ್ಕೆ ಯಳ್ಳಷ್ಟೂ ಜರೂರ ಇಲ್ಲ ಎಂಬುದನ್ನು ಇಂದಿನ ಪುಢಾರಿಗಳು ಅರಿಯುವುದೊಳಿತು. ದುರ್ದೈವ :: ಮುದವೀಡು ಕೃಷ್ಣರಾಯರಂಥ ಅಭಿಮಾನಿಗಳು ಕರ್ನಾಟಕದಲ್ಲಿ ಮತ್ತೆ ಹುಟ್ಟಿಲ್ಲವಾದ್ದರಿಂದ

**ಬಲ್ಲವರಿಂದ ಗೋಳು**
**ಇಲ್ಲದವರಿಂದ ಬೋಳು**
**ಗಡಿ ಬೆಳಗಾವಿಯ ಹೋಳು**
**ಕನ್ನಡಿಗರ ಬಾಳು ಹಾಳು' ಆಗಿದೆ.**

ದಿನಾಂಕ ೧೫ ಏಪ್ರಿಲ್ ೧೯೯೫

ರಾಮ ಜಾಧವ
ಕನ್ನಡದ ಕೂಲಿ

**ಹುಬ್ಬಳ್ಳಿ ರೇಲ್ವೆ ಕಾರ್ಯಾಗಾರ ಕುರಿತು ಕೋರಿಕೆ**

ಇದಗಾ ಮೈದಾನದ ಪಾಗೆ, ಪ್ರಸ್ಥಾನ ಇಟ್ಟು ವೃಂದಾವನ ಕಟ್ಟಿದಂತೆ ಹುಬ್ಬಳ್ಳಿ ರೇಲ್ವೆ ಕಾರ್ಯಾಗಾರದ ಹಗರಣವಾಗಿದೆ. ಆದ್ದರಿಂದ ಈ ಕಾರ್ಯಾಗಾರವನ್ನು ಮುಚ್ಚಲು ಯಾರ ಶಿಫಾರಸಿನ ಅಗತ್ಯವೇ ಇಲ್ಲ. ಇತ್ತ ಗೇಜು ಪರಿವರ್ತನೆ, ಅತ್ತ ಕಾರ್ಯಾಗಾರ ಮುಚ್ಚುವ ಯೋಜನೆ, ಎರಡೂ ಶರೀಫ್ ಸಾಹೇಬರಿಗೆ ಪ್ರಯೋಜನವಾದ್ದರಿಂದ ಅಧಿಕಾರಿಗಳ 'ಮೆಚ್ಚುವುದಿಲ್ಲ'ವೆಂಬ ಹೇಳಿಕೆಯು ಘಟನೆಯಾಗದ ನಟನೆಯಾಗಿದೆ. ಕಾರಣ ಕಾರ್ಯಾಗಾರ ಮುಚ್ಚಿದರೇನೇ ಹೊಸದಾಗಿ ನಿರ್ಮಿಸಲಿರುವ 'ನೈರುತ್ಯ ರೇಲ್ವೆ ವಲಯ'ವನ್ನು ಯಲಹಂಕ (ಬೆಂಗಳೂರು)ದಲ್ಲಿ ಸ್ಥಾಪಿಸಲು ಶಕ್ಯವಾಗುತ್ತದೆಯಲ್ಲದೆ, ಚಳ್ಳಕೆರೆ-ಚಿತ್ರದುರ್ಗ ತಮ್ಮ ಭಾಗದಲ್ಲಿ ಹೊಸದಾಗಿ ರೇಲ್ವೆ ಕಾಮಗಾರಿಗಳನ್ನು ಆರಂಭಿಸಲು ಅನುಕೂಲವಾಗುತ್ತದೆಂಬ ಖಚಿತ ಲೆಕ್ಕಾಚಾರ. ಮೇಲಾಗಿ ರೇಲ್ವೆ ಆಡಳಿತವು ಮುಂಚಿತವಾಗಿ ಈ ಕಾರ್ಯಾಗಾರವನ್ನು ಊರ್ಜಿತದಲ್ಲಿರುವ ಯಾವ ಯೋಜನೆಯನ್ನೂ ಹಮ್ಮಿಕೊಂಡಿಲ್ಲ. ಮಂಜೂರಾದ ಎಲ್ಲ ಹಣವನ್ನು ಪ್ರಧಾನಿಯವರ ಆಂಧ್ರದ ಭಾಗಕ್ಕೆ ಖರ್ಚು ಮಾಡುತ್ತ ಬರಲಾಗಿದೆ. ಆದ್ದರಿಂದ ಶರೀಫ್‌ರ ಮೌನ ನಿಗೂಢವಲ್ಲ. ದೃಢವಾದದ್ದು.

ವಿಜಯನಗರ ಸಾಮ್ರಾಜ್ಯವನ್ನು ನಾಶಗೊಳಿಸಿದ ನಂತರ ಅದರ ಪುನರಾವೃತ್ತಿಯೇ ಈ ಶತಾಯುಷಿ ಕಾರ್ಯಾಗಾರದ ನಿರ್ಮೂಲನೆ, ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಶರೀಫರಿಗೆ ಬೆಂಬಲವಾಗಿ ನಿಂತ ಸೈನ್ಯವೆಂದರೆ ಅವಳಿ ನಗರದಲ್ಲಿರುವ ದ್ರೌಪದಿ ವಸ್ತ್ರಾಪಹರಣ ಕಾಲದ ಪಂಚಪಾಂಡವ ಎಂ.ಪಿ.ಗಳು. ರಾಮನಿಗೆ ಹನುಮಂತನಂತಿರುವ ಮುಖ್ಯಮಂತ್ರಿಗಳು ಸೇನಾಪತಿಗಳಂತಿರುವ ಈ ಭಾಗದ ಮಂತ್ರಿಗಳು ಶಾಸಕರು, ಪಕ್ಷದ ದಕ್ಷತೆಗಾಗಿ ವೃಕ್ಷ ಬೆಳೆಸಿದ ಕಾಂಗ್ರೆಸ್ಸಿಗರು, ರಾಜಕೀಯಕ್ಕಾಗಿ ತುಟಿ ಸಹಾನುಭೂತಿಯಲ್ಲಿ ಉಳಿದ ಪಕ್ಷಗಳು, ಹಮಾಲಿ ದಲಾಲಿಯಿಂದ, ಚವಲಿ ಪಾವಲಿಯಲ್ಲಿ ಮಗ್ನರಾದ ಉದ್ಯೋಗರತ್ನರು, ಕರ್ನಾಟಕ ವಾಣಿಜ್ಯೋದ್ಯಮಿ ಸಂಸ್ಥೆ, ಪ್ರವಾಸಿಗಳಂತೆ ನಿವಾಸಿಗಳಾದ ಈ ಭಾಗದ ಗಣ್ಯ ನಾಗರಿಕರು ಮತ್ತು ಹುಬ್ಬಳ್ಳಿಯಲ್ಲಿ ಬೀಡು, ಆಂಧ್ರದಲ್ಲಿ ತಮ್ಮ ಗೂಡು ಪಡೆದ ಈ ಕಾರ್ಯಾಗಾರದ ಬಹುಅಂಕಿತ ಕಾರ್ಮಿಕರಾದ ತೆಲಗುರು.

ಉತ್ತರ ಕರ್ನಾಟಕದ ಈ ಭಾಗದಲ್ಲಿ ಕೀಚಕರು, ಉತ್ತರ ಕುಮಾರರು ಇದ್ದಾರಲ್ಲದೆ, ನಕ್ಸಲೀಯರಾಗುವುದು ಶಕ್ಯವಿಲ್ಲವೆಂದು ಖಾತ್ರಿಯಾದ್ದರಿಂದ ಮತ್ತೆ ಬೆಂಗಳೂರಿನಂತೆ ದಾವೂದ ಇಬ್ರಾಹಿಮನ ದಂಡು ಇಲ್ಲಿ ಗುಂಡು ಹಾರಿಸುವುದಿಲ್ಲವೆಂದು ಶರೀಫ ಸಾಹೇಬರಿಗೆ ಭರವಸೆ ಇದ್ದ ಮೂಲಕ ಚಟಿಗೆ ಹೊಡೆದು ಕಾರ್ಯಾಗಾರವನ್ನು ಮುತ್ತಿಗೆ ಮಾಡುವ ಹಂತದಲ್ಲಿದ್ದಾರೆ. ಈ ಕಾರ್ಯಾಗಾರವು ಪುನಃ ಕಾರ್ಮಿಕ ಅಡ್ಡ ಎಂದೂ ಆಗಲಾರದೆಂದು ಚುನಾವಣೆ ಕಾಲದಲ್ಲಿಯೂ ಧೈರ್ಯದಿಂದ ಕಾರ್ಯೋನ್ಮುಖರಾಗಿದ್ದಾರೆ.

ಇದಕ್ಕೆ ಮುಖ್ಯಕಾರಣ. ಇಲ್ಲಿಯ ರಾಜಕಾರಣಿಗಳಿಗೆ ಮುಖ್ಯ ಅಮ್ಮ ಇಸ್ಪೃಟು. ನಂತರ ಜನರು ತಮ್ಮ ಆಟದ ಇಸ್ಪೇಟು, ಎಂಬ ಸೌಖ್ಯ ಇದನ್ನೇ ತಮ್ಮ ಸಂತತಿಯವರಿಗೆ ಪ್ಲೇಟು ಸ್ಲೇಟು ಮಾಡುವದರಲ್ಲಿಯೇ ಮಗ್ನರಾಗಿದ್ದಾಗ,

ಜನರೇ ಇವರಿಗೆ ನೋಟು-ವೋಟು ಕೊಡುತ್ತಿದ್ದಾಗ ರೇಲ್ವೆ ಕಾರ್ಯಾಗಾರದ ತರ್ಲೆ ಯಾಕೆ ಬೇಕು ಎನ್ನುವುದು ಸ್ವಾಭಾವಿಕವಲ್ಲವೇ?

ಆದ್ದರಿಂದ ಪ್ರತಿವಾರ ಈ ಪುಢಾರಿಗಳ ಮನೆ ಮುಂದೆ 'ಪರಕೆ ಸೀರೆ, ಒಡಕ ಬಳೆ'ಯ ನಮ್ಮ ಮೆರವಣಿಗೆ ನಡೆಯುತ್ತದೆ. ೧೯೯೯ರಿಂದ ಈ ಪ್ರತಿಭಟನೆ ನಡೆದು ಘಟನೆಯಾಗಲೇ ಇಲ್ಲ. ಈಗ ನನ್ನನ್ನು ಕತ್ತೆಯ ಮೇಲೆ ಕೂಡ್ರಿಸಿ, ಸುಣ್ಣ-ಕಾಮಣ್ಣು ಹಚ್ಚಿ ಮೆರೆಸು, ಅದರ ಫೋಟೋವನ್ನು ಸೂಕ್ತವಾಗಿ ಪ್ರಧಾನಿ ಶರೀಫರನ್ನೊಳಗೊಂಡು ಎಲ್ಲ ಸಂಬಂಧಿಕರಿಗೆ ಸಾರ್ವಜನಿಕವಾಗಿ ಮುಟ್ಟಿಸಿದರೆ ಈ ಪಾಡದಿಂದ ನಾನು ಪ್ರಾಯಶ್ಚಿತ್ತ ಪಡೆಯುತ್ತೇನೆ. ಉತ್ತರ ಕರ್ನಾಟಕ ಅಭಿವೃದ್ಧಿಪರ ಹೋರಾಟದ ಚುಕ್ಕಾಣಿ ಹಿಡಿದ ಡಾ. ಪುಟ್ಟಪ್ಪನವರಿಗೂ. ಹೊಂಬಳ ಅವರಿಗೂ, ಸಾರ್ವಜನಿಕವಾಗಿ ಹೀಗೆ ಈಗ ಬಿನ್ನವಿಸಿಕೊಳ್ಳುತ್ತೇನೆ. ಕಾರಣ, ನಮ್ಮಲ್ಲಿ ಶರೀಫರನ್ನು ಬೆನ್ನುಹತ್ತುವ ಬೇಲೀಪನ ಬಲವಿಲ್ಲದ್ದರಿಂದ ಅವರೇ ಮುಘರಾಗಿದ್ದಾರೆ.

ದಿನಾಂಕ : ೨೬-೧೦-೧೯೯೪ ರಾಮು ಜಾಧವ

## ಕನ್ನಡ ಕೂಲಿಯ ಕಲಕಲ

ಉತ್ತರ ಕರ್ನಾಟಕವನ್ನು ಬಳಸದೆ, ಕರ್ನಾಟಕವನ್ನು ಗಳಿಸುವುದು ಶಕ್ಯವೇ? ಈಗ ಇಡೀ ಕರ್ನಾಟಕವನ್ನು ರಕ್ಷಿಸುವವರ್ಯಾರು? ಎಂಬ ಪ್ರಶ್ನೆಗೆ ಉತ್ತರವು ಹತ್ತಿರ ಇದ್ದರೂ, ಪರಿಹಾರಕ್ಕೆ ಒತ್ತರವಿಲ್ಲದೆ ನಿಲುಕದಷ್ಟು ಎತ್ತರ ಹತ್ತಿದೆ. ಇದರಿಂದಾಗಿ ಇಡೀ ಕರ್ನಾಟಕವು ಅಳಿಸಿಹೋಗುವ ಭೀತಿಯುಂಟಾಗಿದೆ. ಇಂಥ ದುಃಸ್ಥಿತಿಗೆ ಉತ್ತರ ಕರ್ನಾಟಕವನ್ನುಳಿದು ಬೇರೆ ಯಾರೂ ಕಾರಣರಲ್ಲವೆಂಬುದು ಸ್ಪಷ್ಟಪಡಿಸಬೇಕಾಗಿದೆ. ಯಾಕೆಂದರೆ ಯಾವ ಪ್ರತಿಫಲವನ್ನೂ ಬಯಸದೆ, ಅವಹೇಳನವನ್ನು ಲೆಕ್ಕಿಸದೆ, ಅಪಮಾನವನ್ನು ದಕ್ಕಿಸಿಕೊಂಡು ಯಾರದಾದರೂ ಕಲ್ಯಾಣವಾಗುತ್ತಿದ್ದರೆ, ಅಂಥ ಕೆಲಸವನ್ನು ಮೈಮೇಲೆ ಹಾಕಿಕೊಂಡು ಕೊನೆಯವರೆಗೆ ತ್ಯಾಗದ ದೇಹ ಬುದ್ಧಿಗಳಿಂದ ಸೇವೆ ಸಲ್ಲಿಸುವುದು ಉತ್ತರ ಕರ್ನಾಟಕದವರ ವ್ಯಕ್ತಿಗತ ಮತ್ತು ಸಾಮಾಜಿಕ ಸ್ವಭಾವವಾಗಿದೆಯೆಂಬುದಕ್ಕೆ ರಾಮಾಯಣ, ಮಹಾಭಾರತಗಳು ಸಾಕ್ಷಿಯಾಗಿವೆ. ಪ್ರಸ್ತುತ ಶತಮಾನದಲ್ಲಿಯೂ ಇದರಂತೆ ಭಾಷಾಭಿಮಾನದಿಂದ ದೇಶಾಭಿಮಾನವನ್ನು ಬೆಳೆಸಿಕೊಂಡು, ಹರಿದು ಹಂಚಿಹೋದ ಕನ್ನಡಿಗರಿಗೆ ಒಂದೇ ಆಡಳಿತದ ಏಕೀಕರಣವನ್ನು ಉತ್ತರ ಕರ್ನಾಟಕವು ಸಾಧಿಸಿತೆಂದೇ ಈಗ ಭೂಗೋಲ-ಇತಿಹಾಸಗಳಾಗಿವೆ. ದೇಶಕ್ಕೆ ಭಾಷಾವಾರು ನಕಾಶೆ ದೊರಕಿದೆ.

ಆದರೆ ರಾಮಾಯಣದಲ್ಲಿ ರಾಮನಂಥವರಿಗೆ ಪಟ್ಟ ಕಟ್ಟಿ ಶ್ರೇಯ ಗಳಿಸಿತು; ಮಹಾಭಾರತದಲ್ಲಿ ಪಾಂಡವರಂಥ ಪುಣ್ಯರ ಬೆನ್ನಿಗೆ ನಿಂತು ಶ್ಲಾಘನೀಯ ಪರಿಣಾಮ ಗಳಿಸಿತು. ಕರ್ನಾಟಕದಲ್ಲಿ ಹೆಸರಿಗೆ ಏಕೀಕರಣವಾಯಿತು. ಮೈಸೂರಿನ ವೈಭವೀಕರಣವಷ್ಟೇ ಸಾಧಿಸಿತು ಮತ್ತು ಅದೇ ಮೈಸೂರಿನ ವೈಭವೀಕರಣ ಮುಂದುವರಿದಿದ್ದು ಕನ್ನಡ ಕನ್ನಡಿಗ ಮತ್ತು ಕರ್ನಾಟಕವೆಂಬ ತ್ರಿಪುಡೆಯು ಈಗ ಪುಡಿಪುಡಿಯಾಗುವ ದುರಂತಕ್ಕೆ ಈಡಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಉತ್ತರ ಕರ್ನಾಟಕದಲ್ಲಿ ದೂರಗಾಮಿ ರಾಜಕೀಯ ಚಾಕಚಕ್ಯತೆಯ ಅಭಾವ ಮತ್ತು 'ದೂರದ ಗುಡ್ಡ ನುಣ್ಣಗೆ' ಎನ್ನುವ ಪರೀಕ್ಷೆ ವಿನಾ ಭಾವೋದ್ರೇಕತೆ. ಬ್ರಿಟಿಷ್‌ರ ಗುಲಾಮರಾಗಿದ್ದ ಉತ್ತರ ಕರ್ನಾಟಕವು 'ಸ್ವಾತಂತ್ರ್ಯ ಸಮರದೊಂದಿಗೆ ಕರ್ನಾಟಕ ಏಕೀಕರಣದ ಗುರಿಯೂ ಸಹ ಸಾಧಿಸಲು ಪ್ರಯತ್ನ ಮಾಡಿತು. ಆಗ್ಗೆ 'ಗುಲಾಮರ ಗುಲಾಮರಾಗಿದ್ದ' ಮೈಸೂರಿನವರ ಕೈಯಲ್ಲಿ ವಿಶ್ವಾಸದಿಂದ ಬಾಕೀಕರಣದ ಸೂತ್ರವನ್ನು ಒಪ್ಪಿಸಿದರು. ಇದರಿಂದ ಬ್ರಿಟಿಷ್ ಗುಲಾಮಗಿರಿಯಿಂದ ಮುಕ್ತರಾದ ಉತ್ತರ ಕರ್ನಾಟಕವನ್ನು ಹಿಡಿದು, ಇಡೀ ಕರ್ನಾಟಕದ ಜನತೆಯನ್ನು 'ಗುಲಾಮರ ಗುಲಾಮರ ಕೈಯಲ್ಲಿ' ಗುಲಾಮರನ್ನಾಗಿ ಮಾಡಲ್ಪಡಲಾಯಿತು. ಈಗಲೂ ಕರ್ನಾಟಕದ ನಾಲ್ಕು ಕೋಟಿ ಕನ್ನಡಿಗರು ಒಂದಿಲ್ಲೊಂದು ರೀತಿಯಲ್ಲಿ ಮೈಸೂರಿನವರ ಗುಲಾಮರಾಗಿದ್ದಾರೆಂದರೆ ತಪ್ಪಾಗದು. ಕಾರಣ ವಿನಾಕಾರಣವಾಗಿಬಿಟ್ಟಿದೆ.

ಭಾಷಾವಾರುಪ್ರಾಂತ ರಚನೆಯಾದರೂ ಮೈಸೂರು ಭಾಗದ ನಾಯಕರಿಗೆ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವ ಒಲವು ನಿಲುವು ಇರಲೇ ಇಲ್ಲ. ಕಾರಣ ಇವರನ್ನು ಗುಲಾಮರ ಗುಲಾಮರನ್ನಾಗಿ ಮಾಡಿದ ಇಂಗ್ಲಿಷರನ್ನು ತೊರೆಯುವ ಬಲ ಧೈರ್ಯ ಬರಲೇ ಇಲ್ಲ. ಕಾರಣ ಅವರ ದೇಹಬುದ್ಧಿಯಲ್ಲಿರಲೇ ಇಲ್ಲ. ಉತ್ತರ ಕರ್ನಾಟಕದ

ರಾಮಕೃಷ್ಣ ಹೆಗಡೆಯವರು ಕನ್ನಡಕ್ಕೆ ಕನ್ನಡದ ಸ್ಥಾನ ಕೊಟ್ಟರು. ಮೊಯಿಲಿಯವರು ಮಾತನಾಡಿದರು. ಮೊಲೆಹಾಲಿಗೆ ವರ್ಜವಾದರು. ವೀರೇಂದ್ರ ಪಾಟೀಲರು ಹೈದ್ರಾಬಾದ ಸಂಸ್ಥಾನದವರು ಅವರಂತೆ ಬೊಮ್ಮಾಯಿಯವರು ಕುಂದಗೋಳ ಸಂಸ್ಥಾನದವರು. ಆದ್ದರಿಂದ ಉತ್ತರ ಕರ್ನಾಟಕವು ಮೇಲೆ ಹೇಳಿದ ಪಾಪದಿಂದ ಮುಕ್ತವಾಗಬೇಕಾದರೆ ಸಮಗ್ರ, ಕರ್ನಾಟಕವನ್ನು ಸಮೃದ್ಧ ಕರ್ನಾಟಕವನ್ನಾಗಿ ಮಾಡುವ ಹೊಣೆ ಜವಾಬ್ದಾರಿ ಹೊರಲೇಬೇಕಾಗುತ್ತದೆ. ಗಡಿಭಾಗದ ಸ್ಥಿತಿ ಪರಿಸ್ಥಿತಿ ಅವಲೋಕಿಸಿದರೆ ಮೈಸೂರಿನವರಿಗೆ ಈ ಜವಾಬ್ದಾರಿ ಬೇಡಾದಂತೆ ಕಾಣುತ್ತದೆ ಎಂಬುದಕ್ಕೆ ಅವರೇ ಸಾಕ್ಷಿಯಾಗಿದ್ದಾರೆ.

ಹೀಗೆ ಆಳುವವರಲ್ಲಿ ಇಡಿಯಾದ ಕರ್ನಾಟಕವನ್ನು ನೋಡುವ ತಾಕತ್ತು ಕಾಣಲಿಲ್ಲ. ಬಿಡಿಯಾದದ್ದನ್ನು ಇಡಿಯಾಗಿ ಮಾಡುವ ಧೈರ್ಯ ಬರಲಿಲ್ಲ. ಒಡೆಯುವುದನ್ನು ಬಿಡಿಸುವ ಹೃದಯವಂತರಿರಲಿಲ್ಲ. ಇವರು ಸುಡುವುದನ್ನು ಬಿಡಲಿಕ್ಕಿಲ್ಲವೆಂಬ ಭೀತಿ ಕಾಡಹತ್ತಿದರೂ ಯಾವ ರಾಜಕಾರಣಿಯೂ ಯಾವ ಪಕ್ಷವೂ ವಿಚಾರ ಮಾಡಲಿಲ್ಲ. ಕೊನೆಗೆ ನಾವು 'ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿಯವರು 'ಉತ್ತರ ಕರ್ನಾಟಕವನ್ನಾದರೂ ಎಚ್ಚರಿಸಿ ನೋಡುವಾ' ಭಾವೈಕ್ಯತೆಯಿಂದ ಇಡೀ ಕರ್ನಾಟಕದಲ್ಲಿ ಹೊಸ ಚೇತನದ ವಾತಾವರಣವನ್ನು ನಿರ್ಮಿಸುವಾ ಎಂಬ ಉದ್ದೇಶದಿಂದ ೧೯೯೧ರಲ್ಲಿ ಹಳೆ ಮೈಸೂರಿನವರ ಪೈಕಿ ಎಚ್.ಡಿ. ದೇವೇಗೌಡರಿಗೆ ಇಡೀ ಕರ್ನಾಟಕದ ದೃಷ್ಟಿ ಇರಬಹುದೆಂಬ ಕಲ್ಪನೆಯಿಂದ ಉತ್ತರ ಕರ್ನಾಟಕದ ಸಮಸ್ಯೆಗಳು' ಕುರಿತು ಅವರಿಂದ ವಿಚಾರ ಸಂಕಿರಣ ಉದ್ಘಾಟನೆ ಮಾಡಿಸಿ ಚರ್ಚಿಸಿದೆವು. ಅವರು ಇದರ ಎಳೆಯನ್ನು ಹಿಡಿದು ೯೨ರಲ್ಲಿ 'ಉತ್ತರ ಕರ್ನಾಟಕದ ರೇಲ್ವೆ ಕೊರತೆಗಳ ಕುರಿತು ನಮ್ಮನ್ನು ಸಮಾವೇಶ ಮಾಡಿಕೊಂಡು ಬೃಹತ್ ರೈಲಿಯನ್ನು ಹುಬ್ಬಳ್ಳಿಯಲ್ಲಿ ಮಾಡಿ ಉತ್ತರ ಕನಾಟಕದ ಜನರ ಕಣ್ಣಲ್ಲಿ ಮಣ್ಣೆರೆಚಿದರು. ಕಾರಣ ಅವರು ಮುಖ್ಯಮಂತ್ರಿಯಾದ ನಂತರ ಉತ್ತರ ಕರ್ನಾಟಕವನ್ನು ರೇಲ್ವೆ ವಿಷಯದಲ್ಲಿ ಮರೆತು ತಮ್ಮ ಭಾಗದ ಕಡೆಗೆ ಲಕ್ಷ್ಯ ಕ್ರೋಢೀಕರಿಸಿದರು. ಅರ್ಥಾತ್ ಅವರೂ ಹಳೇ ಮೈಸೂರಿನವರಂಥವರು. ಮುಂದೆ ಉತ್ತರ ಕರ್ನಾಟಕದ ನೆಲ-ಜಲ ಕುರಿತು ಇವರ ಹೇಳಿಕೆ ಬಳಕೆಯಲ್ಲಿ ಬರದೇ, ಗಳಿಕೆಯಾಗದೆ ಭೇದಭಾವದ ಮೊಳಕೆಯಿಂದ ಗಿಡ-ಮರ ಆಗಿ ಬೆಳೆಯಹತ್ತಿದುದು ತೆರೆದ ಪುಸ್ತಕವಾಗಿದೆ. ಆದ್ದರಿಂದ ಇವರಿಂದ ಉತ್ತರ ಕರ್ನಾಟಕವನ್ನು ಬೆಳೆಸುವುದು ಆಗುವುದಿಲ್ಲವಾದ್ದರಿಂದ ಇಡೀ ಕರ್ನಾಟಕವನ್ನು ಉಳಿಸುವುದು ಶಕ್ಯವೇ ಇಲ್ಲ.

ಉತ್ತರ ಕರ್ನಾಟಕದವರೇ ಉತ್ತರ ಕರ್ನಾಟಕವನ್ನು ಉಳಿಸಬಲ್ಲರಲ್ಲದೇ ಇಡೀ ಕರ್ನಾಟಕವನ್ನೂ ಉಳಿಸುವ ರಕ್ಷಿಸುವ ಜವಾಬ್ದಾರಿ ಹೊರಲೇಬೇಕಾಗಿದೆ. ಎಚ್.ಕೆ. ಪಾಟೀಲರಂಥ ಧೀಮಂತ ವೀರರು ಇಲ್ಲದೆ ಇಲ್ಲ. ಅವರಿಗೆ ಉಳಿದವರು ಗಂಭೀರರಾಗಿ ಕೂಡಬೇಕಾಗಿದೆ. ಪ್ರತಿಭೆ, ರಾಜಕೀಯ ದೂರಗಾಮಿತನ ಧೈರ್ಯ ಅಭ್ಯಾಸ ಪ್ರಭಾವವುಳ್ಳ ಎಂ.ಪಿ. ಪ್ರಕಾಶನಂಥವರು ಕತ್ತಲೆಯಿಂದ ಬೆಳಕಿಗೆ ಬರಬೇಕಾಗಿದೆ.

ಹಿಂದಕ್ಕೆ ರಾಮದುರ್ಗ ದುರಂತದ ನಂತರ ಉತ್ತರ ಕರ್ನಾಟಕದವರು ಯಜಮಾನ ನಿಜಲಿಂಗಪ್ಪನವರನ್ನು ಆಮಂತ್ರಿಸಿ ಉತ್ತರ ಕರ್ನಾಟಕದ ದೀಕ್ಷೆ ಕೊಟ್ಟು ಅವರನ್ನೇ ಏಕೀಕರಣ ರಾಜ್ಯದ ಪ್ರಥಮ ಮುಖ್ಯಮಂತ್ರಿಗಳನ್ನಾಗಿ

ಮಾಡಿದರು. ಈಗ ಉತ್ತರ ಕರ್ನಾಟಕದ ಮುಂದೆ ಅಂಥ ನೆರವಿನ ಪ್ರಶ್ನೆ ಉದ್ಭವಿಸಲು ಶಕ್ಯವೇ ಇಲ್ಲ. ತನ್ನ ಕಾಲ ಮೇಲೆ ನಿಲ್ಲುವ ಸಾಕಷ್ಟು ಬಲ ಉತ್ತರ ಕರ್ನಾಟಕದಲ್ಲಿದೆ. ಇದರ ಮುಂಚೂಣಿಯಾಗಿ ಉತ್ತರ ಕರ್ನಾಟಕ ಅಭಿವೃದ್ಧಿಪರ ಹೋರಾಟ ಸಮಿತಿ ಟೊಂಕ ಕಟ್ಟಿ ನಿಂತಿದೆ. ಆದರೆ 'ಉತ್ತರ ಕರ್ನಾಟಕದ ಕೆಲವು ಧುರೀಣರು ಇನ್ನೂ ದ್ರೌಪದಿ ವಸ್ತ್ರಾಪಹರಣ ಕಾಲಕ್ಕಿದ್ದ ಹೇಡಿ ಮೂಕ ಪಾಂಡವರಂತಿದ್ದಾರೆ. ಕೆಲವು ಧುರೀಣರಿಗೆ ಶ್ರೀ ಹೊಂಬಳ ಏಕೆ? ಅನ್ನುವ ಕೈಲಾಗದವನಿಗೆ ನಾಲಿಗೆಯಷ್ಟೇ ಸಲಿಗೆ' ಕೆಲಸವು ಮೈಲಿಗೆ ಎಂಬಂತೆ ಇದ್ದಾರೆ. ಹೊಂಬಳರು ತ್ರಿಕರಣ ಪೂರ್ವಕವಾಗಿ ಎಚ್ಚರಗೊಳಿಸಿದ್ದಾರೆ. ಕೆಲವರು ಪುಟ್ಟಪ್ಪ ಯಾಕೆ ಅನ್ನುವವರು ಇದ್ದಾರೆ. ಪುಟ್ಟಪ್ಪನಂಥವರು ಮತ್ತೆ ಹುಟ್ಟಿ ಬರಲೆಂದು ಅಂಥವರಿಗೆ ಗಟ್ಟಿಯಾಗಿ ಹೇಳಬೇಕಾಗಿದೆ. ಗುಡುಗಿನಿಂದ ಮೋಡ ಕರಗಿಸುವ ಶಸ್ತ್ರ ಬೇರೆ ಯಾರಲ್ಲಿದೆ. ಈಗ ಉತ್ತರ ಕರ್ನಾಟದ ಯುವಕರು ಇಡೀ ಕರ್ನಾಟಕವನ್ನು ಉಳಿಸುವ ಪಣ ತೊಟ್ಟಿದ್ದು ನವ ಕರ್ನಾಟಕದ ರಾಜಧಾನಿಯನ್ನೂ ಮುಂದಿನ ಮುಖ್ಯಮಂತ್ರಿಯನ್ನೂ ನಿರ್ಧರಿಸಿದಂತೆ ಕಾಣುತ್ತದೆ. ಒಂದು ವೇಳೆ ಉತ್ತರ ಕರ್ನಾಟಕವು ಮುಂದಾಗದಿದ್ದರೆ ಎಳೆದುಕೊಂಡು ಬರುವಷ್ಟು ಅವರಲ್ಲಿ ನಾಡು-ನುಡಿ ಕುರಿತು ಕಾಳಜಿ ಕಾಡಹತ್ತಿದೆ. ಆದ್ದರಿಂದ ಉತ್ತರ ಕರ್ನಾಟಕವು ಎಚ್ಚರಗೊಳ್ಳಲೇಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ."

ಕನ್ನಡದ ಕೂಲಿ

* ೨೮-೧೨-೧೯೯೫ ರಂದು ರಾಮ ಜಾಧವರು ತಮ್ಮ ಭಾವನೆಗಳಿಗೆ ಕೊಟ್ಟ ಶಬ್ದಚಿತ್ರವಿದು.

# ಅರ್ಧನಾರೀ ನಟೇಶ್ವರ

ಧಾರವಾಡಕ್ಕಂದರ
ಅರ್ಧನಾರೀನಟೇಶ್ವರ
ನೀವೇನಾದರೆ ತಿಳಿಕೊಂಡೀರಂತ
ಹೇಳ್ತಿನಿ ಸವಿಸ್ತಾರ ನನ್ನತರ!

ಶಾಲ್ಮಲೆಯಾದಳಿಲ್ಲೇ ಗುಪ್ತ!
ಸೋಮೇಶ್ವರನಾದನಲ್ಲೇ ತಪ್ತ
ಬಂದಾಗ ಮಂಜುನಾಥನ ಪುತ್ರ
ಆಯಿತು ಶಿಕ್ಷಣದ ತೀರ್ಥಕ್ಷೇತ್ರ!
ಅಲ್ಲಿಯವರೆಗೆ ನಡೆದಿತ್ತು ವ್ರತ
ಅರ್ಧನಾರೀನಟೇಶ್ವರಕೃತ!

ಅತ್ತಿಕೊಳ್ಳದೆತ್ತರ ಯುನಿವರ್‌ಸಿಟಿ
ಅಲ್ಲಿಯೇ ಕನ್ನಡಕ್ಕಿದೆ ಪಾವರ್ಟಿ!
ಎತ್ತಿನಗುಡ್ಡದುದ್ದ ಅನಿಮಲ್ ಕಂಟ್ರಿ
ಈಗಾಗೇದ ಅಗ್ರಿಕಲ್ಚರಲ್ ಸಿಟಿ
ನಡುವೆ ವಿದ್ಯಾವರ್ಧಕ ಸಂಘದ ಪ್ಯಾಟಿ
ವಿದ್ಯೆಗಿದ್ದ ಕಟ್ಟೆ ಬುದ್ಧಿ ಸಿಕ್ಕಾಪಟ್ಟೆ!

ಮಲೆನಾಡಿನ ಮಳೆ
ಬೆಳವಲದ ಬೆಳೆ
ಎರಡೂ ಕೂಡಿದರೆ ಕಳೆ
ಆದರೆ ಮುನಸಿಪಾಲ್ಟಿ ಕೊಳೆ!

ಮೃತ್ಯುಂಜಯ ತುಳಿದ ಮಣ್ಣ
ಹಾಕುವಾಗ ಹೊಟ್ಟೆಗೆ ಅನ್ನ
ದಾಸೋಹದಣ್ಣ ಬಸವಣ್ಣ
ಬಂದಾಗಷ್ಟೇ ಶ್ರಾವಣದ ಬಣ್ಣ!

ಇದ್ದರೂ ಅದ್ವೈತದ ಮಾಯೆ
ಹೊಚ್ಚೆ ಬಿಟ್ಟಿದ್ದು ದ್ವೈತದ ಛಾಯೆ
'ಪೂಜ್ಯಾಯಾ ರಾಘವೇಂದ್ರಾಯ
ಭಜತಾಂ ಕಲ್ಪವೃಕ್ಷಾಯ!'

ಆದ್ದರಿಂದ ಬಂಧುಗಳೇ
ಶಿವದಾರದಲ್ಲಿದೆ ಶಿವನಗಂಟು
ಜನಿವಾರಕ್ಕೆ ತಪ್ಪಿದ್ದಲ್ಲ ಬ್ರಹ್ಮಗಂಟು
ಈಗುಡುದಾರದಲ್ಲಿದೆ ಕೃಷ್ಣನ ನಂಟು
ಎಲ್ಲ ರಾಜಕಾರಣದ ಅಂಟುಗಂಟು
ಸೊಂಟಕ್ಕೆ ಚುಚ್ಚುತ್ತಾ ಎಂಟೆಂಟು ದಂಟು
ಹೊಡಕೋತ ಪಮೇಶಾ ಏನಾರೆ ಪಂಟು!

ಸದಾ ಇದ್ದರೂ ಕವಿಗಳ ಕರದಂಟು
ಅಂಬಿಕಾತನಯದತ್ತರ ಪೇಟೆಂಟು
ಪ್ರಸಿದ್ಧವಾದದ್ದು ಧಾರವಾಡ ಪೇಢೆ
ಕಣ್ಮುಂದೆ ಇದ್ದರೂ ಸಾಹಿತಿಗಳ ವಾಡೆ!

ಕನ್ನಡದ ಎತ್ತರ
ಧಾರವಾಡದ ಹತ್ತಿರ
ಏಕೀಕರಣದಾಗಿದ್ದ ತತ್ಪರ
ಬಾಕೀಕರಣದಾಗಿದೆ ತಾತ್ಸಾರ
ಕನ್ನಡಕ್ಕೆ ಗೋಕಾಕ ಚಳವಳಿ
ಆಗಿದ್ದರೂ ತಾಕತ್ತಿನ ಬಳವಳಿ
ಕಸಗೊಂಡರು ಇಸಗೊಂಡ ಕಂಬಳಿ
ಕಳಕಳಿಗೆ ಹತ್ತಿತು ಛಳಿ!

ಕಡಪಾ ಮೈದಾನದಾಗೀದ ದಡವಿ ಹೋಗೇದ
ಹಡಪು ಹತ್ತಿದ ಕನ್ನಡದಭಿಮಾನ
ಕಾರಣ ರಾಜಕಾರಣಕ್ಕೆ ಸಮಾಧಾನ

ಸಿದ್ದಿ ಶುದ್ಧಿ ಪ್ರಸಿದ್ಧಿ ಗುದ್ದಿ ದಾಟಿದ ಕಾಲ
ಕೈಯಲ್ಲಿ ಹಿಡಿದುಕೊಂಡು ದೋಟಿಯ ಛಲ
ಮೇಟಿಯಸುತ್ತ ಹರವಿಲ್ಲ ಕನ್ನಡದ ಫಲ....
ರಾಶೀ ಮಾಡಿ ಬಿಸಿರೊಟ್ಟಿ ತಿನ್ನುವುದ್ಯಾವ ಕಾಲ!
ಧಾರವಾಡ ಅದನ್ನು ತಿನಿಸುವುದೆಂತು?
ಮತ್ತೆ ಮತ್ತೆ ಕೊಡುತ್ತಾ ನಡೆದಾಗ
ಅರ್ಧನಾರೀನಟೇಶ್ವರನಿಗೆ ಕಂತು!

## ನೀರಿಗಾಗಿ ಮನವಿ

ಮಾನ್ಯ ಶ್ರೀ ವೈಜನಾಥ ಪಾಟೀಲರಲ್ಲಿ ವಂದನೆಗಳು. ಜನಾ ಬೇಡಿದ ಸರಕಾರ ಬಂತು. ಇದು ದೈವ, ನಮ್ಮವರು ಮಂತ್ರಿಗಳಾದರು ಇದು ಸುದೈವ.ಆದರೆ. ವಿಪುಲ ನೀರಿದ್ದರೂ ಅವಳಿ ನಗರಕ್ಕೆ ಇನ್ನು ನೀರಿನ ಪೂರೈಕೆಯಲ್ಲಿ ತೀವ್ರ ಅಭಾವ. ಇದು ಆರಿಸಿ ತಂದವರು ಹೊರಸಿಕೊಂಡ ದುರ್ದೈವ. ತಾವು ನಗರ ಪಾಲಿಕೆಯ ಮಂತ್ರಿಗಳಾದ ನಂತರವೂ ಈ ಅವ್ಯವಸ್ಥೆ ವ್ಯವಸ್ಥಿತವಾಗಿ ಮುಂದುವರೆದಿದೆ. ಇದಕ್ಕೆ ಮುಖ್ಯ ಕಾರಣ ನಗರಪಾಲಿಕೆಯ ಆಯುಕ್ತರ ಅನಾಸ್ಥೆ. ಯಾಕೆಂದರೆ ದೀರ್ಘಕಾಲದ ಕೊಳವೆಯ ಜೋಡಣೆಯಲ್ಲಿಯ ದೋಷಕ್ಕೆ ಔಷಧ ಹುಡುಕಲೇ ಇಲ್ಲ. ಮೇಲಾಗಿ ಈ ಜಿಲ್ಲೆ ಮೂವರು ಮಾನ್ಯ ಮಂತ್ರಿಗಳಲ್ಲಿ, ಇಬ್ಬರು ಹುಬ್ಬಳ್ಳಿಯಲ್ಲಿಯ ವಾಸ್ತವ್ಯ ಮುಂದುವರೆದಿದೆ. ಇಂಥ ಸ್ಥಿತಿಯನ್ನು ಕೆಳಗಿನ ಸಾಲುಗಳ ಕವಿತೆಯಲ್ಲಿ ಕಸೂತಿ ತೆಗೆದಿದ್ದೇನೆ. ಯಾಕೆಂದರೆ ನನ್ನಲ್ಲಿ ನಿಮ್ಮ ಸಂಗಡ ಯುದ್ಧ ಮಾಡುವ ದೇಹ ಬುದ್ಧಿಗಳೆರಡಕ್ಕೂ ಆಯುಷ್ಯ ಕಡಿಮೆ ಇದೆ. ಅವಳಿ ನಗರಗಳ ಜನರ ಆಯುಷ್ಯಕ್ಕೆ ತಾವು ನೀರಿನ ಮನುಷ್ಯರಾಗುತ್ತೀರೆಂದು ಪ್ರಾರ್ಥಿಸುತ್ತೇನೆ.

### ನೀರಿನಿಂದ ಉಪಾಸಿ

ಧಾರವಾಡ ಕನ್ನಡದ ಕಾವಿ
ಹುಬ್ಬಳ್ಳಿ ಕರ್ನಾಟಕದ ಕಾಶಿ
ಎರಡೂ ನೀರಿನಿಂದ ಉಪಾಸಿ
ಕಾರಣ, ನಗರ ಪಾಲಿಕಾಯುಕ್ತ ಉದಾಸಿ
ನೀರಿನ ಸರಬರಾಜು ಖಾತೆ ಸ್ಮಶಾನವಾಸಿ
ಹರಿಯುವ ನೀರಿನ ಕೊಳವೆ ದೋಷಿ
ಆದ್ದರಿಂದ ಪಾಲಿಕಾ ಪ್ರಯತ್ನ ಹುಸಿ
ನಗರಪಾಲಿಕಾ ಮಂತ್ರಿ ದೂರವಾಸಿ
ಜಿಲ್ಲೆಯ ಪಾಲಕಮಂತ್ರಿ ಜ್ಯೋತಿಷಿ
ಇಲ್ಲಿಯ ಮಂತ್ರಿಗಳು ಪ್ರವಾಸಿ
ಎಲ್ಲರ ಮುಖ್ಯಮಂತ್ರಿ ಮುಖೇಸಿ
ವಿರೋಧ ಪಕ್ಷದಲ್ಲೆಲ್ಲ ಮೊಖಾಸಿ
ಹತ್ತಿರ ರೈತರು ಅನಾಯಾಸ ಖುಷಿ
ಅವಳಿ ನಗರಕ್ಕೆ ಅರಬು ಅವನಾಶಿ
ಆದ್ದರಿಂದ ಸರಕಾರಕ್ಕೆ ಕಲ್ಲು ಎಸಿ

**ರಾಮ ಜಾಧವ**
**ಕನ್ನಡದ ಕೂಲಿ**

# ರಾಮ ಜಾಧವ

## ಸೇವೆ-ಸಾಧನೆ-ಗೌರವ

* ಜನನ : ೧೯-೨-೧೯೧೯ (ವಿಜಾಪುರ ಜಿಲ್ಲೆಯ ಕಟಗೇರಿಯಲ್ಲಿ)

* ಶಿಕ್ಷಣ : ಬಿ.ಎ.(೧೯೪೨ : ಕೊಲ್ಲಾಪುರದ ರಾಜಾರಾಮ ಕಾಲೇಜು, ಮುಂಬಯಿ ವಿಶ್ವವಿದ್ಯಾಲಯ)

* ಸೇವೆ : ಭಾರತೀಯ ಕಂದಾಯ ಇಲಾಖೆಯಲ್ಲಿ ಕೇಂದ್ರ ಅಬಕಾರಿ ಮತ್ತು ಸುಂಕ ನಿರ್ವಹಣಾ ಅಧಿಕಾರಿಯಾಗಿ ಸೇವೆ

* ಸಾಧನೆ : ೧) ೧೯೪೯-೫೦ರಲ್ಲಿ ಸ್ಥಳೀಯರನ್ನು ಸಂಘಟಿಸಿ ನಿಪ್ಪಾಣಿ ಹತ್ತಿರದ ಹಲಕರಣಿಯಲ್ಲಿ ಹೈಸ್ಕೂಲು ಸ್ಥಾಪನೆ

  ೨) ೧೯೫೧-೫೩ರಲ್ಲಿ ನಿಪ್ಪಾಣಿ ಹತ್ತಿರದ ಹುಪರಿಯಲ್ಲಿ ಹೈಸ್ಕೂಲು ಸ್ಥಾಪನೆ. ಸ್ಥಳೀಯ ಬೆಳ್ಳಿ ಆಭರಣಗಳ ವ್ಯಾಪಾರಿಗಳನ್ನು ಸಂಘಟಿಸಿ, ಅವರ ಕ್ಷೇಮಾಭಿವೃದ್ಧಿಗಾಗಿ ಸಂಸ್ಥೆಯನ್ನು ಹುಟ್ಟುಹಾಕಿದರು.

  ೩) ೧೯೫೬-೫೮ರಲ್ಲಿ ಗೋಕಾಕ ತಾಲೂಕು ಕುಂದರನಾಡಿನಲ್ಲಿ ಸ್ಥಳೀಯರ ಸ್ವಯಂ ಸೇವೆಯ ಮೂಲಕ ಸಂಪರ್ಕ ರಸ್ತೆಗಳ ನಿರ್ಮಾಣ, ಅಂಕಲಗಿಯಲ್ಲಿ 'ಕುಂದರನಾಡು ಜನತಾ ಶಿಕ್ಷಣ ಸಂಸ್ಥೆಯ' ಸ್ಥಾಪನೆ.

  ೪) ೧೯೫೯-೬೦ರಲ್ಲಿ ಗಡಿಯಲ್ಲಿ ಕನ್ನಡ ಶಾಲೆಗಳನ್ನು ಮುಚ್ಚುವ ಪ್ರಯತ್ನವು ನಿಪ್ಪಾಣಿ ನಗರಸಭೆಯಿಂದ ನಡೆದಾಗ, ಕನ್ನಡಿಗರನ್ನು ಸಂಘಟಿಸಿ ಶಾಲೆಗಳನ್ನು ಪುನರಾರಂಭಿಸಲು ಹೋರಾಟ. ನಿಪ್ಪಾಣಿಯಲ್ಲಿ ಹೈಸ್ಕೂಲು, ಕಾಲೇಜು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ.

  ೫) ೧೯೭೫-೭೬ರಲ್ಲಿ ಕೇಂದ್ರ ಅಬಕಾರ ಇಲಾಖೆಯ ನೌಕರರಿಗಾಗಿ ಹುಬ್ಬಳ್ಳಿಯಲ್ಲಿ ೨೦೦ ಮನೆಗಳನ್ನು ನಿರ್ಮಿಸುವಲ್ಲಿ ಮಹತ್ವದ ಪಾತ್ರ.

### * ಸಾಹಿತ್ಯ-ಸಾಂಸ್ಕೃತಿಕ ಸಂಘಟನೆಯಲ್ಲಿ ಸಕ್ರೀಯ ಪಾತ್ರ

೧. ಅಧ್ಯಕ್ಷ ಅಖಿಲಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಧಾರವಾಡ

೨. ಅಧ್ಯಕ್ಷ-ಕೇಂದ್ರ ಅಬಕಾರಿ ಹಾಗೂ ತೆರಿಗೆ ಇಲಾಖೆಯ ಗೃಹ ನಿರ್ಮಾಣ ಸಹಕಾರಿ ಸಂಘ

೩. ಸಂಸ್ಥಾಪಕ ಅಧ್ಯಕ್ಷ-ಜಾಗೃತ ನಾಗರಿಕ ಮಂಡಳ, ಧಾರವಾಡ

೪. ಸಂಸ್ಥಾಪಕ ಅಧ್ಯಕ್ಷ-ರಕ್ತದಾನಿಗಳ ಸಂಘ ಧಾರವಾಡ

೫. ಸಂಸ್ಥಾಪಕ ಉಪಾಧ್ಯಕ್ಷ- ಮಕ್ಕಳ ಮನೆ ಧಾರವಾಡ

೬. ಹಿಂದುಳಿದ ಅಲ್ಪಸಂಖ್ಯಾತರ ಸಂಯುಕ್ತ ಕ್ರಿಯಾ ಸಮಿತಿ-ಸಲಹೆಗಾರ

೭. ಬಂಗಾರ ಬಳಗ, (ಕೆ.ಜಿ. ಕುಂದಣಗಾರ ನೆನಪಿನ ಸಾಂಸ್ಕೃತಿಕ ಸಂಘ) ಧಾರವಾಡ ಸಂಸ್ಥಾಪಕ ಸಂಚಾಲಕ

೮. ಉಪಾಧ್ಯಕ್ಷ-ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೯. ಸಂಸ್ಥಾಪಕ ಅಧ್ಯಕ್ಷ-ಧಾರವಾಡ ಜಿಲ್ಲೆ ಮರಾಠಾ ಜಾಗೃತ ವೇದಿಕೆ

೧೦. ಸಂಸ್ಥಾಪಕ ಸಲಹೆಗಾರ-ಮರಾಠಾ ಯುವಕ ಮಂಡಳ, ಧಾರವಾಡ

೧೧. ಕಲ್ಯಾಣ ಕೂಟ (ಕಲ್ಯಾಣನಗರ ರಹವಾಸಿಗಳ ಹಿತಚಿಂತನೆ ಸಂಘ) ಧಾರವಾಡ ಸಂಸ್ಥಾಪಕ ಉಪಾಧ್ಯಕ್ಷ

೧೨. ಸಂಪಾದಕ : 'ಮಕ್ಕಳ ಮಂದಿರ' ಮಾಸಪತ್ರಿಕೆ

*** ಪ್ರಕಟಣೆಗಳು**

೧ : ಇದಿಷ್ಟೇ ಸತ್ಯ (ಕವನ ಸಂಕಲನ) ೧೯೯೩ ಸಂಕ್ರಮಣ ಪ್ರಕಾಶನ, ಧಾರವಾಡ

೨ : ಬಸವ ಪ್ರಹರ (ಬಸವ ಚಿಂತನ ಮುಕ್ತಕಗಳು) ೧೯೯೪ ಮಕ್ಕಳ ಮನೆ, ಧಾರವಾಡ

*** ಗೌರವ ಪುರಸ್ಕಾರಗಳು**

೧ : ಅಬಕಾರಿ ದಾಳಿಯ ಯಶಸ್ವಿ ಕಾರ್ಯಾಚರಣೆಗಳಿಗಾಗಿ ಇಲಾಖೆಯಿಂದ ಹಲವಾರು ಪುರಸ್ಕಾರಗಳು

**ಸಾರ್ವಜನಿಕ ಗೌರವಗಳು**

೧ : ೧-೧೧-೧೯೯೨ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯಿಂದ ಗೌರವ ಸಮ್ಮಾನ

೨ : ೧-೧೨-೧೯೯೨ ಗೌರವ ಸನ್ಮಾನ ಪತ್ತೇದಾರಿ ಕಾದಂಬರಿಗಳ ಶತಮಾನೋತ್ಸವ ಸಂದರ್ಭದಲ್ಲಿ

೩ : ೧೭-೨-೧೯೯೩ : ೭೫ನೇ ಹುಟ್ಟು ಹಬ್ಬದಂದು ಧಾರವಾಡ ಸಾಹಿತ್ಯಾಸಕ್ತರಿಂದ ಗೌರವ ಅಭಿನಂದನೆ

೪ : ೧೧-೮-೧೯೯೩, ಹುಬ್ಬಳ್ಳಿಯ ಲಯನ್ಸ್ ಕ್ಲಬ್‌ದಿಂದ ಗೌರವ ಸಮ್ಮಾನ

೫ : ೮-೭-೧೯೯೪, ರಾಜ್ಯ ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿ ವತಿಯಿಂದ ಸನ್ಮಾನ

೬ : ೧೫-೯-೧೯೯೪ 'ದೆಹಲಿ ಕನ್ನಡಿಗ' ಸಂಸ್ಥೆಯಿಂದ ಗೋವೆಯ ಪಣಜಿಯಲ್ಲಿ ಸನ್ಮಾನ

೭ : ೧-೧೧-೧೯೯೪ ಹುಬ್ಬಳ್ಳಿಯ ದಕ್ಷಿಣ ಮಧ್ಯೆ ರೇಲ್ವೆಯ ಕನ್ನಡ ಸಂಘದಿಂದ ಸನ್ಮಾನ

೮ : ೧-೧೨-೧೯೯೪ ಇಳಕಲ್ಲಿನಲ್ಲಿ ಪೂಜ್ಯ ಮಹಾಂತ ಸ್ವಾಮಿಗಳಿಂದ ಸನ್ಮಾನ

೯ : ೪-೪-೧೯೯೫ ಬೀದರಿನ ಬಸವ ಬಳಗದಿಂದ ಸನ್ಮಾನ